ಸಂಪುಟ: 33
ಸಂಚಿಕೆ: 19
ಬೆಲೆ ರೂ. 8.00
ಮಂಗಳೂರು

ಸಜ್ಜನರ ಸಂಗಾತಿ
www.sanmarga.com

# ಸನ್ಮಾರ್ಗ ವಾರಪತ್ರಿಕೆ

2010 ಜುಲೈ 25 – 31
1431 ಶಅಬಾನ್ 11 – 17




# ಗಣಿ ಮರೆಸಲು ಗೋಮಸೂದೆ ಮಂಡಿಸಲಾಯಿತೇ?



ಉಭಯ ಸದನಗಳು ಕಲಹಗ್ರಸ್ತವಾಗಿರುವಾಗ ಕೆಲವು ಮಸೂದೆಗಳನ್ನು ಸರಕಾರ ಪಾಸು ಮಾಡಿಸಿ ಕೊಂಡಿರುವುದು ಪ್ರಜಾಹಕ್ಕಿನ ಮೇಲೆ ಬಂದೆರಗಿದ ಅಪಾಯವನ್ನು ಎತ್ತಿ ಹಿಡಿದಿದೆ. ಅದರಲ್ಲಿಯೂ ಮುಖ್ಯವಾಗಿ ಗೋ ಮಸೂದೆಯ ಕುರಿತು ರಾಜ್ಯದಾದ್ಯಂತ ಪ್ರತಿಭಟನೆ, ಹೋರಾಟಗಳು ನಡೆಯುತ್ತಿದ್ದಾಗ್ಯೂ ಚಿಕ್ಕ ಚರ್ಚೆಯೂ ನಡೆಸದೆ ಅಂಗೀಕಾರವನ್ನು ಪಡೆದುಕೊಂಡಿರುವುದಂತೂ ಅದನ್ನು ಆಹಾರವಾಗಿ ಬಳಸುವವರ ಮುಂದೆ ದುರಂತವನ್ನು ತೆರೆದಿಟ್ಟು, ಸೇಡಿನ ಮನೋಭಾವವನ್ನು ಪ್ರಕಟಿಸಿದೆ ಎನ್ನಬೇಕಾಗುತ್ತದೆ. ಅಲ್ಲದಿದ್ದರೆ ಒಂದು ಸರಕಾರಕ್ಕೆ ತನ್ನ ಪ್ರಜೆಗಳು ಏನು ತಿನ್ನಬೇಕು, ಏನು ತಿನ್ನಬಾರದೆಂಬುದಕ್ಕಿಂತ ಅವರ ಸುಖ-ಸೌಖ್ಯಗಳೇ ಪ್ರಾಮುಖ್ಯವಾಗಬೇಕಿತ್ತು. ಆದರೆ ಈ ಸರಕಾರಕ್ಕೆ ಪ್ರಜೆಗಳ ಸುಖ-ಸೌಖ್ಯಕ್ಕಿಂತಲೂ ತನ್ನ ಹಠಮಾರಿತನವನ್ನು ಹೇರುವುದೇ ಪ್ರಾಮುಖ್ಯವಾಗಿದೆ. ಗೋವು ಇತ್ಯಾದಿ ಜಾನುವಾರುಗಳನ್ನು ಕೂಡ ಮುಟ್ಟಬಾರದೆಂದು ಶಾಸನ ಮಾಡಿದರೆ ಅದರಿಂದ ಅವರಿಗೆ ಸುಖವೇನು, ಸಂಕಷ್ಟವೇ ಆಗುತ್ತದೆ. ಹಾಗಿರುವಾಗ ಈ ವರ್ಗದ ಜನರ ಮೇಲೆ ಸರಕಾರ ನೇರವಾಗಿ ಸೇಡು ತೀರಿಸಿಕೊಳ್ಳುತ್ತಿದೆ ಎನ್ನಬಹುದು.

ವಿಧಾನ ಸಭೆ ಮತ್ತು ವಿಧಾನ ಪರಿಷತ್ತುಗಳಿರುವುದೇ ಪ್ರಜೆಗಳ ಆಶೋತ್ತರಗಳನ್ನು ಚರ್ಚಿಸಿ ನಿರ್ಧರಿಸುವುದಕ್ಕೆ. ಆದರೆ ಅಕ್ರಮ ಗಣಿ ವಿಚಾರದಲ್ಲಿ ಪ್ರತಿಪಕ್ಷಗಳು ಪ್ರತಿಭಟನೆ ನಿರತವಾದಾಗ ಸ್ಪೀಕರ್ ಕಲಾಪಕ್ಕೆ ಚಾಲನೆ ನೀಡುತ್ತಾರೆ. ಗೋವಿನ ಮಸೂದೆ ಸಹಿತ 9 ಮಸೂದೆಗಳನ್ನು ಧ್ವನಿ ಮತಕ್ಕೆ ಹಾಕುತ್ತಾರೆ. ವಿರೋಧ ಪಕ್ಷಗಳನ್ನು ಕಡೆಗಣಿಸಿ, ಆಡಳಿತ ಪಕ್ಷದವರ ಧ್ವನಿಯನ್ನು

■ ಅರಫಾ ಮಂಚಿ ■

ಮಾತ್ರ ಗುರುತಿಸಿ 'ಮಸೂದೆಗಳು ಧ್ವನಿಮತದಿಂದ ಅಂಗೀಕಾರಗೊಂಡಿದೆ' ಎಂದು ಘೋಷಿಸುತ್ತಾರೆ. ಅಲ್ಪಸಂಖ್ಯಾತರ ಆಹಾರ ಕ್ರಮಕ್ಕೆ ವ್ಯಾಪಕ ಧಕ್ಕೆ ತಂದೊಡ್ಡುವ ಮತ್ತು ರೈತಾಪಿ ವರ್ಗಕ್ಕೆ ನಿರುಪಯುಕ್ತವಾದ ಗೋ ತಳಿಗಳನ್ನು ಸಾಕುವ ಹೆಚ್ಚುವರಿ ಹೊರೆಯನ್ನು ಹೊರಿಸುವುದು ಮಾತ್ರವಲ್ಲ, ರಾಜ್ಯದಾದ್ಯಂತ ಪ್ರತಿಭಟನೆಗಳು ನಡೆಯುತ್ತಿರುವ ಒಂದು ಮಸೂದೆ ಕೂಡಾ ಅದರಲ್ಲಿದೆ. ಆ ಕುರಿತು ಸದನದಲ್ಲಿ ಚರ್ಚೆಯಾಗಬೇಕೆಂದು ಅನಿಸದಿರುವ ಸ್ಪೀಕರ್‌ರ ನಿಲುವು ಖಂಡಿತವಾಗಿಯೂ ಸಂದೇಹಗಳನ್ನು ಸೃಷ್ಟಿಸುತ್ತಿದೆ.

➨ ಕೊನೆಯ ಪುಟಕ್ಕೆ

## ಕೈ ಕಡಿದು, ತಲೆ ಹಾರಿಸಿ ಸಹಿಷ್ಣು ಎನ್ನಿಸಿಕೊಳ್ಳಲು ಸಾಧ್ಯವೇ?

■ ಏ.ಕೆ. ಕುಕ್ಕಿಲ

ತನ್ನನ್ನು ನಿಂದಿಸಿದ, ತನ್ನ ಕೊರಳಿಗೆ ಸತ್ತ ಪ್ರಾಣಿಯ ಅಸ್ಥಿಪಂಜರವನ್ನು ಹಾಕಿದ, ಸಾಮೂಹಿಕ ಬಹಿಷ್ಕಾರ ಹಾಕಿ ಒಂಟಿಯಾಗಿಸಿ ಹಸಿವೆಗೆ ದೂಡಿದ, ಹುಟ್ಟಿದೂರನ್ನು ಬಿಟ್ಟು ಮದೀನಕ್ಕೆ ವಲಸೆ ಹೋಗುವಂತೆ ನಿರ್ಬಂಧಿಸಿದ, ಕಲ್ಲೆಸೆದ ಅದೇ ಮಕ್ಕಾದ ಮಂದಿ ಪ್ರವಾದಿ ಮುಹಮ್ಮದ್‌ರಿಗೆ(ಸ) ಒಂದು ಪತ್ರ ಬರೆಯುತ್ತಾರೆ,

"ಮುಹಮ್ಮದ್,

ಮಕ್ಕಾದ ಮಂದಿಗೆ ಒಂದು ಕಾಳು ಆಹಾರ ಧಾನ್ಯವನ್ನೂ ನೀಡಬಾರದೆಂದು ಯಮಾಮ ದೇಶದ ನಾಯಕ ಸುಮಾಮ, ತನ್ನ ಜನರಿಗೆ ಆದೇಶಿಸಿದ್ದಾರೆ. ನಿಮ್ಮ ಸಂದೇಶವನ್ನು ಒಪ್ಪಿ ಮುಸ್ಲಿಮ್ ಆದ ಬಳಿಕವೇ ಅವರು ಈ ತೀರ್ಮಾನ ಕೈಗೊಂಡಿದ್ದಾರೆ. ನಾವೀಗ ತೀವ್ರ ಸಂಕಟದಲ್ಲಿದ್ದೇವೆ. ಆದ್ದರಿಂದ ಆ ಆದೇಶವನ್ನು ಹಿಂತೆಗೆದುಕೊಳ್ಳುವಂತೆ ಸುಮಾಮರಲ್ಲಿ ನೀವು ಕೇಳಿಕೊಳ್ಳಬೇಕು."

ನಿಜವಾಗಿ ಪತ್ರದ ಪ್ರತಿ ಅಕ್ಷರದ ಹಿಂದೆಯೂ ದ್ವೇಷದ, ಹಿಂಸೆಯ, ವ್ಯಂಗ್ಯದ ಅಸಂಖ್ಯ ಘಟನೆಗಳಿವೆ. ಮಕ್ಕಾದಲ್ಲಿ ಪ್ರವಾದಿ ಮುಹಮ್ಮದ್‌ರನ್ನು ಯಾವ ಪರಿ ಹಿಂಸಿಸಲಾಗಿತ್ತೆಂದರೆ, ಗುಹೆಯೊಂದರಲ್ಲಿ 3 ದಿನಗಳ ಕಾಲ ಅಡಗಿ ಕೂತು, ಕದ್ದು ಮುಚ್ಚಿ ಅವರು ಮದೀನಕ್ಕೆ ಹೋಗಬೇಕಾಯಿತು. ಆದರೂ ಮಕ್ಕಾದ ಮಂದಿ ಅವರನ್ನು ಸುಮ್ಮನೆ ಬಿಡಲಿಲ್ಲ. ಮದೀನಾದ ಮೇಲೆ ದಂಡೆತ್ತಿ ಹೋದರು. ಬದ್ರ್, ಉಹ್ದ್, ಅಹ್‌ಝಾಬ್ ಮುಂತಾಗಿ ಸರಣಿ ಯುದ್ಧಗಳನ್ನು ಅವರ ಮೇಲೆ ಹೇರಿದರು. ಅವರ ಮುಂಭಾಗದ ಹಲ್ಲುಗಳನ್ನು ಉದುರಿಸಿದರು. ಮನೆಯಿಂದ ಹೊರಬಂದ ತಕ್ಷಣ ಅವರನ್ನು ಹೀಯಾಳಿಸುವುದಕ್ಕೆ; ವ್ಯಂಗ್ಯ, ಕಟು



ಮಾತುಗಳಿಂದ ಚುಚ್ಚುವುದಕ್ಕೆ ಪುಂಡರನ್ನು ನೇಮಿಸಿದರು. ಚಿಕ್ಕಪ್ಪ ಸಹಿತ ಹತ್ತಿರದ ಸಂಬಂಧಿಕರನ್ನು ಕೊಂದರು. ಇಷ್ಟೊಂದು ಕ್ರೂರ ಹಿನ್ನೆಲೆಯಿರುವ ಸಮಾಜವೊಂದು ಬರೆದ ಪತ್ರಕ್ಕೆ ಪ್ರವಾದಿ ಮುಹಮ್ಮದರು ಹೇಗೆ ಪ್ರತಿಕ್ರಿಯಿಸಬೇಕಾಗಿತ್ತು? ಪತ್ರವನ್ನು ಹರಿದು ಹಾಕಿ, 'ಕ್ರಿಯೆಗೆ ಪ್ರತಿಕ್ರಿಯೆ' ಎಂದು ಸಂತೋಷಪಡಬೇಕಿತ್ತಲ್ಲವೇ? ಸಿಹಿ ಹಂಚಬೇಕಿತ್ತಲ್ಲವೇ? ಇಷ್ಟಕ್ಕೂ ಮಕ್ಕಾದ ಮಂದಿ ಪ್ರವಾದಿ ಮುಹಮ್ಮದ್‌ರನ್ನು ಕ್ರೂರವಾಗಿ

(3ನೇ ಪುಟಕ್ಕೆ)

## ‘ಗಡಿ’ ‘ಬಿಡಿ’

ಕೊಲ್ಹಾಪುರದಲ್ಲಿ ಝೀ ಟೀವಿಯ ಚರ್ಚೆಗೆಂದು ಹೋದ ಕನ್ನಡ ಹಿತರಕ್ಷಣಾ ವೇದಿಕೆ ಮುಖಂಡರನ್ನು ಥಳಿಸಿ ಮಸಿ ಬಳಿದಿರುವ ಘಟನೆಯು ಶಿವಸೇನೆಯ ಹತಾಶ ರಾಜಕೀಯವನ್ನು ಸ್ಪಷ್ಟಪಡಿಸುತ್ತದೆ. ಒಂದರ್ಥದಲ್ಲಿ ಭಾಷೆಯನ್ನು ಹೆಸರಿಸಿ ಅಮಾಯಕರ ಕೈ ಕಾಲು ಕಡಿದಿರುವ ಪಕ್ಷ ಅದು. ಭೂಮಿ, ಗಡಿ, ಭಾಷೆಗಳೆಲ್ಲ ಹೀಗೆ ಪರಸ್ಪರ ಆಕ್ರಮಿಸುವ ವಿಚಾರವಾದರೆ ಈ ಭಾರತ ಎಷ್ಟು ತುಂಡುಗಳಾಗಿ ಸಿಡಿಯಬೇಕು ಎಂಬ ಪ್ರಶ್ನೆಗೆ ಉತ್ತರ ಯಾರಲ್ಲಿದೆ? ಈ ಹಿಂದೆ ಬೆಳಗಾವಿಯ ವಿಜಯ ಮೋರೆಗೆ ಮಸಿ ಬಳಿದು ಅಂಗಿ ಹರಿದು ಹಾಕಿ ನಮ್ಮ ಭಾಷಾ ಪ್ರೇಮವನ್ನು ತೋರಿಸಿದ್ದುಂಟು! ಮಹಾರಾಷ್ಟ್ರದ ಬಸ್ಸುಗಳಿಗೆ ಇಲ್ಲಿಯೂ ಕರ್ನಾಟಕದ ಬಸ್ಸುಗಳಿಗೆ ಅಲ್ಲಿಯೂ ಕಲ್ಲೆಸೆದು ಹಾನಿ ಮಾಡಿದ್ದುಂಟು. ಕಬ್ಬಿಣದಿಂದ ನಿರ್ಮಿಸಿರುವ ಬಸ್ಸುಗಳಿಗೆ ಭಾಷೆ, ಗಡಿ ಇತ್ಯಾದಿ ಯಾವುದೂ ಗೊತ್ತಿಲ್ಲವೆಂಬಷ್ಟು ಕೂಡಾ ನಮ್ಮ ಭಾಷಾ ಪ್ರೇಮಕ್ಕೆ, ಗಡಿ ವಾದಗಳಿಗೆ ಅರ್ಥವಾಗದೇ ಹೋದುದು ಇಂದಿನ ದುರಂತವೆಂದು ಕರೆಯಬೇಕಾಗುತ್ತದೆ.

ಹಾಗೆ ಹೇಳುವುದಾದರೆ, ಬೆಳಗಾವಿ ಕರ್ನಾಟಕಕ್ಕೆ ಸೇರಿದ್ದು ಅಥವಾ ಮಹಾರಾಷ್ಟ್ರಕ್ಕೆ ಸೇರಿದ್ದು ಎಂದು ಜಂಗೀ ಕುಸ್ತಿಗಿಳಿದವರಿಗೆ ಅದಿನ್ನೂ ಭಾರತದಲ್ಲಿಯೇ ಇದೆ ಎಂಬಂಶ ಮರೆತಿರುವುದೇ ಸಮಸ್ಯೆಯಾಗಿದೆ. ಅದಕ್ಕಿಂತಲೂ ಮುಖ್ಯವಾಗಿ ಗಡಿ, ಭಾಷೆ ಸಮಸ್ಯೆಗಳನ್ನು ಕೋಮು ವಿಷದಂತೆ ಬೆಳೆಸಿ ಉಳಿಸಿಕೊಂಡವರು ರಾಜಕಾರಣಿಗಳೆಂಬ ಅಂಶವು ಈ ಕುಸ್ತಿಯ ನಡುವೆ ಮರೆತುಹೋದ ಇನ್ನೊಂದು ವಿಪರ್ಯಾಸವಾಗಿದೆ. ಕಳೆದ 50 ವರ್ಷಗಳಿಂದ ಬೆಳಗಾವಿ ಮಹಾರಾಷ್ಟ್ರದ್ದೆಂದು ವಾದಿಸುತ್ತಾ ಬಂದಿರುವ ಮಹಾರಾಷ್ಟ್ರ ಏಕೀಕರಣ ಸಮಿತಿಯು ಬೆಳೆದದ್ದೇ ಗಡಿವಾದ, ಭಾಷಾವಾದಗಳಿಂದ. ಬೆಳಗಾವಿಯ ಮುನ್ಸಿಪಾಲಿಟಿಯನ್ನು ನಿಯಂತ್ರಣದಲ್ಲಿಟ್ಟುಕೊಂಡದ್ದು, ಕರ್ನಾಟಕದ ವಿಧಾನ ಸಭೆಗೆ ಶಾಸಕರನ್ನು ಗೆಲ್ಲಿಸಿದ್ದು ಒಟ್ಟಿನಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡದ್ದೇ ಮರಾಠಿ ವಾದದಿಂದ. ಕಳೆದ ಚುನಾವಣೆಯಲ್ಲಿ ಶಿವಸೇನೆ ಮಹಾರಾಷ್ಟ್ರದಲ್ಲಿ ಹೀನಾಯವಾಗಿ ಪರಾಭವಗೊಂಡಿದೆ. ಅದು ಒಬ್ಬ ಶಾಸಕನನ್ನೂ ಗೆಲ್ಲಿಸಲಾಗದೇ ಮುನ್ಸಿಪಾಲಿಟಿಯನ್ನು ಕಳಕೊಂಡು ಹತಾಶೆಗೀಡಾಗಿದೆ. ಹೀಗಾಗಿ ಅದು ಗಡಿ ವಿವಾದವನ್ನು ಬೃಹತ್ ಮಟ್ಟದಲ್ಲಿ ಸ್ಫೋಟಿಸುವುದಕ್ಕೆ ಸಂಚು ಹೆಣೆದಿದೆ ಎನ್ನಬಹುದು.

(ಕೊನೆಯ ಪುಟಕ್ಕೆ)

## ನಿರೀಕ್ಷಿಸಿರಿ.....

ಮಾನವ ಜನಾಂಗಕ್ಕೆ ಸನ್ಮಾರ್ಗದರ್ಶಕವಾದ ಸತ್ಯಾಸತ್ಯ ವಿವೇಚಕ ಗ್ರಂಥ ಕುರ್‌ಆನ್ ಅವತೀರ್ಣವಾದ ರಮಝಾನ್ ಆಗತವಾಗುತ್ತಿದೆ. ಅದಕ್ಕೆ ಬೇಕಾದ ಪೂರ್ವ ತಯಾರಿಯೊಂದಿಗೆ ರಮಝಾನ್‌ನ ವಿಶೇಷತೆ, ಕುರ್‌ಆನ್‌ನ ಪ್ರಾಧಾನ್ಯತೆ ಸಾರುವ...

**ರಮಝಾನ್ ವಿಶೇಷಾಂಕ**

ನಿಮ್ಮ ಪ್ರತಿಗಳನ್ನು ಇಂದೇ ಕಾದಿರಿಸಿರಿ.
ಹೆಚ್ಚಿನ ಪ್ರತಿಗಳು ಬೇಕಾದ ಏಜೆಂಟರು ಕೂಡಲೇ ತಿಳಿಸಿರಿ.

ವ್ಯವಸ್ಥಾಪಕ: 9449591561
E-mail: sanmargamatter@gmail.com

ಪರಮ ದಯಾಮಯ-ಕರುಣಾಳುವಾದ ಅಲ್ಲಾಹನ ನಾಮದಿಂದ

## ಸಂಪಾದಕೀಯ

# ಆರೆಸ್ಸೆಸ್ ಮುಸ್ಲಿಮರ ಕ್ಷಮೆ ಯಾಚಿಸಲಿ

ಭಯೋತ್ಪಾದನಾ ಕೃತ್ಯಗಳಲ್ಲಿ ಆರೆಸ್ಸೆಸ್‌ನ ಪಾತ್ರವನ್ನು ಹೆಡ್‌ಲೈನ್ಸ್ ಟುಡೇ ಟಿ.ವಿ. ಚಾನೆಲ್ ವೀಡಿಯೋ-ಆಡಿಯೋ ದಾಖಲೆ ಸಹಿತ ಬಹಿರಂಗಪಡಿಸಿದ್ದನ್ನು ಆರೆಸ್ಸೆಸ್, ದೊಣ್ಣೆ-ಆಯುಧಗಳ ಮೂಲಕ ಸ್ವೀಕರಿಸಿದೆ. ಹೆಡ್‌ಲೈನ್ಸ್ ಟುಡೇಯ ದೆಹಲಿ ಕಚೇರಿಯನ್ನು ಜುಲೈ 16ರಂದು ಆರೆಸ್ಸೆಸ್ ಕಾರ್ಯಕರ್ತರು ಪುಡಿ ಮಾಡಿದ್ದಾರೆ. ಯಾವುದು ಹಿಂಸೆ, ಯಾವುದು ಅಹಿಂಸೆ; ಯಾವುದು ಪ್ರತಿಭಟನೆ, ಯಾವುದು ಭಯೋತ್ಪಾದನೆ ಎಂಬುದನ್ನೆಲ್ಲಾ ಆರೆಸ್ಸೆಸ್ ಈ ದೇಶದ ಮುಂದೆ ಹತ್ತು-ಹಲವು ಬಾರಿ ವ್ಯಾಖ್ಯಾನಿಸಿದೆ. ಬಾಂಬು ಸ್ಫೋಟಕ್ಕೆ ಮುಸ್ಲಿಮ್ ಭಯೋತ್ಪಾದನೆ ಎಂಬೊಂದು ಹೆಸರು ಕೊಟ್ಟು, ಅದರಿಂದ ಈ ದೇಶಕ್ಕಾಗುವ ಹಾನಿಯ ಬಗ್ಗೆ ಪಟ್ಟಿ ಮಾಡಿದೆ. ಮುಸ್ಲಿಮರು ದೇಶಭಕ್ತರಾಗಬೇಕು ಎಂದು ಅದು ಕರೆ ಕೊಟ್ಟಿದೆ. ನಿಜವಾಗಿ ಮುಸ್ಲಿಮರ ದೇಶಭಕ್ತಿಯನ್ನು ಅದು ಅಳೆಯುತ್ತಿದ್ದುದೇ ಬಾಂಬು ಸ್ಫೋಟಗಳಿಂದ. ಸ್ಫೋಟ ನಡೆದ ತಕ್ಷಣ ಅದು ಮುಸ್ಲಿಮರಿಂದ ಕಡ್ಡಾಯವಾಗಿ ಖಂಡನೆಯ ಹೇಳಿಕೆಗಳನ್ನು ಬಯಸಿದ್ದಿದೆ. ಮದ್ರಸಗಳನ್ನು ಭಯೋತ್ಪಾದನಾ ತರಗತಿಗಳೆಂದು ಹೇಳಿ ಅವುಗಳನ್ನು ಮುಚ್ಚಲು ಇಲ್ಲವೇ ತನಿಖಿಸಲು ತನ್ನ ಪರಿವಾರಗಳ ಮೂಲಕ ಒತ್ತಾಯಿಸಿದ್ದಿದೆ. ಇಂಥ ಸಂಘಟನೆಯ ಪ್ರತಿಭಟನೆಯಾದರೂ ಹೇಗಿರಬೇಕಿತ್ತು? ಮಾದರಿ ಪ್ರತಿಭಟನೆಯ ಪ್ರತಿಪಾದನೆ ಮಾಡುತ್ತಾ, ಅಪ್ಪಟ ಭಯೋತ್ಪಾದಕರಂತೆ ವರ್ತಿಸುವುದು ಎಷ್ಟು ಸರಿ? ಇಷ್ಟಕ್ಕೂ ಹೆಡ್‌ಲೈನ್ಸ್ ಟುಡೇ, ಆರೆಸ್ಸೆಸ್‌ನ ಮೇಲೆ ಕೇವಲ ಆರೋಪದ ವರದಿಯನ್ನಷ್ಟೇ ಓದಿದ್ದಲ್ಲ. ಆಡಿಯೋ ಮತ್ತು ವೀಡಿಯೋ ದಾಖಲೆಗಳನ್ನು ಮುಂದಿಟ್ಟುಕೊಂಡೇ ಅದನ್ನು ಪ್ರಸಾರಿಸಿಯೇ, ಅದರ ಮೇಲೆ ಆರೋಪ ಹೊರಿಸಿದೆ. ಮಾಲೆಗಾಂವ್ ಸ್ಫೋಟದ ಆರೋಪಿ ದಯಾನಂದ್ ಪಾಂಡೆಯ ಲ್ಯಾಪ್‌ಟಾಪ್‌ನಿಂದ ಪಡೆದ ಮತ್ತು ಫೊರೆನ್ಸಿಕ್ ಪರೀಕ್ಷೆಗೆ ಒಳಪಟ್ಟು, ತನಿಖಾ ತಂಡ ಸಾಕ್ಷ್ಯವಾಗಿ ಪರಿಗಣಿಸಿದ ಮಾಹಿತಿಗಳ ನಕಲು ಪ್ರತಿಯನ್ನೇ ತಾನು ಪ್ರಸಾರ ಮಾಡಿದ್ದಾಗಿ ಹೇಳಿದೆ. ಹೀಗಿರುವಾಗ ಆರೆಸ್ಸೆಸ್ ಹೇಗೆ ಪ್ರತಿಕ್ರಿಯಿಸಬೇಕಿತ್ತು? ದೊಣ್ಣೆ-ಆಯುಧಗಳು ಅದರ ಮೇಲಿರುವ ಆರೋಪಗಳ ಭಾರವನ್ನು ತಗ್ಗಿಸಲು ಸಾಧ್ಯವೇ? ಇಷ್ಟಕ್ಕೂ ಈ ದೇಶದ ಬಗ್ಗೆ ಅಪಾರ ಕಾಳಜಿಯನ್ನು ವ್ಯಕ್ತಪಡಿಸುವ, ನೆಲದ ಕಾನೂನನ್ನು ಗೌರವಿಸುವಂತೆ ಮುಸ್ಲಿಮರಿಗೆ ಪಾಠ ಮಾಡುವ ಸಂಘಟನೆಯೊಂದು ಕಾನೂನನ್ನೇ ಕೈಗೆತ್ತಿಕೊಂಡದ್ದು ಸರಿಯೇ? ಇಷ್ಟಕ್ಕೂ ಟಿ.ವಿ. ಚಾನೆಲ್ ಪ್ರಸಾರ ಮಾಡಿದ ಸುದ್ದಿ ಸುಳ್ಳಾಗಿದ್ದರೆ ಅದನ್ನು ಕೋರ್ಟಲ್ಲಿ ಪ್ರಶ್ನಿಸಬಹುದಿತ್ತಲ್ಲವೇ?

ನಿಜವಾಗಿ ಈ ದೇಶದಲ್ಲಿ ಮಾಧ್ಯಮಗಳಿಂದ ಅತ್ಯಂತ ಹೆಚ್ಚು ತನಿಖೆಗೆ, ಸುದ್ದಿಗೆ ಒಳಗಾದದ್ದು ಮುಸ್ಲಿಮರು. ಮಾಲೆಗಾಂವ್, ಮಕ್ಕಾ ಮಸೀದಿ, ಅಜ್ಮೀರ್, ಸಂಜೋತಾ ಎಕ್ಸ್‌ಪ್ರೆಸ್ ಸ್ಫೋಟಗಳನ್ನೆಲ್ಲಾ ಮಾಧ್ಯಮಗಳು ಮುಸ್ಲಿಮರ ಮೇಲೆ ಹೊರಿಸಿ ಸುದ್ದಿ ಬರೆದಿವೆ. ಕೇವಲ ಬಂಧಿತರ ಹೆಸರನ್ನಷ್ಟೇ ಅದು ತನ್ನ ಆರೋಪಕ್ಕೆ ಸಾಕ್ಷ್ಯವಾಗಿ ಪರಿಗಣಿಸಿದ್ದು. ಆಡಿಯೋ-ವೀಡಿಯೋ ಬಿಡಿ, ಸಣ್ಣದೊಂದು ಕಾಗದದ ತುಂಡನ್ನೂ ದಾಖಲೆಯಾಗಿ ತೋರಿಸದೇ ಇದ್ದರೂ ಆರೆಸ್ಸೆಸ್, ಬಿಜೆಪಿ ಮತ್ತು ಬೆಂಬಲಿಗರು ಆ ಸುದ್ದಿಗಳನ್ನೇ ಮುಸ್ಲಿಮರ ಭಯೋತ್ಪಾದನೆಗೆ ಪರಮ ಸಾಕ್ಷ್ಯವಾಗಿ ಸ್ವೀಕರಿಸಿದ್ದಾರೆ. ಆದರೂ ಮುಸ್ಲಿಮರು ಚಾನೆಲ್‌ಗಳ ಮೇಲೆ, ಪತ್ರಿಕೆಗಳ ವಿರುದ್ಧ ದಾಳಿ ನಡೆಸಿಲ್ಲ. ದೊಣ್ಣೆ ಬಳಸಿಲ್ಲ. ಮುಸ್ಲಿಮ್ ವಿದ್ವಾಂಸರು ಇಸ್ಲಾಮಿನ ಸಂದೇಶ ಶಾಂತಿಯದ್ದು ಎಂಬುದಾಗಿ ಹೇಳಿಕೊಂಡರು. ಭಯೋತ್ಪಾದನಾ ವಿರೋಧಿ ಜಾಥಾ ನಡೆಸಿದರು. ಯಾವುದೇ ಸಭೆಯಲ್ಲೂ ಭಯೋತ್ಪಾದನೆಯನ್ನು ಖಂಡಿಸಿ ಒಂದು ಗೆರೆಯ ಹೇಳಿಕೆಯನ್ನಾದರೂ ಕೊಡಬೇಕಾದ ಒತ್ತಡಕ್ಕೆ ಸಿಲುಕಿದರು. ಇಷ್ಟಿದ್ದೂ ಸಂಘಪರಿವಾರ ಮುಸ್ಲಿಮರಿಂದ ಸಾಕಷ್ಟು ಖಂಡನೆ ವ್ಯಕ್ತವಾಗುತ್ತಿಲ್ಲ ಎಂದೇ ದೂರುತ್ತಿತ್ತು. ಆದರೆ ಹೆಡ್‌ಲೈನ್ಸ್ ಟುಡೇ ದಾಖಲೆ ಸಹಿತ ಸುದ್ದಿ ಸ್ಫೋಟಿಸಿದಾಗ ವರ್ಷಗಳ ಹಿಂದಿನ ದೇಶಭಕ್ತರೆಲ್ಲಾ ಯಾಕೆ ಭಯೋತ್ಪಾದಕರಂತೆ ವರ್ತಿಸುತ್ತಾರೆ? ಮುಸ್ಲಿಮರಿಂದ ಬಾರಿಬಾರಿಗೂ ಖಂಡನೆ ಬಯಸುತ್ತಿದ್ದ ಬಿಜೆಪಿ ಯಾಕೆ ನಾಪತ್ತೆಯಾಗಿದೆ? ಆರೆಸ್ಸೆಸ್‌ನಿಂದ ಅದೇಕೆ ಸ್ಪಷ್ಟನೆ ಕೋರುತ್ತಿಲ್ಲ?

ಮುಂಬೈ ದಾಳಿಯಲ್ಲಿ ಮೃತಪಟ್ಟ ಕರ್ಕರೆ, ದಯಾನಂದ ಪಾಂಡೆಯಿಂದ ಲ್ಯಾಪ್‌ಟಾಪ್ ವಶಪಡಿಸಿಕೊಳ್ಳದೇ ಇರುತ್ತಿದ್ದರೆ ಆರೆಸ್ಸೆಸ್ ಇವತ್ತೂ ಮುಸ್ಲಿಮರಿಂದ ಖಂಡನೆಯನ್ನು ಬಯಸುತ್ತಾ, ದೇಶಭಕ್ತ ಮುಖದೊಂದಿಗೆ ಈ ದೇಶದಲ್ಲಿ ಓಡಾಡುತ್ತಿತ್ತು. ಸಾಧ್ವಿ, ಪಾಂಡೆ, ಪುರೋಹಿತ್‌ರನ್ನು ಬಂಧಿಸಿದ ಕರ್ಕರೆ, ಬಾಂಬು ಸ್ಫೋಟಗಳನ್ನು ಯಾರು ಕೂಡ ಮಾಡಬಹುದು ಎಂಬ ಸತ್ಯವನ್ನು ಈ ದೇಶದ ಮುಂದಿಟ್ಟರು. ಇದೀಗ ಆ ಲ್ಯಾಪ್‌ಟಾಪ್‌ನಲ್ಲಿ ತನಿಖಾ ಸಂಸ್ಥೆಗಳಿಗೆ ಸಿಗುತ್ತಿರುವ ಮಾಹಿತಿಗಳು ಎಷ್ಟು ಭೀಕರವಾಗಿವೆಯೆಂದರೆ, ಮುಂಬೈ ದಾಳಿ ಘಟನೆಯ ಪ್ರಾಯೋಜಕರ ಬಗ್ಗೆಯೇ ಅನುಮಾನಗಳು ಹುಟ್ಟತೊಡಗಿವೆ. ಇಸ್ರೇಲ್‌ನಲ್ಲಿರುವ ಇಸ್ಲಾಮ್ ವಿರೋಧಿ ಶಕ್ತಿಗಳು ಶ್ರೀಕಾಂತ್ ಪುರೋಹಿತ್‌ನೊಂದಿಗೆ ಸಂಪರ್ಕದಲ್ಲಿದ್ದುದನ್ನು, ವಿಶ್ವಸಂಸ್ಥೆಯಲ್ಲಿ ಕಾರ್ಯದರ್ಶಿ ದರ್ಜೆಯ ಹುದ್ದೆಯಲ್ಲಿದ್ದ ಬ್ರಿಟನ್ನಿನ ಮಹಿಳೆಯೋರ್ವರೂ ಬೆಂಬಲಕ್ಕಿದ್ದುದನ್ನು ಲ್ಯಾಪ್‌ಟಾಪ್ ಮಾಹಿತಿಗಳು ಬಹಿರಂಗಪಡಿಸಿವೆ. ನಿಜವಾಗಿ ಮುಂಬೈ ದಾಳಿಗಿಂತ ಮೊದಲು ಕೆಲವು ದಿನಗಳ ಕಾಲ ನರಿಮನ್ ಹೌಸ್‌ನಲ್ಲಿ ಯಹೂದಿಯರು ಅನುಮಾನಾಸ್ಪದವಾಗಿ ತಂಗಿದ್ದುದನ್ನು ಪ್ರತ್ಯಕ್ಷದರ್ಶಿ ಮಹಿಳೆಯರು ಮಾಧ್ಯಮಗಳ ಮುಂದೆ ಬಹಿರಂಗವಾಗಿ ಹೇಳಿಕೊಂಡಿದ್ದರು. ಇದೀಗ ಲ್ಯಾಪ್‌ಟಾಪ್‌ನಿಂದ ಹೊರಬರುತ್ತಿರುವ ಮಾಹಿತಿಗಳು ಆ ಅನುಮಾನಗಳನ್ನು ದೃಢಪಡಿಸುತ್ತಿವೆ. ಆದ್ದರಿಂದಲೇ ಕರ್ಕರೆಯನ್ನು ಯೋಜಿತವಾಗಿ ಕೊಲೆಗೈಯಲಾಯಿತೇ ಎನ್ನುವ ಅನುಮಾನವೂ ಮೂಡುತ್ತದೆ.

ಏನೇ ಆಗಲಿ, ಸಾಧ್ವಿ, ಪಾಂಡೆ, ಪುರೋಹಿತ್‌ರನ್ನು ಬಂಧಿಸಿದ ಕ್ಷಣದಲ್ಲೇ ಬಿಜೆಪಿಯ ದ್ವಂದ್ವ ನಿಲುವಿನ ಪರಿಚಯ ಈ ದೇಶಕ್ಕಾಗಿತ್ತು. ಅವರನ್ನು ಖಂಡಿಸುವ ಬದಲು ಅವರ ಪರ ಕಾನೂನು ಹೋರಾಟಕ್ಕಾಗಿ ಅದು ಚಂದಾ ಎತ್ತಿತ್ತು. ಈ ನಕಲಿ ದೇಶಭಕ್ತಿಗೆ ದೇಶದ ನಾಗರಿಕರು ಕಳೆದ ಸಾರ್ವತ್ರಿಕ ಚುನಾವಣೆಯಲ್ಲಿ ಖಾರವಾಗಿಯೇ ಉತ್ತರಿಸಿದ್ದರು. ಇದೀಗ ಆರೆಸ್ಸೆಸ್‌ನ ಇನ್ನೊಂದು ಮುಖವನ್ನು ಹೆಡ್‌ಲೈನ್ಸ್ ಟುಡೇ ಈ ದೇಶದ ಮುಂದಿಟ್ಟಿದೆ. ಅದರ ಕೇಂದ್ರೀಯ ಕಾರ್ಯಕಾರೀ ಸಮಿತಿ ಸದಸ್ಯರೇ ಭಯೋತ್ಪಾದನಾ ಸಂಚುಗಳಲ್ಲಿ ಭಾಗಿಯಾಗಿರುವುದು ಪತ್ತೆಯಾಗಿದೆ. ಮಾತ್ರವಲ್ಲ, ಆರೋಪವನ್ನು ಅಷ್ಟೇ ಸ್ಪೋರ್ಟಿವ್ ಆಗಿ ಸ್ವೀಕರಿಸುವ ಮನೋಭಾವವೂ ಆರೆಸ್ಸೆಸ್‌ಗಿಲ್ಲ ಎನ್ನುವುದೂ ಸಾಬೀತಾಗಿದೆ. ಆದ್ದರಿಂದ ಮೊತ್ತಮೊದಲು ಆರೆಸ್ಸೆಸ್ ಈ ದೇಶದ ಮುಸ್ಲಿಮರಿಂದ ಕ್ಷಮೆ ಯಾಚಿಸಲಿ. ಮಾಧ್ಯಮಗಳ ಸುದ್ದಿಗಳನ್ನೇ ಸಾಕ್ಷ್ಯವಾಗಿಸಿ ಮುಸ್ಲಿಮರನ್ನು ಟೀಕಿಸಿದ್ದಕ್ಕಾಗಿ ವಿಷಾದಿಸಲಿ. ಆರೋಪಿಗಳನ್ನು ಬೆಂಬಲಿಸದೇ ತನಿಖೆಗೆ ಸಹಕರಿಸಲಿ.

## ವಿ ಚಾ ರ ಮ ಣಿ

ಜನರಲ್ಲಿ ಒಬ್ಬನು, ಜನರನ್ನು ಅಲ್ಲಾಹನ ಮಾರ್ಗದಿಂದ ಜ್ಞಾನ ರಹಿತವಾಗಿ ದಾರಿಗೆಡಿಸಲಿಕ್ಕಾಗಿ ಮತ್ತು ಈ ಮಾರ್ಗದ ಕಡೆಗಿರುವ ಕರೆಯನ್ನು ತಮಾಷೆಯಲ್ಲಿ ಹಾರಿಸಿಬಿಡಲಿಕ್ಕಾಗಿ ಮನಮೋಹಕ ವಾಣಿಯನ್ನು ಖರೀದಿಸಿ ತರುತ್ತಾನೆ. ಇಂತಹವರಿಗೆ ಬಹಳ ಅಪಮಾನಕರ ಯಾತನೆ ಇದೆ. ಅವನಿಗೆ ನಮ್ಮ ಸೂಕ್ತಗಳನ್ನು ಓದಿ ಕೇಳಿಸಲಾದಾಗ ಅವನು ಅವುಗಳನ್ನು ತಾನು ಕೇಳಲೇ ಇಲ್ಲವೋ ಎಂಬಂತೆ, ಅವನ ಕಿವಿಗಳು ಕಿವುಡೋ ಎಂಬಂತೆ ದುರಹಂಕಾರದಿಂದ ಮುಖ ತಿರುಗಿಸಿ ಬಿಡುತ್ತಾನೆ. ಅವನಿಗೆ ಒಂದು ವೇದನಾಯುಕ್ತ ಯಾತನೆಯ ಸುವಾರ್ತೆ ಕೊಟ್ಟು ಬಿಡಿರಿ. ಆದರೆ, ಸತ್ಯವಿಶ್ವಾಸ ಸ್ವೀಕರಿಸುವವರಿಗೂ ಸತ್ಕರ್ಮವೆಸಗುವವರಿಗೂ ಅನುಗ್ರಹಗಳು ತುಂಬಿದ ಸ್ವರ್ಗೋದ್ಯಾನಗಳಿವೆ. ಅವುಗಳಲ್ಲಿ ಅವರು ಸದಾ ಕಾಲ ವಾಸಿಸುವರು. ಇದು ಅಲ್ಲಾಹನ ದೃಢವಾದ ವಾಗ್ದಾನವಾಗಿದೆ ಮತ್ತು ಅವನು ಪ್ರಬಲನೂ ಯುಕ್ತಿಪೂರ್ಣನೂ ಆಗಿರುತ್ತಾನೆ.

(ಪವಿತ್ರ ಕುರ್‌ಆನ್: 31: 6-9)

ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ ಸಂಪಾದಕರಿಗೆ ಪತ್ರ




### ಸಂಪಾದಕೀಯ

ಸಂಚಿಕೆ 17ರಲ್ಲಿ 'ಬದಲಾಗಬೇಕಾದುದು ಧರ್ಮಗ್ರಂಥ ಅಲ್ಲ ಭೈರಪ್ಪ' ಎಂಬ ಸಂಪಾದಕೀಯವು ಭೈರಪ್ಪರ ಕಪಾಲಕ್ಕೆ ಕೊಟ್ಟ ಏಟಿನಂತಿತ್ತು. ಜಗತ್ತಿನ ಎಲ್ಲ ಧರ್ಮ ಗ್ರಂಥಗಳು ಕಾಲಕ್ಕೆ ತಕ್ಕಂತೆ ಬದಲಾದರೂ ಮುಸ್ಲಿಮರ ಧರ್ಮ ಗ್ರಂಥ ಮಾತ್ರ ಬದಲಾಗಿಲ್ಲ ಎಂಬ ಸತ್ಯವನ್ನು ಮಾತ್ರ ಅವರಿಂದ ಮುಚ್ಚಿಡಲು ಸಾಧ್ಯವಾಗದೆ ಮೊನ್ನೆ ತಾನೇ ಆ ಸತ್ಯವನ್ನು ಅನಾವರಣ ಗೊಳಿಸಿದ್ದಾರೆ.

ಮಾನವನ ಹಸ್ತಕ್ಷೇಪ ನಡೆಯದೇ ಉಳಿದಿರುವ ಗ್ರಂಥ ಕೇವಲ 'ಕುರ್‌ಆನ್' ಎಂಬ ಮಾತು ಭೈರಪ್ಪರ ಬಾಯಿಯಿಂದ ಹೊರಟಿರುವುದು ನಿಜಕ್ಕೂ ಒಂದು ಆಶಾದಾಯಕ ಬೆಳವಣಿಗೆಯಾಗಿದೆ. ಇನ್ನು, ಕುರ್‌ಆನ್‌ನಿನಲ್ಲಿ ಬದಲಾವಣೆ ತರುವ ವಿಷಯ. ಹಾಗೆ ಬದಲಾಯಿಸುವುದಕ್ಕೆ ಅದು ಭೈರಪ್ಪರ ಕಾದಂಬರಿ ಅಲ್ಲ. ಅದರ ಹೊಣೆಯನ್ನು ಯಥಾ ರೂಪದಲ್ಲಿ ಕಾಪಾಡಿ, ಸಂರಕ್ಷಿಸುವ ಹೊಣೆಯನ್ನು ಭೈರಪ್ಪರೋ, ಮನುವೋ ವಹಿಸಿದ್ದಲ್ಲ. ಬದಲಾಗಿ ಯಾರು ಆ ಗ್ರಂಥವನ್ನು ಅವತೀರ್ಣಗೊಳಿಸಿದ್ದನೋ ಆ ಅಲ್ಲಾಹನೇ ಅದರ ರಕ್ಷಣೆಯ ಹೊಣೆಯನ್ನು ವಹಿಸಿದ್ದಾನೆಂಬ ಸತ್ಯವನ್ನೂ ಭೈರಪ್ಪ ಅರಿಯುವ ಕಾಲ ಕೂಡಿಬರಲಿ ಎಂದು ಪ್ರಾರ್ಥಿಸುತ್ತೇನೆ.

**ಅಬೂ ಫಾತಿಮಾ ಮವದ್ದ** **ಕಂದಕ್**

### ಪ್ರಾಮಾಣಿಕತೆ?

ಸಂಚಿಕೆ 16ರಲ್ಲಿ ಪ್ರಕಟವಾದ 'ಹೆಗ್ಡೆ ರಾಜೀನಾಮೆಗೆ ಸಂತೋಷ ಪಡೋದಾ?' ಏ.ಕೆ. ಕುಕ್ಕಿಲ ಅವರ ಲೇಖನ ಉತ್ತಮವಾಗಿತ್ತು. ಹೆಗ್ಡೆಯವರ ಪ್ರಾಮಾಣಿಕತೆಯೇ ಅವರು ಇಂದು ಈ ಅವಸ್ಥೆಗೆ ತಲುಪಲು ಕಾರಣ. ಕೆಲವು ಭ್ರಷ್ಟ ಸಚಿವರನ್ನು ಹಿಡಿಯಬೇಕು ಎಂದು ಅವರು ಹೊರಡುವಾಗಲೇ ಸರಕಾರ ಮತ್ತು ಸಚಿವ ಸಂಪುಟ ಸೇರಿಕೊಂಡು ಹೆಗ್ಡೆಯವರನ್ನೇ ಹಿಡಿದು ಬಿಟ್ಟಿತು. ಇದೊಂದು ರಾಜೀನಾಮೆ ಎಂದು ಹೇಳಲು ಸಾಧ್ಯವಿಲ್ಲ. ಹೆಗ್ಡೆಯವರು ಭ್ರಷ್ಟ ಸರಕಾರದ ಬಲೆಗೆ ಬಿದ್ದಿದ್ದಾರೆ ಎಂದಷ್ಟೇ ಹೇಳಬಹುದು. ಇವತ್ತು ಪ್ರಾಮಾಣಿಕತೆಯಿಂದ ಕೆಲಸ ಮಾಡುವವರು ತುಂಬಾ ಕಡಿಮೆ. ಆದರೆ ಒಂದಿಬ್ಬರು ಇದ್ದರೆ ಅವರಿಗೆ ಸುಲಭವಾಗಿ ಕೆಲಸ ಮಾಡಲು ಇಲ್ಲಿಯ ವ್ಯವಸ್ಥೆ ಬಿಡುವುದಿಲ್ಲ. ಕಳೆದ ವರ್ಷ ಉತ್ತರ ಕರ್ನಾಟಕದಲ್ಲಿ ನೆರೆ ಬಂದು ಸಾವಿರಾರು ಜನರು ಸಂತ್ರಸ್ತರಾದರು. ನಮ್ಮ ಸರಕಾರ ಅದನ್ನು ಮುಂದಿಟ್ಟುಕೊಂಡು ಕೋಟಿಗಟ್ಟಲೆ ಹಣ ಸಂಗ್ರಹಿಸಿತು. 60 ಸಾವಿರ ಮನೆ ಕಟ್ಟಿಸಿ ಕೊಡುತ್ತೇನೆ ಎಂದು ಹೇಳಿದ ಸರಕಾರಕ್ಕೂ ಇದುವರೆಗೆ 1 ಸಾವಿರ ಮನೆ ಕೂಡ ಕಟ್ಟಲು ಸಾಧ್ಯವಾಗಿಲ್ಲ.

**ಮಕ್ಬೂಲ್ ಅಹ್ಮದ್** **ಕುದ್ರೋಳಿ**

### ವಿಚಾರಪೂರ್ಣ

ಸಂಚಿಕೆ 17ರ ಸಂಪಾದಕೀಯ 'ಬದಲಾಗಬೇಕಾದದ್ದು ಧರ್ಮ ಗ್ರಂಥ ಅಲ್ಲ, ಭೈರಪ್ಪ' ತುಂಬಾ ವಿಚಾರಪೂರ್ಣವಾಗಿತ್ತು. ಕುರ್‌ಆನ್ ತಿದ್ದುಪಡಿ ಮಾಡಬೇಕೆಂದು ಬಯಸುವ ಭೈರಪ್ಪನವರು ಕುರ್‌ಆನನ್ನು ಮತ್ತು ಅದು ಅವತೀರ್ಣಗೊಂಡ ಕಾಲಘಟ್ಟವನ್ನು ಯಾವುದೇ ಪೂರ್ವಗ್ರಹವಿಲ್ಲದೆ ಓದಿದರೆ, ಕುರ್‌ಆನಿನ ಕಾರಣದಿಂದ ಕೆಟ್ಟ ಸಮುದಾಯವು ಯಾವ ರೀತಿ ಉತ್ತಮ ಸಮುದಾಯವಾಗಿ ಮಾರ್ಪಟ್ಟಿತು ಎಂಬುದನ್ನು ತಿಳಿಯಬಹುದು. 'ಆವರಣ'ದಲ್ಲಿ ಸಿಲುಕಿ 'ಕವಲು' ದಾರಿಯಲ್ಲಿ ಸಾಗುತ್ತಿರುವ ಭೈರಪ್ಪನವರಿಗೆ ತಾನು ಯಾರು, ಎಲ್ಲಿಂದ ಬಂದಿರುವೆ, ಎಲ್ಲಿಗೆ ಹೋಗುತ್ತಿರುವೆ ಎಂಬ ಸತ್ಯವನ್ನು ಅಧ್ಯಯನದಿಂದ ಅರಿಯಬಹುದಾಗಿದೆ. ಇನ್ನು ಭಾರತದ ಸಂವಿಧಾನದಲ್ಲಿ 'ಕಂಡಲ್ಲಿ ಗುಂಡಿಕ್ಕು'ವ ಒಂದು ಆಜ್ಞೆಯಿದೆ. ಆದರೆ ಈ ಆಜ್ಞೆಯನ್ನು ಮುಂದಿಟ್ಟು ಭಾರತದ ಸಂವಿಧಾನ 'ಕಂಡಲ್ಲಿ ಗುಂಡಿಕ್ಕಿರಿ' ಎನ್ನುತ್ತದೆ ಎಂದ ಹಾಗಿದೆ ಅವರ ವಾದ. ಕುರ್‌ಆನಿನ ಅಧ್ಯಯನ ನಡೆಸಿ ಜಗತ್ತಿನಾದ್ಯಂತ ವಿಜ್ಞಾನಿಗಳು, ಪ್ರೊಫೆಸರುಗಳು, ಇಂಜಿನಿಯರ್‌ಗಳು, ಸಾಹಿತಿಗಳು ಡಾಕ್ಟರರು, ಸಂಗೀತಗಾರರು, ಪಾದ್ರಿಗಳು, ಬುದ್ಧಿಜೀವಿಗಳು, ಪತ್ರಕರ್ತರು, ಇಸ್ಲಾಮಿನೆಡೆಗೆ ಆಕರ್ಷಿತರಾಗುತ್ತಿರುವವರ ಬಗ್ಗೆ ಭೈರಪ್ಪನವರು ಅಧ್ಯಯನ ನಡೆಸಲಿ. ಒಂದೇ ದೇವನನ್ನು ಆರಾಧಿಸಿರಿ, ಅವನೇ ನಿಮ್ಮ ಸೃಷ್ಟಿಕರ್ತ, ಅವನ್ನು ಅನುಸರಿಸಿರಿ, ಮರಣಾನಂತರ ನಿಮ್ಮ ಇಹಲೋಕ ಜೀವನದ ಬಗ್ಗೆ ನಿಮ್ಮನ್ನು ಜೀವಂತಗೊಳಸಿ ವಿಚಾರಣೆ ನಡೆಸಲಾಗುವುದು. ನೀವು ನಿಮ್ಮ ಸೃಷ್ಟಿಕರ್ತನಾದ ಅಲ್ಲಾಹನನ್ನು ಮಾತ್ರ ಆರಾಧಿಸಿ ಅನುಸರಿಸಿದರೆ, ಸತ್ಕರ್ಮಗಳನ್ನು ಮಾಡಿದರೆ ನಿಮಗೆ ಸ್ವರ್ಗ ಪ್ರವೇಶ ಸಿಗುತ್ತದೆ. ತದ್ವಿರುದ್ಧವಾಗಿ ವರ್ತಿಸಿದರೆ ನರಕದಲ್ಲಿ ಪ್ರವೇಶಗೊಳಿಸಲಾಗುವುದು ಎಂಬ ಸುವಾರ್ತೆ ಮತ್ತು ಎಚ್ಚರಿಕೆ ಹಿಂಸೆಗೆ ಪ್ರಚೋದನೆಯೇ ಅಥವಾ ನಾಳೆ ಪರಲೋಕದಲ್ಲಿ ಹಿಂಸೆಗೆ ತಕ್ಕ ಶಿಕ್ಷೆ ಅನುಭವಿಸಬೇಕು ಎಂಬ ಎಚ್ಚರಿಕೆಯೇ?

ಕಾಲಿಗೆ ತಕ್ಕ ಚಪ್ಪಲಿ ಖರೀದಿಸಬೇಕೇ ಹೊರತು ಚಪ್ಪಲಿಗೆ ತಕ್ಕಂತೆ ಕಾಲನ್ನು ಕತ್ತರಿಸುವುದಲ್ಲ. ಕುರ್‌ಆನಿನ ಆಜ್ಞೆ ಏನಿದೆಯೋ ಅದಕ್ಕೆ ತಕ್ಕಂತೆ ನಾವು ನಮ್ಮನ್ನು ಬದಲಿಸಬೇಕೇ ಹೊರತು ಅದನ್ನು ಬದಲಿಸುವುದಲ್ಲ. ಬದಲಿಸ ಹೊರಟರೆ ಅದನ್ನು ಬದಲಿಸಿದ ಸಮುದಾಯದ, ಧರ್ಮದ ದುರವಸ್ಥೆಯನ್ನು ಎದುರಿಸಬೇಕಾಗಬಹುದು.

**ಸಈದ್ ಇಸ್ಮಾಈಲ್** **ಮಂಗಳೂರು**

## ಕೃತಜ್ಞತೆಗಳು

ಸನ್ಮಾರ್ಗ ಅಭಿಯಾನದಲ್ಲಿ ಸಹಕರಿಸಿದ ಎಲ್ಲಾ ಜಮಾಅತ್, ಎಸ್.ಐ.ಓ. ಬಾಂಧವರಿಗೂ ಚಂದಾದಾರರಿಗೂ ಹೃತ್ಪೂರ್ವಕ ಕೃತಜ್ಞತೆಗಳು

– ವ್ಯವಸ್ಥಾಪಕ

# ಕೈ ಕಡಿದು, ತಲೆ ಹಾರಿಸಿ ಸಹಿಷ್ಣು ಎನ್ನಿಸಿಕೊಳ್ಳಲು ಸಾಧ್ಯವೇ?

**(ಮುಖಪುಟದಿಂದ)**

ನಡೆಸಿಕೊಳ್ಳುವುದಕ್ಕೆ ಅವರೇನೂ ಅಪರಾಧ ಮಾಡಿರಲಿಲ್ಲ. ದಬ್ಬಾಳಿಕೆ ನಡೆಸಿರಲಿಲ್ಲ. ಕ್ಷೋಭೆ ಹರಡಿರಲಿಲ್ಲ. ವಂಚನೆ ಮಾಡಿರಲಿಲ್ಲ. ಇಸ್ಲಾಮಿನ ಸಂದೇಶವನ್ನು ಜನರ ಮುಂದಿಟ್ಟುದುದೇ ಹುಟ್ಟಿದೂರಿನಿಂದ ಓಡಿಸುವುದಕ್ಕೆ, ಅವರ ಮೇಲೆ ದಂಡೆತ್ತಿ ಹೋಗುವುದಕ್ಕೆ ಕಾರಣವಾಗಿತ್ತು.

**ಆದರೂ**

"ತನ್ನನ್ನೇ ನಿರಾಕರಿಸುವ, ತನಗೆ ಭಾಗಿದಾರರನ್ನು ಆರೋಪಿಸುವ ಮಂದಿಯ ಮೇಲೆಯೇ ಸೃಷ್ಟಿಕರ್ತನಾದ ದೇವನು ಕರುಣೆ ತೋರುತ್ತಾನೆ. ಹೀಗಿರುವಾಗ ಮಕ್ಕಾದ ಮಂದಿ ನನ್ನ ಮೇಲೆ ಎಸಗಿದ ದೌರ್ಜನ್ಯಕ್ಕೆ ಪ್ರತೀಕಾರವಾಗಿ ನೀವು ಕಠಿಣ ನಿಲುವು ತಾಳಬಾರದು. ಅವರ ಮೇಲೆ ಹಾಕಿರುವ ನಿರ್ಬಂಧವನ್ನು ತೆಗೆದು ಹಾಕುವ ಮೂಲಕ ದೇವನ ಮಾದರಿಯನ್ನು




ಪಾಲಿಸಬೇಕು" ಎಂದು ಸುಮಾಮರಿಗೆ ಪ್ರವಾದಿ ಮುಹಮ್ಮದ್(ಸ) ಪತ್ರ ಬರೆಯುತ್ತಾರೆ. ಹಾಗೆ ಮಕ್ಕಾದ ಮಂದಿಯ ಮೇಲಿದ್ದ ವ್ಯಾಪಾರ ನಿರ್ಬಂಧ ಹೊರಟು ಹೋಗುತ್ತದೆ.

ಇಷ್ಟೊಂದು ಉನ್ನತ ಮಾದರಿ, ಪರಂಪರೆ ಇದ್ದೂ ಇವತ್ತು ಕೆಲವು ಮುಸ್ಲಿಮರು ಪ್ರವಾದಿ ನಿಂದನೆಗೆ ಪ್ರತಿಕ್ರಿಯಿಸುವುದಾದರೂ ಹೇಗೆ? ಹಿಂಸಾತ್ಮಕವಾಗಿಯೇ ಅಲ್ಲವೇ? ಮುಹಮ್ಮದ್ ಎಂದು ಬರುವ ಕಡೆಗಳಲ್ಲೆಲ್ಲಾ Mad man (ಹುಚ್ಚ) ಎಂದು ಬರೆದದ್ದು ಕೇವಲ ಕೇರಳದ ಉಪನ್ಯಾಸಕ ಟಿ.ಜೆ. ಜೋಸೆಫ್ ಒಬ್ಬರೇ ಅಲ್ಲ. ಪ್ರವಾದಿಗಳನ್ನು ಹುಚ್ಚ (7:184, 34:8, 15:6, 23:25), ಸುಳ್ಳುಗಾರ (54:9), ಮಾಟಗಾರ (52:29), ಕವಿ (37:36), ಜಾದೂಗಾರ (51:52) ಎಂದೆಲ್ಲಾ ಅವರ ಕಾಲದ ಜನತೆ ಹೀಯಾಳಿಸಿತ್ತೆಂದು ಕುರ್‌ಆನೇ ಹೇಳುತ್ತದೆ. ಅದಕ್ಕೆ ಪ್ರವಾದಿಗಳೇನು ಕೈ ಕಡಿದಿದ್ದರೇ? ತಲೆಗೆ ಬಹುಮಾನ ಘೋಷಿಸಿದ್ದರೇ? 'ಕುರ್‌ಆನಿನ ಕಾರ್ಯಾಚರಣೆ' (Kuran in Action) ಎಂದು ಜೋಸೆಫ್‌ರ ಕೈ ಕಡಿದ ಪ್ರಕರಣಕ್ಕೆ ಹೆಡ್‌ಲೈನ್ ಕೊಟ್ಟ ವೆಬ್ ಸೈಟನ್ನು ಆಕ್ಷೇಪಿಸುವ ಮುಸ್ಲಿಮರು, ಆ ಘಟನೆ ಸಮಾಜದ ಮೇಲೆ ಬೀರಿದ ನಕಾರಾತ್ಮಕ ಪರಿಣಾಮದ ಕುರಿತು ಆಲೋಚಿಸಿದ್ದಾರೆಯೇ? ಇಷ್ಟಕ್ಕೂ ಈ ದೇಶದಲ್ಲಿ ಅನ್ಯಾಯವನ್ನು ಪ್ರತಿಭಟಿಸುವುದಕ್ಕೆ ನೂರಾರು ದಾರಿಗಳಿವೆ. ಕೋರ್ಟು, ಕಾನೂನಿದೆ. ಜಾಥಾ, ಧರಣಿ, ಸತ್ಯಾಗ್ರಹಗಳ ಮಾರ್ಗಗಳೂ ಮುಕ್ತವಾಗಿವೆ. ಅಂದ ಹಾಗೆ ಯಹೂದಿಯರು ತಮ್ಮ ಮೇಲಿನ ಅನ್ಯಾಯ, ನಿಂದನೆಗೆ ಉತ್ತರಿಸುವುದು ಕೋರ್ಟು ಮೂಲಕವೇ. ನಿಂದಕರ ವಿರುದ್ಧ ಅವರು ದಾವೆ ಹೂಡಿದ್ದಾರೆ. ಗೆದ್ದಿದ್ದಾರೆ. ಜಗತ್ತಿನಾದ್ಯಂತದ ಕೋರ್ಟುಗಳಲ್ಲಿ ಯಹೂದಿಯರ ದಾವೆಗಳಿವೆ. ಅಂಥ ದಾವೆಗಳು ಅವರನ್ನು ಸಕಾರಾತ್ಮಕವಾಗಿ ಬಿಂಬಿಸುವುದಕ್ಕೂ ಕಾರಣವಾಗಿದೆ. ಇವೆಲ್ಲವನ್ನೂ ಬಿಟ್ಟು ಮುಸ್ಲಿಮರು ಹಿಂಸಾತ್ಮಕ ಪ್ರತಿಕ್ರಿಯೆಗೆ ಮುಂದಾದರೆ ಮತ್ತೆ ಮಾಧ್ಯಮಗಳು ತಾಲಿಬಾನಿಝಂ, ಇಸ್ಲಾಮಿ ಟೆರರಿಸಂ ಅನ್ನದಿರುತ್ತದೆಯೇ? ಈ ಪದ ಪ್ರಯೋಗ ಸರಿ ಎಂದಲ್ಲ. ಆದರೂ ಅಂಥದ್ದೊಂದು ಪದ ಪ್ರಯೋಗಕ್ಕೆ ಅವಕಾಶ ಮಾಡಿ ಕೊಟ್ಟದ್ದಾದರೂ ಯಾರು? ಇಸ್ಲಾಮನ್ನು ಪೂರ್ವಗ್ರಹ ಪೀಡಿತವಾಗಿ, ಆತಂಕದಿಂದಲೇ ವೀಕ್ಷಿಸುತ್ತಿರುವ ಮಾಧ್ಯಮಗಳ ಮಧ್ಯೆ ಮುಸ್ಲಿಮರು ಚೆನ್ನಾಗಿ ಕಾಣಬೇಕಾದರೆ ತುಸು ಹೆಚ್ಚೇ ಚೆನ್ನಾಗಿರಲು ಪ್ರಯತ್ನಿಸಬೇಡವೇ?

**ಇಷ್ಟಕ್ಕೂ**

ಪ್ರವಾದಿ ನಿಂದನೆಯ ಪ್ರಶ್ನೆಪತ್ರಿಕೆ ತಯಾರಿಸಿದ ಜೋಸೆಫ್‌ರನ್ನು ಮುಸ್ಲಿಮರು ಬಿಡಿ, ಅವರ ನ್ಯೂಮನ್ ಕಾಲೇಜೇ ಇಷ್ಟಪಟ್ಟಿರಲಿಲ್ಲ. ಕಾಲೇಜಿನಿಂದ ವಜಾಗೊಂಡ ಅವರಿಗೆ ಸ್ಥಳೀಯ ನ್ಯಾಯಾಲಯ 14 ದಿನಗಳ ಕಾಲ ನ್ಯಾಯಾಂಗ ಬಂಧನ ವಿಧಿಸಿತ್ತು. ಸ್ವತಃ ಜೋಸೆಫ್‌ರೇ ಮುಸ್ಲಿಮರ ಕ್ಷಮೆ ಯಾಚಿಸಿದ್ದರು. ಈ ಎಲ್ಲ ಸಂದರ್ಭಗಳಲ್ಲೂ ಮಾಧ್ಯಮ ಜೋಸೆಫ್‌ರ ಪರ ನಿಲ್ಲದೇ ನಿಂದನೆಯ ವಿರುದ್ಧ ನಿಂತಿತ್ತು. ಒಂದು ರೀತಿಯಲ್ಲಿ ಕೇರಳದೊಳಗೆ ತಣ್ಣಗೆ ಕಂಪಿಸುತ್ತಿದ್ದ ಈ ಪ್ರಕರಣಕ್ಕೆ ಕಿಚ್ಚು ಹತ್ತಿದ್ದು ಕೈ ಕಡಿದದ್ದರಿಂದಲೇ. ಇಂಥದ್ದೊಂದು ಹಿಂಸಾತ್ಮಕ ಪ್ರತಿಕ್ರಿಯೆಯನ್ನು ಬಯಸುತ್ತಿದ್ದ ಮಾಧ್ಯಮಗಳು ಸುದ್ದಿಯನ್ನು ಸ್ಫೋಟಿಸಿದುವು. ಪುರಾತನ ಕಾಲದ ಯಾವ್ಯಾವುದೋ ಕ್ರೌರ್ಯದ ಘಟನೆಗಳನ್ನು ಉಲ್ಲೇಖಿಸಿ ಅದನ್ನು ಇಸ್ಲಾಮೀಕರಿಸಲಾಯಿತು. ಇಸ್ಲಾಮ್ ಸಹಿಷ್ಣುವಲ್ಲ, ನೆಲದ ಕಾನೂನನ್ನು ಒಪ್ಪುತ್ತಿಲ್ಲ ಎಂದು ಷರಾ ಬರೆಯಲಾಯಿತು. ಜೋಸೆಫ್‌ರ ಕೈ ಕಡಿದವರಲ್ಲಿ ಯಾವ ವಿದ್ವಾಂಸ, ಪಂಡಿತ ಇಲ್ಲದೇ ಇದ್ದರೂ ಅದನ್ನು ಇಸ್ಲಾಮಿ ಕೃತ್ಯ ಎಂದೇ ಹೆಸರಿಸಲಾಯಿತು. ದುರಂತ ಏನೆಂದರೆ, ಕೈ ಕಡಿದ ಪ್ರಕರಣವನ್ನು ಹೇಗೆ ಭೀಕರ ಹೆಡ್‌ಲೈನ್‌ನೊಂದಿಗೆ ತಾಲಿಬಾನಿಗೆ ಹೋಲಿಸಿ ಮುಖಪುಟದ ಸುದ್ದಿಯಾಗಿಸಲಾಯಿತೋ, ಅದೇ ಸಂದರ್ಭದಲ್ಲಿ ನಡೆದ ಅಷ್ಟೇ ಸಕಾರಾತ್ಮಕ ಮತ್ತು ಹೃದಯ ಬೆಸೆಯುವ ಕೆಲಸದ ಬಗ್ಗೆ ಬಹುತೇಕ ಮಾಧ್ಯಮಗಳು ಕಣ್ಣು ಮುಚ್ಚಿದುವು. ಘಟನೆ ನಡೆದ ತಕ್ಷಣ, ಕೇರಳ ಜಮಾಅತೆ ಇಸ್ಲಾಮಿ ಹಿಂದ್ ಮತ್ತು ಸೋಲಿಡಾರಿಟಿಯ ಸದಸ್ಯರು ಆಸ್ಪತ್ರೆಗೆ ಭೇಟಿ ಕೊಟ್ಟು ಜೋಸೆಫ್ ಮತ್ತು ಕುಟುಂಬವನ್ನು ಸಾಂತ್ವನಿಸಿದರು. ನನ್ ಆಗಿರುವ ಜೋಸೆಫ್‌ರ ತಂಗಿ ಮೇರಿ ಸ್ಟೆಲ್ಲಾ, ಅಣ್ಣನಿಗೆ 10 ಬಾಟಲ್ ರಕ್ತ ಅಗತ್ಯವಿರುವುದನ್ನು ಜಮಾಅತ್ ಕಾರ್ಯಕರ್ತರ ಮುಂದಿಟ್ಟರು. ನಿಜವಾಗಿ ಕ್ರೈಸ್ತರು ಮತ್ತು ಮುಸ್ಲಿಮರ ಮಧ್ಯೆ ಭಾವನಾತ್ಮಕ ಸಂಘರ್ಷವೊಂದು ಏರ್ಪಟ್ಟ ಸಂದರ್ಭದಲ್ಲೇ ಸ್ಟೆಲ್ಲಾ ತಳೆದ ನಿಲುವು ಧೈರ್ಯದ್ದು ಮಾತ್ರವಲ್ಲ ಅತ್ಯಂತ ಬುದ್ಧಿವಂತಿಕೆಯದ್ದಾಗಿತ್ತು. ಆಕೆಗೆ ರಕ್ತ ಬೇಕೆಂದರೆ ಕ್ರೈಸ್ತ ಮಿಷನರಿಯಿತ್ತು ಇಲ್ಲವೇ ಬ್ಲಡ್‌ಬ್ಯಾಂಕಿತ್ತು. ಆ ಸಂದರ್ಭದಲ್ಲಿ ಜೋಸೆಫ್‌ರಿಗೆ ನೂರು ಬಾಟಲು ರಕ್ತ ಕೊಡುವುದಕ್ಕೂ ಸಿದ್ಧರಿರುವ ಯುವಕರು ಖಂಡಿತ ಕ್ರೈಸ್ತ ಸಮಾಜದಲ್ಲಿದ್ದರು. ಆದರೆ ಸ್ಟೆಲ್ಲಾ ಮುಸ್ಲಿಮರು ಮತ್ತು ಕ್ರೈಸ್ತರ ನಡುವೆ ಸೇತುವೆ ಕಟ್ಟುವ, ಹೃದಯ ಬೆಸೆಯುವ ಅಪೂರ್ವ ನಿರ್ಧಾರ ಕೈಗೊಂಡರು. ಅಣ್ಣನ ಕೈ ಕಡಿದ ಆರೋಪ ಯಾವ ಧರ್ಮದವರ ಮೇಲಿದೆಯೋ ಆ ಧರ್ಮದವರಿಂದಲೇ ರಕ್ತ ಪಡೆದುಕೊಂಡು ನಿಜ ಧರ್ಮವನ್ನು ಸಾಬೀತುಪಡಿಸಿದರು. ಅದೇ ವೇಳೆ ಸ್ಟೆಲ್ಲಾರ ಕೋರಿಕೆಯನ್ನು ಒಪ್ಪಿಕೊಳ್ಳುವ ಮೂಲಕ ಪ್ರವಾದಿ ನಿಂದಕನಿಗೆ ಬೆಂಬಲ ಕೊಟ್ಟರು ಎಂಬೊಂದು ಅಪಪ್ರಚಾರಕ್ಕೆ ಒಳಗಾಗುವ ಅಪಾಯವೊಂದು ಜಮಾಅತೆ ಇಸ್ಲಾಮಿಯ ಕಾರ್ಯಕರ್ತರ ಪಾಲಿಗೆ ಖಂಡಿತ ಇತ್ತು. ಅಂಥದ್ದೊಂದು ಅಪಾಯ, ಅಪಪ್ರಚಾರದ ಅರಿವಿದ್ದೂ ಜಮಾಅತ್ ಕಾರ್ಯಕರ್ತರು ರಕ್ತ ಕೊಟ್ಟರು. ಪ್ರವಾದಿಯ ಮಾದರಿ ಕೈ ಕಡಿಯುವುದಲ್ಲ, ಜೋಡಿಸುವುದು ಎಂಬುದಾಗಿ ಸಾರಿ ಹೇಳಿದರು.

**ಆದರೆ**

ಈ ಬೆಳವಣಿಗೆಗೆ ಎಷ್ಟು ಪತ್ರಿಕೆಗಳು ಮತ್ತು ಟಿ.ವಿ. ಚಾನೆಲ್‌ಗಳು ಒತ್ತು ಕೊಟ್ಟಿವೆ? ಕೈ ಕಡಿದದ್ದನ್ನು ಕುರ್‌ಆನಿನ ಕಾರ್ಯಾಚರಣೆ ಎಂದವರು, ರಕ್ತ ಕೊಟ್ಟದ್ದನ್ನು ಕುರ್‌ಆನಿನ ಅನುಸರಣೆ ಎಂದೇ ಹೇಳಬೇಕಿತ್ತಲ್ಲವೇ? ಕೈ ಕಡಿದ ಕೃತ್ಯಕ್ಕೆ ಮುಖಪುಟದಲ್ಲಿ ಜಾಗ ಕೊಟ್ಟ ಎಷ್ಟು ಪತ್ರಿಕೆಗಳು, ಗಾಯ ಒಣಗಿಸಿದ ಈ ಮಾದರಿ ಕೆಲಸಕ್ಕೆ ಮುಖಪುಟದಲ್ಲಿ ಜಾಗ ಕೊಟ್ಟಿವೆ? ನಿಜವಾಗಿ ಕೈ ಕಡಿದದ್ದಕ್ಕಿಂತ ಹೆಚ್ಚು ಸ್ಪೇಸ್ ಸಿಗಬೇಕಾದ್ದು, ಪ್ರಚಾರಕ್ಕೆ ಒಳಗಾಗಬೇಕಾದ್ದು ಇಂಥ ಸಕಾರಾತ್ಮಕ ಬೆಳವಣಿಗೆಗಳೇ ಅಲ್ಲವೇ? ಇಸ್ಲಾಮ್ ಅಸಹಿಷ್ಣು ಅಲ್ಲ, ಟೆರರಿಸಂ ಅಲ್ಲ ಎಂಬುದನ್ನು ಹೇಳುವ ಯಾವ ಸಕಾರಾತ್ಮಕ ಬೆಳವಣಿಗೆಗಳಿಗೂ ಕವರೇಜ್ ಕೊಡದೇ ಕೇವಲ ನಕಾರಾತ್ಮಕ ಬೆಳವಣಿಗೆಗಳನ್ನೇ ಮಾಧ್ಯಮ ಬೆಂಬತ್ತುವುದೇಕೆ? ಇದೂ ಒಂದು

**ಏ.ಕೆ. ಕುಕ್ಕಿಲ**

ಟೆರರಿಸಮ್ಮೇ ಅಲ್ಲವೇ? ಮುಸ್ಲಿಮರನ್ನು ಮುಖ್ಯವಾಹಿನಿಗೆ ಬನ್ನಿ ಎನ್ನುತ್ತಲೇ, ಅವರನ್ನು ಅಸಹಿಷ್ಣುಗಳು, ಕ್ರೂರಿಗಳು, ಹಿಂಸಕರು ಎಂದು ಸಾರುವುದಕ್ಕೆ ಪೂರಕವಾದಂಥ ಘಟನೆಗಳನ್ನೇ ಮಾಧ್ಯಮ ಹೈಲೈಟ್ ಮಾಡುತ್ತಿರುವುದೇಕೆ? ನಿಜವಾಗಿ ಕೈ ಕಡಿದ ಘಟನೆಗೆ ಕೊಟ್ಟ ಮಹತ್ವ, ಜಾಗದ ಒಂದು ಶೇಕಡವನ್ನೂ ಮಾಧ್ಯಮಗಳು ರಕ್ತ ಕೊಟ್ಟ ಘಟನೆಗೆ ನೀಡಿಲ್ಲ. ಹೆಚ್ಚಿನ ಪತ್ರಿಕೆಗಳು ಇಂಥದ್ದೊಂದು ಸುದ್ದಿಯನ್ನೇ ಪ್ರಕಟಿಸಿಲ್ಲ. ಹಾಸ್ಯಾಸ್ಪದ ಏನೆಂದರೆ, ಎಲ್ಲಾದರೂ ಬಾಂಬು ಸ್ಫೋಟಗೊಂಡರೆ, 'ನೀವೇಕೆ ಅದನ್ನು ಖಂಡಿಸುವುದಿಲ್ಲ' ಎಂಬೊಂದು ಪ್ರಶ್ನೆಯನ್ನು ಮಾಧ್ಯಮದ ಮಂದಿ ಮುಸ್ಲಿಮರಲ್ಲಿ ಕೇಳುವುದಿದೆ. 'ನೀವು ಒಳಗೊಳಗೇ ಸ್ಫೋಟವನ್ನು ಬೆಂಬಲಿಸುತ್ತಿದ್ದೀರಿ' ಎಂಬೊಂದು ಆರೋಪವೂ ಆ ಪ್ರಶ್ನೆಯಲ್ಲಿರುತ್ತದೆ. ಆದರೆ ಬರ್ಬರ ಕೃತ್ಯವೊಂದಕ್ಕೆ ಪ್ರವಾದಿ ಮಾದರಿಯಲ್ಲಿ ಪ್ರತಿಕ್ರಿಯಿಸಿದರೆ ಅದು ಸುದ್ದಿಯೇ ಆಗುವುದಿಲ್ಲವೆಂದರೆ ಏನೆನ್ನಬೇಕು?

**ನಿಜ**

ಮಾಧ್ಯಮ ಧೋರಣೆಯನ್ನು ಟೀಕಿಸಿದ ಮಾತ್ರಕ್ಕೇ ಕೈ ಕಡಿದ ಕೃತ್ಯದ ಬರ್ಬರತೆ ಖಂಡಿತ ಸಣ್ಣದಾಗುವುದಿಲ್ಲ. ಇಸ್ಲಾಮನ್ನು ಅಸಹಿಷ್ಣು, ಭಯೋತ್ಪಾದಕ ಎಂದು ಬಿಂಬಿಸುವುದಕ್ಕೆ ಈಗಾಗಲೇ ಒಂದು ವರ್ಗ ತೀವ್ರವಾಗಿ ಶ್ರಮಿಸುತ್ತಿದೆ. ಮಾಧ್ಯಮದಲ್ಲೂ ಈ ಮಂದಿಯಿದ್ದಾರೆ. ಇತಿಹಾಸದಿಂದ ಸಹಿಷ್ಣುತೆಯ ಉನ್ನತ ಮಾದರಿಯನ್ನು ಹೆಕ್ಕಿ ಹೇಳುವುದರಿಂದ ಈ ಮಂದಿ ಈಗಾಗಲೇ ಹರಡಿಬಿಟ್ಟಿರುವ ಸುಳ್ಳುಗಳನ್ನು ಸುಲಭದಲ್ಲಿ ಉಚ್ಚಾಟಿಸಲು ಸಾಧ್ಯವಾಗದು. ಜನರು ಇತಿಹಾಸವನ್ನಲ್ಲ, ಪ್ರಸಕ್ತ ಕಾಲದಲ್ಲಿ ಬದುಕುತ್ತಿರುವ ಜನರನ್ನು ನೋಡುತ್ತಾರೆ. ಅವರು ಇತಿಹಾಸದಲ್ಲಿ ಹೇಳಲಾಗುವ ಮೌಲ್ಯಗಳಿಗೆ, ಮಾದರಿಗಳಿಗೆ ವಿರುದ್ಧವಾಗಿ ಬದುಕುತ್ತಿದ್ದರೆ ಮಾದರಿ ಇತಿಹಾಸದಿಂದ ಭಾರೀ ಪ್ರಯೋಜನವೇನೂ ಆಗದು. ಆದ್ದರಿಂದಲೇ ಮಾಧ್ಯಮಗಳಲ್ಲಿ ಮುಸ್ಲಿಮರ ಮುಖ 50% ಚೆನ್ನಾಗಿ ಬರಬೇಕಾದರೆ ಅವರು ತಮ್ಮ ಮುಖವನ್ನು 90% ಚೆನ್ನಾಗಿ ಇಟ್ಟುಕೊಂಡಿರಬೇಕು. ನಿಜವಾಗಿ ಮಾಧ್ಯಮದ ಅಸಹಿಷ್ಣುತೆಯನ್ನು, ಇಸ್ಲಾಮೋಫೋಬಿಯವನ್ನು ಸೋಲಿಸಲು ಸಾಧ್ಯವಿದ್ದರೆ ಅದು ಜಮಾಅತೆ ಇಸ್ಲಾಮಿ ಹಿಂದ್‌ನ ಕಾರ್ಯಕರ್ತರು ಮಾಡಿದಂಥ ಸಕಾರಾತ್ಮಕ ಪ್ರತಿಕ್ರಿಯೆಗಳಿಂದ ಮಾತ್ರ. ಮದೀನದ ಯಹೂದಿ ನಾಯಕ ಸಲಾಮ್‌ರ ಪತ್ನಿ ಝೈನಬ್ ಪ್ರವಾದಿಗೆ ವಿಷ ಬೆರೆಸಿದ ಮಾಂಸ ನೀಡಿದರು. ಮಲಗಿದ್ದ ಪ್ರವಾದಿ ಮುಹಮ್ಮದ್‌ರನ್ನು ಕೊಲ್ಲಲು ಗೌರಸ್ ಬಿನ್ ಹಾರಿಸ್ ಎಂಬವ ತಲವಾರು ಎತ್ತಿದರು. ಆದರೆ ಪ್ರವಾದಿ ಅವರಿಬ್ಬರನ್ನೂ ಕ್ಷಮಿಸಿದರು. ತನ್ನನ್ನು ಪೀಡಿಸಿ, ವಲಸೆ ಹೋಗುವಂತೆ ಮಾಡಿದ ಮಕ್ಕಾವು ಭೀಕರ ಬರಗಾಲಕ್ಕೆ ತುತ್ತಾದಾಗ ಧಾನ್ಯಗಳನ್ನು ಸಂಗ್ರಹಿಸಿ ಅಮ್ರ್‌ರ ಕೈಯಲ್ಲಿ ಪ್ರವಾದಿ ಮುಹಮ್ಮದರು ಮಕ್ಕಾಕ್ಕೆ ಕಳುಹಿಸಿ ಕೊಟ್ಟರು. 'ಕೆಡುಕಿಗೆ ಅತ್ಯುತ್ತಮ ಒಳಿತಿನಿಂದ ಉತ್ತರಿಸಿ. ಆಗ ಶತ್ರುವೂ ನಿಮ್ಮ ಮಿತ್ರನಾಗುತ್ತಾನೆ' ಎಂದೇ ಪವಿತ್ರ ಕುರ್‌ಆನ್ ಹೇಳುತ್ತದೆ. (41:34) ಪ್ರತಿಭಟನೆಗಳ ಸಂದರ್ಭದಲ್ಲಿ ಮುಸ್ಲಿಮರು ಈ ಎಲ್ಲ ಮಾದರಿಗಳನ್ನು ಮುಂದಿಟ್ಟುಕೊಳ್ಳಬೇಕು. ಅದರಂತೆ ಕಾರ್ಯತಂತ್ರ ರೂಪಿಸಬೇಕು. ಅದು ಬಿಟ್ಟು ಕೈ ಕಡಿದೂ ತಲೆ ಹಾರಿಸಿಯೂ ಮಾಧ್ಯಮಗಳು ತಮ್ಮನ್ನು ಸಹಿಷ್ಣುಗಳೆಂದು ಕರೆಯಬೇಕೆಂದು ಬಯಸುವುದಕ್ಕೆ ಯಾವ ಅರ್ಥವೂ ಇಲ್ಲ.

**ಒಪ್ಪಿ ಬಿಡಿ**

akkukkila@gmail.com

ಹಜ್ಜ್ ಡಿಲಕ್ಸ್ ಕ್ಲಾಸ್ ರೂ. 1,95,000/-
(ಮಂಗಳೂರಿನಿಂದ ಮಂಗಳೂರಿಗೆ)
ಹಜ್ಜ್ ಬಜೆಟ್ ಕ್ಲಾಸ್ ರೂ. 1,60,000/-



(ಮಂಗಳೂರಿನಿಂದ ಮಂಗಳೂರಿಗೆ)
ರಮಝಾನ್ ಫುಲ್ ಉಮ್ರ ಪ್ಯಾಕೇಜ್ ರೂ. 72,000/-
17 ದಿನಗಳ ರಮಝಾನ್ ಉಮ್ರ 58,000/-



ಮಕ್ಕಾದಲ್ಲಿ ಕಳೆದ ಸುಮಾರು 22 ವರ್ಷಗಳಿಂದ
ಹಾಜಿಗಳ ಸೇವೆ ಸಲ್ಲಿಸುತ್ತಾ ಬಂದಿರುವ
ಹಾಜಿ ಜಿ.ಎಚ್. ಹಮೀದ್, ಉಪ್ಪಿನಂಗಡಿ ಮಠ +966 506573284



ಬುಕ್ಕಿಂಗ್‌ಗಾಗಿ ಕೂಡಲೇ ಸಂಪರ್ಕಿಸಿರಿ:
ಹಾಜಿ ಝಾಕಿರ್ ಹುಸೈನ್, ಕೃಷ್ಣಾಪುರ 9886132465

AL- MUNAWWAR INTERNATIONAL
HAJJ, UMRAH & ZIYARAH
Shop No. 2, IInd Floor, Singala Chambers
Maidan 4th Cross, Mangalore - 575001 Ph: 4272465

# ಬುರ್ಖಾ ನಿಷೇಧಕ್ಕೆ ಮುಂದಾದ ಫ್ರಾನ್ಸ್

ವಿದೇಶರಂಗ

ಎ. ಆರ್.



**ಶ**ರೀರವನ್ನು ಮುಚ್ಚುವ ಬುರ್ಖಾವನ್ನು ನಿಷೇಧಿಸುವುದರ ವಿರುದ್ಧ ಒಂದು ಮತ ಮತ್ತು ಅದರ ಪರವಾಗಿ 35 ಮತ ಚಲಾವಣೆಗೊಂಡು ಫ್ರೆಂಚ್ ಪಾರ್ಲಿಮೆಂಟಿನ ಕೆಳಮನೆಯಲ್ಲಿ ಬುರ್ಖಾ ನಿಷೇಧ ಮಸೂದೆ ಮಂಜೂರಾಗಿದೆ. ಆಸ್ಪತ್ರೆ, ಶಾಲೆ, ಸಾರ್ವಜನಿಕ ವಾಹನ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಬುರ್ಖಾ ಧರಿಸಬಾರದೆಂದು ಈ ಮಸೂದೆ ಹೇಳಿದೆ. ಹೀಗೆ ಧರಿಸುವುದಾದರೆ 190 ಡಾಲರ್ ದಂಡ ತೆರಬೇಕು. ಬುರ್ಖಾ ಹಾಕುವುದಕ್ಕೆ ಒತ್ತಾಯಿಸುವವರು 38,000 ಡಾಲರ್ ದಂಡ ಮತ್ತು ಒಂದು ವರ್ಷ ಸಜೆ ಅನುಭವಿಸಬೇಕು. ಅಧ್ಯಕ್ಷ ಸರ್ಕೋಝಿಯು ಆಡಳಿತ ಸುಧಾರಣೆಯಲ್ಲಿ ಇದಕ್ಕೆ ಅತಿ ಪ್ರಾಮುಖ್ಯತೆಯನ್ನು ನೀಡಲಾಗಿತ್ತು. ಅಮೇರಿಕದ ಮಾಜಿ ಅಧ್ಯಕ್ಷ ಬುಶ್ ಆರಂಭಿಸಿದ್ದ ಶಿಲುಬೆ ಯುದ್ಧವನ್ನು ಸರ್ಕೋಝಿ ಸಾಂಸ್ಕೃತಿಕ ಕ್ಷೇತ್ರದಲ್ಲಿ ಪ್ರಾರಂಭಿಸಿದ್ದಾರೆ. ಅಂದರೆ ಸಾಂಸ್ಕೃತಿಕ ಸಂಘರ್ಷವೊಂದನ್ನು ಸುಧಾರಣೆಯ ಹೆಸರಿನಿಂದ ಪ್ರಾರಂಭಿಸಲಾಗಿದೆ. ಇಟಲಿ, ಸ್ಪೈನ್ ಮುಂತಾದ ರಾಷ್ಟ್ರಗಳು ಈ ದಾರಿಯಲ್ಲಿ ಹೆಜ್ಜೆಯಿಡುವುದಕ್ಕೆ ಆರಂಭಿಸಿವೆ. ಸ್ವಿಸ್ ಮತ್ತು ಆಸ್ಟ್ರೇಲಿಯನ್ ಬಲ ಪಂಥೀಯರು ಈ ಬೇಡಿಕೆಯೊಂದಿಗೆ ರಂಗ ಪ್ರವೇಶಿಸಿದ್ದಾರೆ. ನಿಜವಾದ ಸಮಸ್ಯೆಯಿಂದ ಜನರ ಗಮನವನ್ನು ಬೇರೆಡೆಗೆ ಹರಿಸುವಂತೆ ಮಾಡುವುದಕ್ಕೆ ಇಂತಹ ವಿಚಾರಗಳು ಆಡಳಿತಗಾರರಿಗೆ ಉಪಯುಕ್ತವಾಗಿವೆ. ಕರ್ನಾಟಕದಲ್ಲಿ ಗೋ ಮಸೂದೆಯನ್ನು ತಂದು ಯಡಿಯೂರಪ್ಪ ಸಾಂಸ್ಕೃತಿಕ ಸಂಘರ್ಷಕ್ಕೆ ನಾಂದಿ ಹಾಡಲು ಹೊರಟಂತೆ ಫ್ರಾನ್ಸಿಗೊಬ್ಬ ಸರ್ಕೋಝಿ ವಿಶ್ವದಾದ್ಯಂತ ಸಾಂಸ್ಕೃತಿಕ ಸಂಘರ್ಷಕ್ಕೆ ನಾಂದಿ ಹಾಡಿದ್ದಾರೆ.

ನೀವೇಕೆ ಬುರ್ಖಾ ಹಾಕಬೇಕು ಎಂಬ ಪ್ರಶ್ನೆ ಆರಂಭವಾದದ್ದನ್ನು ಬರೇ ಬಲಪಂಥೀಯ ವಿಚಾರವೆಂದು ಕಡೆಗಣಿಸುವಂತಿಲ್ಲ. ಬುರ್ಖಾ ಧರಿಸದೆ ಓಡಾಡುವ ಎಷ್ಟೋ ಮುಸ್ಲಿಮ್ ಮಹಿಳೆಯರನ್ನು ತೋರಿಸಿ ನೀವೇಕೆ ಬುರ್ಖಾ ಹಾಕುತ್ತಿದ್ದೀರಿ ಎಂದು ಯಾರಾದರೂ ಪ್ರಶ್ನಿಸುವುದು ಅಸಹಜವೂ ಅಲ್ಲ. ಬುರ್ಖಾವನ್ನು ಕಿತ್ತೊಗೆಯುವ ಮುಸ್ಲಿಮರೇ ಇದ್ದಾಗ ಬುರ್ಖಾವನ್ನು ಕಿತ್ತು ಹಾಕಿರಿ ಎಂದು ಮುಸ್ಲಿಮ್ ಮೌಲ್ಯಗಳನ್ನು ವಿರೋಧಿಸುವವರು ಎದ್ದು ನಿಂತಿದ್ದಾರೆ. ಮೈ ತುಂಬಾ ಬುರ್ಖಾ ಹೊದ್ದು ಮುಖಕ್ಕೆ ಅಡ್ಡ ಪರದೆ ಹಾಕಿ ನಡೆದರೆ ಸುರಕ್ಷಿತತೆಗೆ ಅಪಾಯವಿದೆ ಎಂದು ಕೆಲವರು ಭಾವಿಸುತ್ತಾರೆ. ಫ್ರಾನ್ಸ್ ಕೂಡಾ ಇಂತಹ ವಸ್ತ್ರ ಧಾರಣೆಗೆ ಸುರಕ್ಷಿತತೆಯ ಕಾರಣಗಳನ್ನೇ ಹೇಳಿದೆ ಮತ್ತು ಮೌಲ್ಯಗಳಿಗೆ ಅಡ್ಡಿಯೆಂದೂ ಹೇಳಿದೆ. ಈ ಅಡ್ಡಿಗಳನ್ನೆಲ್ಲ ಹೇಳುವುದಕ್ಕೆ ದಾರಿ ಮಾಡಿದ್ದು ಯಾರು ಎಂಬ ಪ್ರಶ್ನೆಯನ್ನು ಮುಸ್ಲಿಮರು ಕೂತು ಯೋಚಿಸಬೇಕು. ಸರ್ಕೋಝಿ ಕ್ರೈಸ್ತ ಭಗಿನಿಯರು ಪರ್ದಾ ಧರಿಸಬಹುದೇ ಎಂಬ ಪ್ರಶ್ನೆಯನ್ನು ಅಂತಾರಾಷ್ಟ್ರೀಯ ವಿಚಾರ ಧಾರೆಯಲ್ಲಿ ಸೇರಿಸಬಹುದು.

ಮಹಿಳೆಯರ ಗೌರವಗಳಿಗೆ ಅರ್ಧವಸ್ತ್ರ ಅಗತ್ಯವೇ ಅಥವಾ ಪೂರ್ಣ ಮುಚ್ಚಿದ ವಸ್ತ್ರ ಬೇಕೇ ಎಂಬ ಬಗ್ಗೆ ಮಹಿಳೆಯರಲ್ಲೇ ಗೊಂದಲವಿದೆ. ಶೋಷಿಸ್‌ಗಳಂತೆ ನಡೆದಾಡಲು ಬಯಸುವ ಮಹಿಳೆಯರೇ ಇಂದು ಹೆಚ್ಚಿದ್ದಾರೆ. ಪಾಶ್ಚಾತ್ಯರಲ್ಲಂತೂ ಬಹುತೇಕ ಮಹಿಳೆಯರಿಗೆ ಬಟ್ಟೆಯೇ ಅಲರ್ಜಿಯಾಗಿದೆ. ಆದರೆ ಇಂತಹ ತುಂಡು ಬಟ್ಟೆಯ ಮನೆಯಿಂದ ದಾರುಣ ಅಂತ್ಯ ಕಂಡಿರುವುದಕ್ಕೂ ಕೆಲವು ಉದಾಹರಣೆಗಳಿವೆ. ಪ್ರಸಿದ್ಧ ಮಾಡೆಲ್ ವಿವೇಕಾ ಬಾಬೂಜಿ ಆತ್ಮಹತ್ಯೆ ಮಾಡಿಕೊಂಡರು. ಇನ್ನೋರ್ವ ಮಾಡೆಲ್ ಮತ್ತು ಸಿನೆಮಾ ನಟಿ ದಿವ್ಯ ಭಾರತಿ ಕೂಡಾ ಆತ್ಮಹತ್ಯೆ ಮಾಡಿಕೊಂಡರು. ಶ್ವೇತಾ ಪಡುಬಿದ್ರಿಯೆಂಬ ಮಾಡೆಲ್ ಕೂಡಾ ಆತ್ಮಹತ್ಯೆ ಮಾಡಿಕೊಂಡರು. ಪರ್ವಿನ್ ಬಾಬಿ ಎಂಬ ಸಿನೆಮಾ ನಟಿ ಮತ್ತು ಮಾಡೆಲ್ ಕೂಡಾ ಆತ್ಮಹತ್ಯೆ ಮಾಡಿಕೊಂಡರು. ದೇಹ ಪ್ರದರ್ಶಿಸುವುದನ್ನು ಕಸುಬಿನಂತೆ ಕಂಡವರ ದಾರುಣ ಅಂತ್ಯದ ಭಾರತೀಯ ಉದಾಹರಣೆ ಗಳಿವಾದರೆ, ಮರ್ಲಿನ್ ಮನ್ರೋರಂತೆ ವಿದೇಶಗಳ ಅದೆಷ್ಟೋ ಲಲನಾಮಣಿಗಳು ಕೂಡಾ ಆತ್ಮ ಹತ್ಯೆಯಲ್ಲಿ ಅಂತ್ಯ ಕಂಡುಕೊಂಡಿದ್ದಾರೆ.

ಬುರ್ಖಾ ಮಹಿಳೆಯರ ಸ್ವಾತಂತ್ರ್ಯಕ್ಕೆ ಹಾನಿಯೆಂದೂ ಫ್ರೆಂಚ್ ಕೆಳಮನೆ ಹೇಳುತ್ತದೆ. ಶರೀರವನ್ನು ಸಂಪೂರ್ಣವಾಗಿ ಮುಚ್ಚಬೇಕೆಂದು ಆದೇಶಿಸುವವರ ಧಾರ್ಮಿಕ ಸ್ವಾತಂತ್ರ್ಯಕ್ಕೆ ಇದರಿಂದ ಹಾನಿಯಾಗುವುದಿಲ್ಲವೇ ಎಂಬ ಪ್ರಶ್ನೆಗೆ ಅವರು ಉತ್ತರ ಹೇಳಲಾರರು. ನೀವು ಈ ವಸ್ತ್ರವನ್ನು ಧರಿಸಬೇಕು, ಈ ವಸ್ತ್ರವನ್ನು ಧರಿಸಬಾರದು ಎಂದು ಹೇಳುವ ಅಧಿಕಾರ ಯಾವ ಪಾರ್ಲಿಮೆಂಟಿಗೂ ಇಲ್ಲ. ಅದೇ ವೇಳೆ ಅಶ್ಲೀಲ ಉಡುಪು ಧರಿಸಬಾರದೆಂದು ಹೇಳುವ ಅಧಿಕಾರ ಸಾಮಾನ್ಯ ಪೌರನಿಗೂ ಇದೆ.

ಬುರ್ಖಾದ ಅನಾನುಕೂಲದ ಕುರಿತು ವಿವರಿಸುವಾಗ ಇಂದಿನ ಜಾಗತಿಕ ಭಯೋತ್ಪಾದನೆಯ ದಿನಗಳನ್ನು ಎತ್ತಿ ತೋರಿಸಲಾಗಿದೆ. ಭದ್ರತೆಯ ಹೊಣೆ ಹೊತ್ತವರಿಗೆ ಇಂತಹ ವಸ್ತ್ರಗಳು ಅಡ್ಡಿಯಾಗುತ್ತಿವೆಯಂತೆ. ಅತ್ಯಾಧುನಿಕ ತಪಾಸಣಾ ಸಲಕರಣೆಯನ್ನು ಹೊಂದಿರುವ ಪೊಲೀಸರಿಗೆ ತಪಾಸಣೆ ನಡೆಸುವುದು ಕಷ್ಟ ಎಂದರೆ ಯಾರೂ ಒಪ್ಪಲಾರರು. ಬಂಗಾರದ ಬಿಸ್ಕತ್ತನ್ನು ನುಂಗಿದ್ದರೆ ಅದು ಹೊಟ್ಟೆಯಲ್ಲಿದೆಯೆಂದು ಪತ್ತೆ ಮಾಡುವ ದಿನಗಳಿವು. ಆದುದರಿಂದ ಇದು ಜನಾಂಗೀಯತೆ ಮತ್ತು ಕೋಮು ಪಕ್ಷಪಾತಿ ವಿಚಾರವಾಗಿದೆ. ಇದರಲ್ಲಿ ಬುರ್ಖಾ ಧರಿಸುವವರನ್ನು ಅವಮಾನಿಸಬೇಕೆಂಬುದನ್ನು ಬಿಟ್ಟರೆ ಬೇರೆ ಯಾವ ನ್ಯಾಯವೂ ಇಲ್ಲ. ಇದು ಜಾತ್ಯತೀತತೆಯೂ ಅಲ್ಲ.

ಸ್ವಿಝರ್‌ಲ್ಯಾಂಡ್‌ನಲ್ಲಿ ಮಿನಾರಗಳನ್ನು ಕಟ್ಟಬಾರದು. ನೆದರ್‌ಲ್ಯಾಂಡ್‌ನಲ್ಲಿ ಬುರ್ಖಾ ನಿಷೇಧಿಸುವುದಕ್ಕೆ ಕ್ರಿ.ಶ. 2005ರಿಂದ ಪ್ರಯತ್ನ ಆರಂಭವಾಗಿತ್ತಾದರೂ ಅದನ್ನು ಕಾರ್ಯರೂಪ ಗೊಳಿಸಬೇಕೆಂಬ ಹೊತ್ತಿಗೆ ಸರಕಾರವೇ ಬದಲಾಗಿತ್ತು. ಫ್ರಾನ್ಸ್, ಜರ್ಮನಿ, ಬೆಲ್ಜಿಯಂ, ನೆದರ್‌ಲ್ಯಾಂಡ್‌ನ ಕೆಲಭಾಗಗಳಲ್ಲಿ ಅಧ್ಯಾಪಕರು ಕ್ರೈಸ್ತೀಯ ವಸ್ತ್ರ ಧರಿಸುವುದಕ್ಕೆ ವಿರೋಧವಿಲ್ಲ. ಮುಸ್ಲಿಮರ ತಲೆ ವಸ್ತ್ರಕ್ಕೆ ನಿಷೇಧವಿದೆ. ಯುರೋಪಿನಲ್ಲಿ ಇಂತಹ ಅಸಹನೀಯತೆ ಭಾರೀ ಪ್ರಮಾಣದಲ್ಲಿದ್ದರೆ ಭಾರತದಲ್ಲಿಯೂ ಅದು ಮುಕ್ತವಲ್ಲ. ಕೆಲವು ಶಾಲೆಗಳು ಬುರ್ಖಾ ಧರಿಸಿದ ಹೆಣ್ಮಕ್ಕಳನ್ನು ಸೇರಿಸಿಕೊಳ್ಳುವುದಕ್ಕೆ ನಿರಾಕರಿಸುತ್ತಿವೆ. ಶಿರ ವಸ್ತ್ರಧರಿಸಿದ ಅಧ್ಯಾಪಿಕೆಯರನ್ನು ವಜಾಮಾಡುತ್ತಿದೆ. ಈ ದ್ವೇಷದ ಮನೋಭಾವ ಖಂಡನೀಯವಾಗಿದೆ. ಅದರಿಂದ ಸಂಘರ್ಷ ಭರಿತ ವಾತಾವರಣ ಹುಟ್ಟು ಹಾಕುವುದಕ್ಕಷ್ಟೇ ಸಾಧ್ಯವಿದೆ. ಬಹುಸಂಖ್ಯಾತರು ಮೂಲಭೂತ ಹಕ್ಕುಗಳು ಎಂದು ಹೇಳಿ ಧಾರ್ಮಿಕ ಸ್ವಾತಂತ್ರ್ಯವನ್ನು ಕಿತ್ತು ಕೊಳ್ಳಲು ನೋಡುತ್ತಿದ್ದಾರೆ. ಇಂತಹವರು ಫ್ರಾನ್ಸ್‌ನ ಕೆಳಮನೆಗೆ ಹ್ಯಾಟ್ಸ್ ಆಫ್ ಹೇಳಬಹುದು. ಆದರೆ ಈ ಹ್ಯಾಟ್ಸ್ ಆಫ್ ದುಷ್ಪರಿಣಾಮವೊಂದಕ್ಕೆ ಮುನ್ನುಡಿ ಬರೆಯುತ್ತಿದೆಯೆಂದು ಅವರಿಗೆ ಜ್ಞಾನೋದಯ ವಾಗುವ ಕಾಲವೂ ಬರಬಹುದು.

## ಇಸ್ರೇಲ್: ಯೋಧರ ಆತ್ಮಹತ್ಯೆ

**ಜೆರುಸಲೇಮ್: ಇಸ್ರೇಲಿ ಸೇನೆಯಲ್ಲಿ ಆತ್ಮಹತ್ಯೆ ಪ್ರಕರಣವು ಹೆಚ್ಚುತ್ತಿದ್ದು ಈ ವರ್ಷದಲ್ಲಿ ಈ ವರೆಗೆ 19 ಯೋಧರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 2009ರಲ್ಲಿ 22 ಮಂದಿ ಯೋಧರು ಆತ್ಮಹತ್ಯೆ ಮಾಡಿಕೊಂಡಿದ್ದರು. ಈ ಬಗ್ಗೆ ಜಾಗೃತವಾಗಿರುವ ಇಸ್ರೇಲಿ ಆಡಳಿತವು ಯೋಧರಿಗೆ ಸೂಕ್ತ ತರಬೇತಿ ಕೊಡುವ ಯೋಜನೆ ಹಾಕಿಕೊಂಡಿದೆ.**

# 500 ಬಡ್ಡಿರಹಿತ ಸಹಕಾರಿ ಸಂಸ್ಥೆಯ ಸ್ಥಾಪನೆ



**ನವದೆಹಲಿ:** ದಿ ಸಹೂಲತ್ ಮೈಕ್ರೋ ಫೈನಾನ್ಸ್ ಸೊಸೈಟಿಯು 2016ರೊಳಗೆ ದೇಶದಾದ್ಯಂತ 500 ಬಡ್ಡಿರಹಿತ ಸಹಕಾರಿ ಸಂಸ್ಥೆಗಳನ್ನು ಸ್ಥಾಪಿಸುವ ಗುರಿಯನ್ನು ಹೊಂದಿದೆ.

ಜುಲೈ 9ರಂದು ಇಲ್ಲಿ ನಡೆದ ಸೊಸೈಟಿಯ ಸಭೆಯಲ್ಲಿ ನಾಲ್ಕು ಪ್ರಾದೇಶಿಕ ಕಚೇರಿಗಳನ್ನು ಮತ್ತು ತರಬೇತಿ ಹಾಗೂ ಸಂಶೋಧನಾ ವಿಭಾಗಗಳನ್ನು ಸ್ಥಾಪಿಸುವ ತೀರ್ಮಾನವನ್ನೂ ತೆಗೆದುಕೊಳ್ಳಲಾಗಿದೆ. ನೂತನವಾಗಿ ಸ್ಥಾಪನೆಗೊಂಡಿರುವ ದೆಹಲಿ ಮೂಲದ ಸಹೂಲತ್ ಹೊಸ ಸಹಕಾರಿ ಸಂಸ್ಥೆಗಳಿಗೆ ಮೂಲಧನವನ್ನು ಒದಗಿಸಲಿದೆ.

ಈ ಸಭೆಯನ್ನು ಜಮಾಅತೆ ಇಸ್ಲಾಮಿ ಹಿಂದ್ ಉಪಾಧ್ಯಕ್ಷರೂ ಸಹೂಲತ್ ಮೈಕ್ರೋ ಫೈನಾನ್ಸ್ ಸೊಸೈಟಿಯ ಅಧ್ಯಕ್ಷರೂ ಆಗಿರುವ ಪ್ರೊ ಕೆ.ಎ. ಸಿದ್ದೀಕ್ ಹಸನ್‌ರವರು ಉದ್ಘಾಟಿಸಿದರು. ಅಲ್ ಖೈರ್ ಚಾರಿಟೇಬಲ್ ಟ್ರಸ್ಟ್‌ನ ಅಧ್ಯಕ್ಷರೂ ಸಹೂಲತ್‌ನ ಉಪಾಧ್ಯಕ್ಷರೂ ಆದ ಅರ್ಶದ್ ಅಜ್ಮಲ್‌ರವರು ಸಹೂಲತ್ ಮೈಕ್ರೋ ಫೈನಾನ್ಸ್‌ನ ವಿಸ್ತೃತ ಮಾಹಿತಿಯನ್ನು ಸಭೆಯ ಮುಂದೆ ಇಟ್ಟರು. ಈ ಸಂದರ್ಭದಲ್ಲಿ ಪಟ್ನಾ ಮೂಲದ ಅಲ್ ಖೈರ್ ಚಾರಿಟೇಬಲ್ ಟ್ರಸ್ಟ್‌ನ ಕಾರ್ಯ ಮಾದರಿಯ ಬಗ್ಗೆ ಚರ್ಚಿಸಲಾಯಿತು. ಅಲ್ ಖೈರ್ ಒಂದು ರಿಜಿಸ್ಟರ್ಡ್ ಸಂಸ್ಥೆಯಾಗಿದ್ದು, 2002ರಿಂದ ಬಡ್ಡಿರಹಿತ ಕೋ-ಆಪರೇಟಿವ್ ಸಂಸ್ಥೆಯಾಗಿ ಕಾರ್ಯಾಚರಿಸುತ್ತಿದೆ. ಇದು ಬಿಹಾರದ ನಾಲ್ಕು ನಗರಗಳಲ್ಲಿ ಮೂರು ಸಾವಿರಕ್ಕಿಂತಲೂ ಹೆಚ್ಚು ಸದಸ್ಯರನ್ನು ಹೊಂದಿದೆ.

# ಜ.ಇ. ಕೇಂದ್ರ ಸಲಹಾ ಸಮಿತಿ ಸದಸ್ಯ ಕೆ.ಟಿ. ಅಬ್ದುರ್ರಹೀಮ್ ನಿಧನ



**ಶಾಂತಪುರಮ್: ಪ್ರಸಿದ್ಧ ವಿದ್ವಾಂಸ ವಾಗ್ಮಿ ಮತ್ತು ಜಮಾಅತೆ ಇಸ್ಲಾಮಿ ಹಿಂದ್ ಕೇಂದ್ರ ಸಲಹಾ ಸಮಿತಿ ಸದಸ್ಯರಾದ ಕೆ.ಟಿ. ಅಬ್ದುರ್ರಹೀಮ್‌ರವರು(67) ಜುಲೈ. 14ರಂದು ಪೆರಿಂದಲ್‌ಮಣ್ಣ ಆಸ್ಪತ್ರೆಯಲ್ಲಿ ನಿಧನರಾದರು.**

**1966ರಲ್ಲಿ ಜಮಾಅತೆ ಇಸ್ಲಾಮಿ ಹಿಂದ್‌ನ ಸಮಿತಿ ಸದಸ್ಯರಾದ ಅಬ್ದುರ್ರಹೀಮ್‌ರವರು ನಂತರ ಕೇರಳ ಜಮಾಅತ್‌ನ ಸಲಹಾ ಸಮಿತಿ ಸದಸ್ಯರಾದರು. ಕೇರಳದ ವಿವಿಧ ಜಿಲ್ಲೆಗಳಲ್ಲಿ ಮತ್ತು ಅಂಡಮಾನ್‌ನಲ್ಲಿ ಸುದೀರ್ಘಕಾಲ ಸಂಘಟನೆಗಾಗಿ ದುಡಿದಿದ್ದಾರೆ. ಎರ್ನಾಕುಳಂ ಇಸ್ಲಾಮಿಕ್ ಸೆಂಟರ್‌ನ ನಿರ್ದೇಶಕರಾಗಿಯೂ ಅನೇಕ ಮಸೀದಿಗಳಲ್ಲಿ ಖತೀಬರಾಗಿಯೂ ಅವರು ಕಾರ್ಯ ನಿರ್ವಹಿಸಿರುತ್ತಾರೆ. ಯು.ಎ.ಇ.ಯ ಇಸ್ಲಾಮಿ ಸಂದೇಶ ಪ್ರಚಾರ ಕಾರ್ಯಗಳಿಗೆ ಅವರು ನೇತೃತ್ವ ನೀಡಿದ್ದರು. ಪತ್ನಿ, ಮೂರು ಗಂಡು ಹಾಗೂ ಓರ್ವ ಪುತ್ರಿಯನ್ನು ಅವರು ಅಗಲಿದ್ದಾರೆ. ಇವರ ನಿಧನಕ್ಕೆ ಜಮಾಅತೆ ಇಸ್ಲಾಮಿ ಕರಾವಳಿ ವಲಯ ಸಂಚಾಲಕರಾದ ಅಬ್ದುಸ್ಸಲಾಮ್ ಯು. ತೀವ್ರ ಸಂತಾಪ ವ್ಯಕ್ತಪಡಿಸಿದ್ದು ಮೃತರಿಗೆ ಅಲ್ಲಾಹನು ಮಗ್ಫಿರತ್ ಮತ್ತು ಮರ್‌ಹಮತ್ ನೀಡಿ ಅನುಗ್ರಹಿಸಲಿ ಹಾಗೂ ಅವರ ಕುಟುಂಬಕ್ಕೆ ಸಹನೆ ದಯಪಾಲಿಸಲಿ ಎಂದು ಪ್ರಾರ್ಥಿಸಿದ್ದಾರೆ.**

# ಜಮಾಅತೆ ಇಸ್ಲಾಮಿ: ಅಂದು-ಇಂದು-ಮುಂದು

ಭಾಗ-7

**ದೇಶದ ಭದ್ರತೆ ಮತ್ತು ಸಾರ್ವಭೌಮತೆ**

ದೇಶದ ಆರ್ಥಿಕ ಸ್ವಾತಂತ್ರ್ಯ ರಾಷ್ಟ್ರೀಯ ಸಾರ್ವಭೌಮತೆ ಆಂತರಿಕ ಭದ್ರತೆ ಸಾಂಸ್ಕೃತಿಕ ಅನನ್ಯತೆಯನ್ನು ಸಂರಕ್ಷಿಸಿ ಅವುಗಳನ್ನು ಹಾಳುಗೆಡಹುವ ಸಾಮ್ರಾಜ್ಯಶಾಹಿ ಅತಿಕ್ರಮಣದ ವಿರುದ್ಧ ಜಮಾಅತೆ ಇಸ್ಲಾಮಿ ಸಕ್ರಿಯ ಹಸ್ತಕ್ಷೇಪವನ್ನು ನಡೆಸಿದೆ. ಅದು ಈಗಲೂ ಸತತ ಮುಂದುವರಿಯುತ್ತಿದೆ. ನಮ್ಮ ಸ್ವಾತಂತ್ರ್ಯ, ಸ್ವಯಂ ನಿರ್ಣಯ ಹಕ್ಕು, ಸಂಪತ್ತು ಮತ್ತು ಸಂಪನ್ಮೂಲಗಳನ್ನು ಸಾಮ್ರಾಜ್ಯಶಾಹೀ ಶಕ್ತಿಗಳಿಗೆ ಅಡವಿರಿಸುವ ಸರಕಾರದ ನೀತಿ ಹಾಗೂ ಈ ದೇಶವನ್ನು ಪುನಃ ಗುಲಾಮಗೊಳಿಸಿ ಶೋಷಿಸುವ ವಸಾಹತುಶಾಹಿ ಕುತಂತ್ರಗಳ ವಿರುದ್ಧ ಆಂದೋಲನವು ನಿರಂತರ ಹೋರಾಡುತ್ತಿದೆ. ಇದು ಜಮಾಅತ್‌ನ ಚಟುವಟಿಕೆಗಳ ಪ್ರಧಾನ ಭಾಗವಾಗಿದೆ. ಮಾತ್ರವಲ್ಲ ಜಮಾಅತ್‌ನ ಹೆಚ್ಚಿನೆಲ್ಲ ಚಟುವಟಿಕೆಗಳಲ್ಲಿಯೂ ಸಾಮ್ರಾಜ್ಯಶಾಹಿ ವಿರೋಧವು ಸೇರಿಕೊಂಡಿದೆ.

ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪೆನಿಯ ವ್ಯಾಪಾರ ಒಪ್ಪಂದಗಳು ಸೇರಿ ನಾನಾ ರೀತಿಯ ಕುತಂತ್ರಗಳಿಂದ ಬ್ರಿಟಿಷರು ಭಾರತವನ್ನು ಅಧೀನಗೊಳಿಸಿದರು. ಹಲವು ದಶಕಗಳ ಸುದೀರ್ಘ ಹೋರಾಟಗಳಿಂದ ನಾವು 1947ರಲ್ಲಿ ಸ್ವಾತಂತ್ರ್ಯಗಳಿಸಿದೆವು 1950ರ ಜನವರಿಯಲ್ಲಿ ನಮ್ಮ ದೇಶವು 'ಸ್ವತಂತ್ರ ಸಾರ್ವಭೌಮ ಗಣರಾಷ್ಟ್ರ'ವೆಂದು ಘೋಷಿಸಲ್ಪಟ್ಟಿತು. ಈ ಸ್ವತಂತ್ರ ಸಾರ್ವಭೌಮತೆಯನ್ನು ಒತ್ತೆಯಿರಿಸುವ ತಂತ್ರಗಳನ್ನು ಅನಂತರ ಸಾಮ್ರಾಜ್ಯಶಾಹಿತ್ವವು ಪ್ರಯೋಗಿಸಿತು. 1990ರಲ್ಲಿ ಕೋಮುವಾದವು ಪ್ರಬಲವಾದ ಕಾಲದಲ್ಲಿಯೇ ಸಾಮ್ರಾಜ್ಯಶಾಹಿ ಅತಿಕ್ರಮಣವೂ ಸಕ್ರಿಯವಾಗಿತ್ತು. ಇನ್ನೊಂದರ್ಥದಲ್ಲಿ ಕೋಮು ಧ್ರುವೀಕರಣವು ಸಾಮ್ರಾಜ್ಯಶಾಹೀ ಅತಿಕ್ರಮಣದ ವಾಹನವಾಗಿತ್ತು. ಒಡೆದು ಆಳುವುದೇ ಅವರ ನೀತಿಯಷ್ಟೆ. ವ್ಯಾಪಾರ ಒಪ್ಪಂದಗಳು, ಅಂತಾರಾಷ್ಟ್ರೀಯ ಬ್ಯಾಂಕುಗಳ ಸಾಲಕ್ಕೆ ಶರ್ತಗಳು, ಕೃಷಿ ಒಪ್ಪಂದಗಳು, ಮುಕ್ತ ಮಾರುಕಟ್ಟೆ, ಆಯುಧ-ಅಣು ಒಪ್ಪಂದಗಳು, ಸೇನಾವಲಯದ ಸಹಕಾರ ಇತ್ಯಾದಿ ಅನೇಕ ಅಗೋಚರ ಕುಣಿಕೆಗಳ ಯೋಜನೆಗಳಿಂದ ನಮ್ಮ ದೇಶವನ್ನು ಬೆಡ್ಡಾದಲ್ಲಿ ಕೆಡಹುವುದೇ ಸಾಮ್ರಾಜ್ಯಶಾಹಿತ್ವದ ತಂತ್ರವಾಗಿತ್ತು. ಜಾಗತೀಕರಣ, ಉದಾರೀಕರಣ, ಇತ್ಯಾದಿ ಮುದ್ದಿನ ಹೆಸರುಗಳಿಂದ ಸಾಮ್ರಾಜ್ಯತ್ವವು ಪ್ರವೇಶಿಸಿತು. ಐ.ಎಂ.ಎಫ್., ಜಾಗತಿಕ ಬ್ಯಾಂಕ್, ಎ.ಡಿ.ಬಿ. ಮುಂತಾದವುಗಳ ಸಾಲ ಶರ್ತಗಳು, ಜಾಗತಿಕ ವ್ಯಾಪಾರಿ ಸಂಘಟನೆ(ಡಬ್ಲ್ಯೂಟಿಓ)ಯ ಸದಸ್ಯತ್ವ, ಗ್ಯಾಟ್ ಒಪ್ಪಂದ, ಸಿಟಿಬಿಟಿ (Comprehensive est Ban Treaty) ಒಪ್ಪಂದದಿಂದ ಆರಂಭವಾಗಿ ಈಚೆಗಿನ ಅಣುಒಪ್ಪಂದದ ವರೆಗಿನ ಎಲ್ಲವೂ ಗುಲಾಮೀಕರಣದ ದಾರಿಗಳಾಗಿದ್ದುವು. ಐ.ಎಂ.ಎಫ್., ಜಾಗತಿಕ ಬ್ಯಾಂಕು ಇತ್ಯಾದಿಗಳಿಂದ ಸಾಲ ದೊರೆಯಲಿಕ್ಕಾಗಿ ನಮ್ಮ ಆಡಳಿತಗಾರರು ಅಂಗೀಕರಿಸಿದ ಶರ್ತಗಳು, 1994ರಲ್ಲಿ ಮೊರೊಕ್ಕೋದಲ್ಲಿ ಜರಗಿದ ಜಾಗತಿಕ ವಾಣಿಜ್ಯ ಸಂಘಟನೆಯ ಸಮ್ಮೇಳನದಲ್ಲಿ ಕೃಷಿಗೆ ಸಂಬಂಧಿಸಿ ಸಹಿ ಹಾಕಿದ 27 ಒಪ್ಪಂದಗಳು, ಗ್ಯಾಟ್ ಒಪ್ಪಂದದ ಟ್ರಿಪ್ಸ್ ಕರಾರು, ಅಣು ಒಪ್ಪಂದ



ಮತ್ತು ಅದರ ಭಾಗವಾಗಿ 1-2-3 ಒಪ್ಪಂದ ಇತ್ಯಾದಿಗಳಲ್ಲಿರುವ ಹೆಚ್ಚಿನ ಶರ್ತಗಳು ಭಾರತದ ಸ್ವಾತಂತ್ರ್ಯವನ್ನು ಸಾಮ್ರಾಜ್ಯಶಾಹಿ ರಣಹದ್ದುಗಳಿಗೆ ಒತ್ತೆಯಿರಿಸುವ ಮತ್ತು ಪ್ರಜಾಪ್ರಭುತ್ವ-ಗಣತಂತ್ರ ವ್ಯವಸ್ಥೆಯನ್ನು ನಿರಾಕರಿಸುವವುಗಳಾಗಿದ್ದುವು. ವಿಶೇಷ ಒಪ್ಪಂದಗಳಿಲ್ಲದೆಯೇ ಸಾಂಸ್ಕೃತಿಕ ರಂಗಗಳಲ್ಲಿ ಸಾಮ್ರಾಜ್ಯಶಾಹಿತ್ವವು ನಡೆಸಿದ ಅತಿಕ್ರಮಣವು ಇದಕ್ಕಿಂತ ಭೀಕರವಾಗಿದೆ. ಮಾನವನನ್ನು ನವ ವಸಾಹತುಶಾಹಿತ್ವವು ದೈಹಿಕವಾಗಿಯಲ್ಲ ಮಾನಸಿಕವಾಗಿಯೇ ಅಧೀನಪಡಿಸುತ್ತದೆ. ಜಮಾಅತೆ ಇಸ್ಲಾಮಿ ಮತ್ತು ಅದರ ಪೋಷಕ ಸಂಘಟನೆಗಳು ನವ ಸಾಮ್ರಾಜ್ಯಶಾಹಿತ್ವದ ಇಂಥ ಅತಿಕ್ರಮಣಗಳ ವಿರುದ್ಧ ನಿನ್ನೆಗಳಲ್ಲಿ ನಡೆಸಿದ ಮತ್ತು ಈಗಲೂ ನಡೆಸುತ್ತಿರುವ ಹೋರಾಟಗಳು ಅಪ್ರತಿಮವಾಗಿವೆ.

ಮಾನವರ ಎಲ್ಲ ಅರ್ಥಗಳಲ್ಲಿರುವ ಸ್ವಾತಂತ್ರ್ಯ ರಕ್ಷಣೆಗೆ ಕಟಿಬದ್ಧವಾಗಿರುವ ಆಂದೋಲನವು ದೇಶವನ್ನು ಅಡವಿರಿಸುವ ಸ್ವಾರ್ಥಹಿತಾಸಕ್ತರ ವಿರುದ್ಧ ಜಾಗೃತವಾಗಿದ್ದು ಜನರಿಗೆ ಮುನ್ನೆಚ್ಚರಿಕೆ ನೀಡುತ್ತಿದೆ. ಸಾಮ್ರಾಜ್ಯಶಾಹಿತ್ವ ವಿರೋಧವನ್ನು ಸಾರ್ವಜನಿಕ ಗೊಳಿಸುವ ನಿಟ್ಟಿನಲ್ಲಿ ಜಮಾಅತ್‌ನ ಹಿರಿಯ ಪಾತ್ರವಿದೆ. ಅಣು ಒಪ್ಪಂದ, ಸಿಟಿಬಿಟಿ, ಗ್ಯಾಟ್ ಮುಂತಾದ ಒಪ್ಪಂದಗಳ ಅಪಾಯಗಳನ್ನು ಜಮಾಅತ್ ಬೆಟ್ಟು ಮಾಡಿ, ಅವು ದೇಶಕ್ಕೆ ನಾನಾ ರೀತಿಯಿಂದ ಅಪಾಯಕಾರಿಯಾಗಿರುವದರಿಂದಲೇ ಜನರ ಜತೆಗೂಡಿ ಅವುಗಳ ವಿರುದ್ಧ ಹೋರಾಡುತ್ತಿದೆ. ಅಮೇರಿಕ, ಇಸ್ರೇಲ್ ಮುಂತಾದ ರಾಷ್ಟ್ರಗಳೊಡನೆ ಮಿತಿಮೀರಿದ ಗೆಳೆತನ ಮತ್ತು ಸಹಕಾರ ಒಪ್ಪಂದಗಳನ್ನು ದೇಶದ ಭದ್ರತೆಗೆ ಮಾರಕವೆಂದು ಮನಗಂಡೇ ವಿರೋಧಿಸುತ್ತಿದೆ. ಜಮಾಅತೆ ಇಸ್ಲಾಮಿಯ ಆಶಂಕೆಯು ಎಷ್ಟರ ಮಟ್ಟಿಗೆ ಸತ್ಯವೆಂದು ಮುಂಬೈ ಭಯೋತ್ಪಾದಕ ಆಕ್ರಮಣದಲ್ಲಿ ಅಮೇರಿಕನ್ ಪೌರ ಡೇವಿಡ್ ಹೆಡ್ಲಿಯ ಸಹಭಾಗಿತ್ವವು ಭೀಕರ ಅನುಭವವಾಗಿದೆ. ಭಯೋತ್ಪಾದಕತೆಯ ವಿರುದ್ಧ ಯುದ್ಧ ಸಾರಿ, ನಮ್ಮ ದೇಶದೊಂದಿಗೆ ಅನೇಕ ಕರಾರು ಮತ್ತು ಸೌಹಾರ್ದವಿರುವ ಅಮೇರಿಕವು, ಭಾರತದಲ್ಲಿ ನಡೆದ ಭಯೋತ್ಪಾದಕ ದಾಳಿಯ ಸೂತ್ರಧಾರರಲ್ಲೊರ್ವನಾದ ಹೆಡ್ಲಿಯನ್ನು ನಮಗೆ ಬಿಟ್ಟು ಕೊಡದೆ ಇರುವುದಕ್ಕೆ ಕಾರಣವೇನು? ಮುಂಬೈ ಭಯೋತ್ಪಾದಕ ಆಕ್ರಮಣದಲ್ಲಿ ಅಮೇರಿಕದ ಗುಪ್ತಚರ ಸಂಘಟನೆಯಾಗಿರುವ ಸಿ.ಐ.ಎ.ಯ ಪಾತ್ರದ ಬಗ್ಗೆಯೂ ಸಂಶಯವಿದೆಯಷ್ಟೆ. ಸಾಮ್ರಾಜ್ಯಶಾಹಿತ್ವವು (6ನೇ ಪುಟಕ್ಕೆ)

# ಬುನ್ಯಾನುಮ್ಮರ್‌ಸೂಸ್

ತರಬೇತಿ



**ಜೂನ್ 26-27ರಂದು ಬಾಗಲಕೋಟೆಯಲ್ಲಿ ನಡೆದ ಜ.ಇಸ್ಲಾಮಿ ರಾಜ್ಯ ಘಟಕದ ಸದಸ್ಯರ ಸಭೆಯಲ್ಲಿ ಅಮೀನುಲ್ ಹಸನ್ ಮಾಡಿದ ಭಾಷಣ**

"ಭೂಮಿ-ಆಕಾಶಗಳಲ್ಲಿರುವ ಪ್ರತಿಯೊಂದು ವಸ್ತುವೂ ಅಲ್ಲಾಹನನ್ನು ಜಪಿಸಿದೆ ಮತ್ತು ಅವನು ಪ್ರಬಲನೂ ಯುಕ್ತಿಪೂರ್ಣನೂ ಆಗಿರುತ್ತಾನೆ. ಸತ್ಯವಿಶ್ವಾಸಿಗಳೇ, ನೀವು ಮಾಡದ್ದನ್ನು ಆಡುತ್ತೀರೇಕೆ? ಮಾಡದ್ದನ್ನು ಆಡುವುದು ಅಲ್ಲಾಹನ ಬಳಿ ಅತ್ಯಂತ ಅಪ್ರಿಯ ಕೃತ್ಯವಾಗಿದೆ. ಅಲ್ಲಾಹನಿಗಂತು, ಅವನ ಮಾರ್ಗದಲ್ಲಿ ಸೀಸದ ಎರಕ ಹೊಯ್ದ ಉಕ್ಕಿನ ಗೋಡೆಯೋ ಎಂಬಂತೆ ಪಂಕ್ತಿಬದ್ಧರಾಗಿ ಹೋರಾಡುವವರೇ ಪ್ರಿಯರು."

(ಪವಿತ್ರ ಕುರ್‌ಆನ್: ಅಸ್ಸಫ್ಫ್: 1-4)

ಸತ್ಯ-ಮಿಥ್ಯಗಳ ಸಂಘರ್ಷದಲ್ಲಿ ಮಾನವರನ್ನು ಎರಡು ಗುಂಪುಗಳಾಗಿ ಅಲ್ಲಾಹನು ವಿಂಗಡಿಸಿದ್ದಾನೆ. ಒಂದು ಅಲ್ಲಾಹನ ಪಕ್ಷ, ಇನ್ನೊಂದು ಶೈತಾನನ ಪಕ್ಷ. ಸತ್ಯ-ಮಿಥ್ಯಗಳ ಸಂಘರ್ಷದಲ್ಲಿ ಈ ಮೇಲೆ ತಿಳಿಸಿರುವಂತೆ ಒಂದೆಡೆ ಅಲ್ಲಾಹನ ಪಕ್ಷವಿದ್ದರೆ, ಅದಕ್ಕೆದುರಾಗಿ ಶೈತಾನನ ಪಂಗಡವಿರುತ್ತದೆ. ಶೈತಾನನ ಪಕ್ಷದಲ್ಲಿರುವವರ ಅಭ್ಯಾಸಗಳು, ಗುಣಗಳು ಶೈತಾನನಂತೆಯೇ ಇರುತ್ತದೆ. ಅಲ್ಲಾಹನ ಪಕ್ಷದಲ್ಲಿರುವವರ ಚಾರಿತ್ರ್ಯ, ಗುಣ ನಡತೆ ಮತ್ತು ಪರಸ್ಪರ ಸಂಬಂಧವು ದೇವಶಿಕ್ಷಣಕ್ಕೆ ಅನುಗುಣವಾಗಿರುವುದು.

ಶೈತಾನನ ಪಕ್ಷದ ಬಗ್ಗೆ ಅಲ್ಲಾಹ್ ಹೇಳುತ್ತಾನೆ, "ಅವರು ಶೈತಾನನ ಪಕ್ಷದವರು. ಎಚ್ಚರಿಕೆ! ಶೈತಾನನ ಪಕ್ಷದವರೇ ನಷ್ಟಕ್ಕೊಳಗಾಗುವವರು." (ಅಲ್ ಮುಜಾದಲ: 19)

ಇನ್ನು ಆ ಪಕ್ಷಕ್ಕೆ ವಿರುದ್ಧ ಕಾರ್ಯಾಚರಿಸುತ್ತಿರುವ ನಮಗೆ ಅಂದರೆ ಸತ್ಯದ ಪರವಾಗಿ ಹೋರಾಡುತ್ತಿರುವವರಿಗೆ ರಂಗವು ಹೂವಿನ ಹಾಸಿಗೆಯಂತಿರಲಾರದು. ಹೆಜ್ಜೆ ಹೆಜ್ಜೆಗೂ ಶೈತಾನನ ದುರಾಕ್ರಮಣ, ಪ್ರಲೋಭನೆಯನ್ನು ಎದುರಿಸಬೇಕಾಗುತ್ತದೆ. ಮಾತ್ರವಲ್ಲ, ಸ್ವಯಂ ನಮ್ಮ ಚಿತ್ತವೂ ಅದರತ್ತ ಆಕರ್ಷಿತವಾಗುತ್ತಿರುತ್ತದೆ. ಅಲ್ಲಾಹನಿಗಾಗಿ ಹೋರಾಡುತ್ತಿರುವ ಈ ಸಂಘಟನೆಯ ಬಗ್ಗೆ ಅಲ್ಲಾಹ್ ಹೇಳುತ್ತಾನೆ, "ನಾನು ಮತ್ತು ನನ್ನ ಸಂದೇಶವಾಹಕರೇ ವಿಜಯಿಗಳಾಗುವೆವೆಂದು ಅಲ್ಲಾಹನು ವಿಧಿ ಬರೆದು ಬಿಟ್ಟಿರುವನು. ವಾಸ್ತವದಲ್ಲಿ ಅಲ್ಲಾಹನು ಅತ್ಯಂತ ಬಲಿಷ್ಠನೂ ಅಜೇಯನೂ ಆಗಿರುತ್ತಾನೆ."

(ಅಲ್ ಮುಜಾದಲ: 21)

ಆದ್ದರಿಂದ ಈ ಸತ್ಯ-ಮಿಥ್ಯ ಸಂಘರ್ಷದಲ್ಲಿ ಕೊಂಚವೂ ಎದೆಗುಂದಬೇಕಾದ ಅವಶ್ಯಕತೆ ನಮಗಿಲ್ಲ. ಅಲ್ಲಾಹನ ಪಕ್ಷವಾಗಿರುವ ಕಾರಣ ಅಂತಿಮ ಯಶಸ್ಸು ನಮಗೆ ಸಿಗುವುದು ಖಂಡಿತವೆಂದು ಈ ವಚನದ ಮೂಲಕ ಅಲ್ಲಾಹ್ ಸ್ಪಷ್ಟಪಡಿಸಿದ್ದಾನೆ. ಅದೇ ರೀತಿ ಎದುರು ಪಕ್ಷವನ್ನು ನೋಡಿ ಭೀತರಾಗುವುದೂ ಬೇಕಿಲ್ಲ. ಆ ಪಕ್ಷವೇನೂ ಬಲಿಷ್ಠ ಪಕ್ಷ ಅಲ್ಲ. ಅದು ಲೌಕಿಕ ಲಾಭದ ಆಧಾರದಲ್ಲಿ ಎದ್ದು ನಿಂತ ಪಕ್ಷವಾಗಿದೆ. "ನೀವು ಅವರನ್ನು ಸಂಘಟಿತರೆಂದು ಭಾವಿಸುತ್ತೀರಿ. ಆದರೆ ಅವರ ಮನಸ್ಸುಗಳು ಪರಸ್ಪರರಿಂದ ಸಿಡಿದು ಹೋಗಿವೆ" (ಅಲ್ ಹಶ್ರ್: 14) ಎಂದು ಕುರ್‌ಆನ್ ಹೇಳುತ್ತದೆ. ಅವರು ತಮ್ಮ ಕೃತ್ಯಗಳ ಪರಿಣಾಮವೇನಾಗುವುದೆಂದು ಅರಿಯದ 'ಮುಗ್ಧ' ಜನರಾಗಿದ್ದಾರೆ.

ಅದೇ ವೇಳೆ, ಅಲ್ಲಾಹನು ಸತ್ಯವಿಶ್ವಾಸಿಗಳನ್ನು ಕರೆದು ಹೇಳುತ್ತಾನೆ, "ಓ ಸತ್ಯವಿಶ್ವಾಸಿಗಳೇ, ನೀವು ನನ್ನ ಮಾರ್ಗದಲ್ಲಿ ಹೋರಾಡುವುದಕ್ಕಾಗಿ ಹಾಗೂ ನನ್ನ ಸಂಪ್ರೀತಿ ಪ್ರಾಪ್ತಿಗಾಗಿ (ಊರು ಬಿಟ್ಟು, ನಿಮ್ಮ ಮನೆಗಳಿಂದ) ಹೊರಟಿರುವಿರಾದರೆ, ನನ್ನ ಮತ್ತು ನಿಮ್ಮ ಶತ್ರುಗಳನ್ನು ಮಿತ್ರರನ್ನಾಗಿ ಮಾಡಬೇಡಿರಿ." (ಅಲ್ ಮುಮ್ತಹಿನ: 1)

ಅಲ್ಲಾಹನ ಪಕ್ಷದವರನ್ನು ಹಲವು ರೀತಿಯ ಕ್ಷೋಭೆಗಳಿಂದ ಪರೀಕ್ಷಿಸಲಾಗುವುದು. ಹಾಗಾಗಿ "ನಮ್ಮ ಪ್ರಭೂ, ನಮ್ಮನ್ನು ಸತ್ಯನಿಷೇಧಿಗಳ ಪಾಲಿಗೆ ಪರೀಕ್ಷಾ ಸಾಧನವಾಗಿ ಮಾಡಿಬಿಡಬೇಡ ಮತ್ತು ನಮ್ಮ ಪ್ರಭೂ, ನಮ್ಮ ತಪ್ಪುಗಳನ್ನು ಕ್ಷಮಿಸು. ನಿಸ್ಸಂದೇಹವಾಗಿಯೂ ನೀನೇ ಪ್ರಬಲನೂ ಯುಕ್ತಿಪೂರ್ಣನೂ ಆಗಿರುತ್ತೀ" (ಅಲ್ ಮುಮ್ತಹಿನ: 5) ಎಂಬುದಾಗಿ ನಮ್ಮ ಪ್ರಾರ್ಥನೆಯಾಗಬೇಕು. ಇದು ಹಿಝ್ಬುಲ್ಲಾ ಮತ್ತು ಹಿಝ್ಬುಶ್ಶೈತಾನ್‌ಗಳ ನಡುವಿನ ವ್ಯತ್ಯಾಸ. ಕೊನೆಗೆ ಹಿಝ್ಬುಲ್ಲಾಗೆ ಜಯ ಲಭಿಸಲಿಕ್ಕಿದೆ. ಆದರೆ ಅವರು ಸೀಸದಿಂದ ಎರಕ ಹೊಯ್ದ ಗೋಡೆಗಳಂತಾಗಿರಬೇಕಾದುದು ಶರ್ತವಾಗಿದೆ.

ಇದಾಗಿದೆ ಮೊದಲ ಶರ್ತ. ಅಂದರೆ ನಾವು ಅಲ್ಲಾಹನ ಪಕ್ಷದವರು, ನಮ್ಮ ಸಮರ ಶೈತಾನನ ಪಕ್ಷದವರೊಂದಿಗಿದೆ, ನಮ್ಮ ಪಕ್ಷ ಕೇವಲ ಅಲ್ಲಾಹನ ಸಂಪ್ರೀತಿಗಾಗಿ ಹೋರಾಡಬೇಕಾಗಿದೆ ಎಂಬ ಭಾವನೆ ನಮ್ಮಲ್ಲಿರಬೇಕು.

ಎರಡನೆಯದಾಗಿ, ಪ್ರತಿಯೊಬ್ಬರೂ ಸ್ವಯಂ ಕೆಲಸಕ್ಕೆ ಮುಂದಾಗದಿದ್ದರೆ ಮುಸ್ಲಿಮ್ ಜನಕೂಟವು ಸೀಸದಿಂದ ಎರಕ ಹೊಯ್ದ ಗೋಡೆಗೆ ಸಮಾನರಾಗಲು ಸಾಧ್ಯವಿಲ್ಲ. ಅಂದರೆ ಆಬಾಲವೃದ್ಧರೆನ್ನದೆ ಎಲ್ಲರೂ ದೇವ ಮಾರ್ಗದಲ್ಲಿ ಪರಿಶ್ರಮ ಪಡಲು ಸ್ವಪ್ರೇರಣೆಯಿಂದ ಮುಂದಾಗಬೇಕು. ನಮ್ಮ ವೈಯಕ್ತಿಕ ಹೊಣೆಗಾರಿಕೆಯನ್ನು ಪಾಲಿಸದಿದ್ದರೆ ಈ ಪಾರಿಭಾಷಿಕಕ್ಕೆ ನಾವು ಅರ್ಹರಾಗಲಾರೆವು. "ಅಂಧಕಾರದಿಂದ ಹೊರತೆಗೆದು ಪ್ರಕಾಶದೆಡೆಗೆ ತರಲಿಕ್ಕಾಗಿ" (ಅಲ್ ಹದೀದ್: 9) ಎಂದು (6ನೇ ಪುಟಕ್ಕೆ)

# ಬುನ್ಯಾನುಮ್ಮರ್‌ಸೂಸ್

(5ನೇ ಪುಟದಿಂದ)

ಸತ್ಯವಿಶ್ವಾಸಿಗಳನ್ನುದ್ದೇಶಿಸಿ ಹೇಳಲಾಗಿದೆ. ಅಂದರೆ ನಿಮ್ಮನ್ನು ಅಂಧಕಾರದಿಂದ ಹೊರತೆಗೆದು ಪ್ರಕಾಶದೆಡೆಗೆ ತರಲಿಕ್ಕಾಗಿ ಎಬ್ಬಿಸಲಾಗಿದೆ. ನಿಮ್ಮ ಸಮರ ಅಂಧಕಾರದೊಂದಿಗಿರುವುದು, ಅಜ್ಞಾನದೊಂದಿಗಿರುವುದು. ಪ್ರಕಾಶವೆಂಬುದನ್ನು ವ್ಯಾಖ್ಯಾನಗಾರರು ಕುರ್‌ಆನ್, ಸುನ್ನತ್, ಇಸ್ಲಾಮಿ ವ್ಯವಸ್ಥೆ ಇತ್ಯಾದಿಗಳಿಗೆ ಬಳಸಿದ್ದಾರೆ. ಒಟ್ಟಿನಲ್ಲಿ ಪಾಪಗಳಿಂದಾಗಿ ಜನರ ಹೃದಯಗಳಲ್ಲಿ ಆಚ್ಛಾದಿಸಿರುವ ಅಂಧಕಾರವನ್ನು ನೀಗಿಸಿ ಅವರ ಮನ ಮಸ್ತಿಷ್ಕಗಳಲ್ಲಿ ಪ್ರಕಾಶ ತುಂಬುವ ನಮ್ಮ ಹೊಣೆಗಾರಿಕೆಯನ್ನು ನಿಭಾಯಿಸದೆ ನಾವು 'ಸೀಸದಿಂದ ಎರಕ ಹೊಯ್ದ ಗೋಡೆ'ಗಳಂತಾಗಲಾರೆವು. 'ಬುನ್ಯಾನುಮ್ಮರ್‌ಸೂಸ್'ಗೆ ಕೆಲವು ವಿದ್ವಾಂಸರು 'ಸೀಸದಿಂದ ಎರಕ ಹೊಯ್ದ ಗೋಡೆ'ಗಳೆಂದು ಅನುವಾದಿಸಿದ್ದಾರೆ. ಇನ್ನು ಕೆಲವರು ಅದನ್ನು 'ಬಲಿಷ್ಠ ಕೋಟೆ'ಗೆ ಹೋಲಿಸಿದ್ದಾರೆ. ಆ ಅರ್ಥದಲ್ಲೂ ನಾವು ವಿಶ್ವಾಸದ ಒಂದು ಬಲಿಷ್ಠ ಕೋಟೆ ನಿರ್ಮಿಸಿ ಅದರೊಳಗೆ ಪ್ರವೇಶಿಸಿದರೆ ನಾವು ರಕ್ಷಣೆ ಹೊಂದಬಲ್ಲೆವು ಎನ್ನಬಹುದು. ಅಂದರೆ ಹೊರಗಿನ ಶತ್ರುಗಳಿಂದಲೂ ರಕ್ಷಣೆ ಹೊಂದಬಹುದು. ಒಳಗೂ ಪ್ರಶಾಂತ ಸಂರಕ್ಷಣೆ ಒದಗಬಹುದು.

ಈ ಹೊಣೆಗಾರಿಕೆಯನ್ನು ನಿಭಾಯಿಸದಿದ್ದರೆ ನಮ್ಮ ಅವಸ್ಥೆ ಹೊಣೆ ಮರೆತ ಗ್ರಂಥದವರಂತಾಗಬಹುದು. ಪವಿತ್ರ ಕುರ್‌ಆನ್ ಹೇಳುತ್ತದೆ,

"ತೌರಾತ್‌ನ ವಾಹಕರಾಗಿ ನೇಮಿಸಲ್ಪಟ್ಟರೂ ಅದರ ಭಾರವನ್ನು ಹೊರದೆ ಇದ್ದವರ ಉದಾಹರಣೆಯು ಗ್ರಂಥಗಳು ಹೇರಲ್ಪಟ್ಟ ಕತ್ತೆಗಳಂತಿದೆ." (ಅಲ್ ಜುಮುಅ: 5) ಅಂದರೆ ತನ್ನ ಬೆನ್ನ ಮೇಲೆ ಇರುವುದು ಗ್ರಂಥಗಳೆಂಬುದನ್ನು ತಿಳಿಯದಂತಹ ಒಂದು ನಿಕೃಷ್ಟ ಪ್ರಾಣಿಯಂತಾದೀತು ಹೊಣೆಗಾರಿಕೆ ನಿಭಾಯಿಸದವರ ಸ್ಥಿತಿ ಎಂದು ಅಲ್ಲಾಹನು ಇಲ್ಲಿ ಸೂಚ್ಯವಾಗಿ ತಿಳಿಸಿದ್ದಾನೆ. ಒಟ್ಟಿನಲ್ಲಿ ಕ್ರಿಯಾಶೀಲರಾಗುವುದು, ಹೊಣೆಗಾರಿಕೆಯನ್ನು ನಿಭಾಯಿಸುವುದು 'ಬುನ್ಯಾನುಮ್ಮರ್‌ಸೂಸ್'ಗಿರುವ ಎರಡನೆಯ ಶರ್ತವಾಗಿದೆ.

ಮೂರನೆಯದಾಗಿ, ಇತರರ ಮೇಲೆ ಹೊಣೆಭಾರ ವಿರಿಸುವುದರ ಬದಲು ಸ್ವಯಂ ತನ್ನ ಮೇಲೆ ಭರವಸೆಯನ್ನು ಹೊಂದಿರಬೇಕು. ಅಂದರೆ ಕಾಯಾ ವಾಚಾ ಮನಸಾ ಕಾರ್ಯಪ್ರವೃತ್ತರಾಗಬೇಕು ಮತ್ತು ಕುಟುಂಬಿಕರನ್ನೂ ದೇವಮಾರ್ಗದಲ್ಲಿ ಪರಿಶ್ರಮ ಪಡುವಂತೆ ಪ್ರೇರೇಪಿಸಬೇಕು. ಇತರರು ಹಾಗೆ ಮಾಡಬೇಕು, ಹೀಗೆ ಮಾಡಬೇಕು, ನಾಯಕರು ಹೀಗಿರಬೇಕು ಅನ್ನುವುದಕ್ಕಿಂತ ತಾನು ಏನು ಮಾಡಬೇಕು ಎಂಬುದನ್ನು ಪ್ರತಿಯೊಬ್ಬರೂ ಅರಿತು ಕಾರ್ಯಪ್ರವೃತ್ತವಾಗಬೇಕಾಗಿದೆ. 'ಬುನ್ಯಾನುಮ್ಮರ್‌ಸೂಸ್' ಆಗಲು ನಾವು ನಮ್ಮನ್ನು ಹೇಗೆ ತೊಡಗಿಸಿಕೊಳ್ಳಬೇಕೆಂಬುದನ್ನು ಪವಿತ್ರ ಕುರ್‌ಆನ್ ಈ ಕೆಳಗಿನ ಪದಗಳಿಂದ ತಿಳಿಸಿಕೊಡುತ್ತದೆ,

"ಅಲ್ಲಾಹನ ಬಳಿ ಏನಿದೆಯೋ ಅದು ವ್ಯಾಪಾರ ಮತ್ತು ಮನರಂಜನೆಗಿಂತ ಉತ್ತಮವಾಗಿದೆ ಮತ್ತು ಅಲ್ಲಾಹನು ಅತ್ಯುತ್ತಮ ಅನ್ನದಾತನಾಗಿದ್ದಾನೆ."

(ಅಲ್ ಜುಮುಅ: 11)

"ಸತ್ಯವಿಶ್ವಾಸಿಗಳೇ, ನಿಮ್ಮ ಸಂಪತ್ತು ಮತ್ತು ನಿಮ್ಮ ಸಂತಾನಗಳು ನಿಮ್ಮನ್ನು ಅಲ್ಲಾಹನ ಸ್ಮರಣೆಯಿಂದ ಅಲಕ್ಷ್ಯಗೊಳಿಸದಿರಲಿ."

(ಅಲ್ ಮುನಾಫಿಕೂನ್: 9)

"ನಿಮ್ಮ ಸಂಪತ್ತು ಮತ್ತು ಸಂತತಿಗಳು ಒಂದು ಪರೀಕ್ಷೆಯಾಗಿದೆ. ಅತ್ಯುತ್ತಮ ಪ್ರತಿಫಲವಂತು ಅಲ್ಲಾಹನ ಬಳಿಯಲ್ಲೇ ಇದೆ."

(ಅತ್ತಗಾಬುನ್: 15)

ಅಂದರೆ ನೀವು ವ್ಯಾಪಾರ, ಸಂಪತ್ತು, ಸಂತತಿಗಳ ಚಿಂತೆಯಲ್ಲಿಯೇ ಬಿದ್ದುಕೊಂಡು ಅಲ್ಲಾಹನ ಸ್ಮರಣೆಯಿಂದ, ಅಲ್ಲಾಹನಿಗಾಗಿ ಪರಿಶ್ರಮ ಪಡುವುದರಿಂದ ಅಲಕ್ಷ್ಯರಾಗಿದ್ದು ಬಿಡಬೇಡಿರಿ ಎಂದು ಈ ಮೂಲಕ ಎಚ್ಚರಿಸಲಾಗಿದೆ. ಹೀಗೆ ದೇವ ಮಾರ್ಗದಲ್ಲಿ ಸಂಪತ್ತು ವ್ಯಯಿಸುವುದನ್ನು ಪ್ರೋತ್ಸಾಹಿಸಲಾಗಿದೆ. ಅಲ್ಲಾಹನ ಮಾರ್ಗದಲ್ಲಿ ಧನ ವ್ಯಯಿಸುವುದನ್ನು ಅಲ್ಲಾಹನಿಗೆ ಶ್ರೇಷ್ಠ ಸಾಲ ನೀಡುವುದೆಂದು (ಅಲ್‌ಹದೀದ್: 18) ಬಣ್ಣಿಸಲಾಗಿದೆ.

ತರುವಾಯ ನಿಮ್ಮ ಮಾತು-ಕೃತಿಗಳಲ್ಲಿ ಏಕರೂಪತೆಯನ್ನು ತಂದುಕೊಳ್ಳಿ ಎನ್ನಲಾಯಿತು. "ನೀವು ಮಾಡದ್ದನ್ನು ಆಡುತ್ತೀರೇಕೆ?" (ಅಸ್ಸಫ್ಫ್: 2) ಎಂಬ ಪ್ರಶ್ನೆಯು ಮಾತು-ಕೃತಿಗಳಲ್ಲಿ ಏಕರೂಪತೆಯಿರಬೇಕೆಂಬ ಬೇಡಿಕೆಯನ್ನಿರಿಸುತ್ತದೆ. ಹಾಗೆಯೇ ನಿಮ್ಮನ್ನು ತೊಡಗಿಸಿಕೊಳ್ಳಿ, ಧನ ವ್ಯಯಿಸಿರಿ, ಸಂತಾನವನ್ನು ಧರ್ಮದ ಕಾರ್ಯದಲ್ಲಿ ತೊಡಗಿಸಿರಿ. ತಕ್ವಾ ಬೆಳೆಸಿರಿ ಎಂದು ಹೇಳಲಾಯಿತು. "ಅಲ್ಲಾಹನನ್ನು ಭಯಪಡುತ್ತಾ ಕಾರ್ಯವೆಸಗುವವನಿಗೆ ಅಲ್ಲಾಹನು ಸಂಕಷ್ಟಗಳಿಂದ ಪಾರಾಗುವ ಯಾವುದಾದರೂ ದಾರಿಯನ್ನು ತೆರೆಯುವನು." (ಅತ್ತಲಾಕ್:2)

ಹೀಗೆ ತಕ್ವಾ ಬೆಳೆಸಿಕೊಂಡವರನ್ನು ಯಾವ ಶಕ್ತಿಯಿಂದಲೂ ಸಂಕಷ್ಟಕ್ಕೀಡು ಮಾಡಲೋ ಸತ್ಯಪಥದಿಂದ ಸರಿಸಲೋ ಸಾಧ್ಯವಿಲ್ಲ. ಮುಂದುವರಿದು, "ನಿಮ್ಮನ್ನೂ ನಿಮ್ಮ ಕುಟುಂಬದವರನ್ನೂ ನರಕಾಗ್ನಿಯಿಂದ ರಕ್ಷಿಸಿರಿ" (ಅತ್ತಹ್ರೀಮ್: 6) ಎಂದು ಎಚ್ಚರಿಸಲಾಯಿತು. ಬಳಿಕ, "ಅಲ್ಲಾಹನೊಡನೆ ಪಶ್ಚಾತ್ತಾಪಪಡಿರಿ. ನಿಷ್ಕಳಂಕವಾದ ಪಶ್ಚಾತ್ತಾಪ" ಎಂದು ಸೂಚಿಸಲಾಯಿತು. ಒಟ್ಟಿನಲ್ಲಿ ಹಿಝ್ಬುಲ್ಲಾ ಆಗಬೇಕಾದರೆ ನಮ್ಮಲ್ಲಿ ಎಂತಹ ಗುಣ ವಿಶೇಷವಿರಬೇಕು, ಅದಕ್ಕೆ ಎದುರಾಗಬಹುದಾದ ಅಡೆತಡೆಗಳೇನು, ಅವುಗಳನ್ನು ಹೇಗೆ ಎದುರಿಸುವುದು ಎಂಬುದನ್ನು ಅಲ್ಲಾಹನು ಸ್ಪಷ್ಟವಾಗಿ ತಿಳಿಸಿದ್ದಾನೆ.



ನಾಲ್ಕನೆಯದಾಗಿ, ಪರಸ್ಪರ ಸಂಬಂಧಗಳನ್ನು ಸುಧಾರಿಸುವುದಾಗಿದೆ. "ಗುಪ್ತ ಸಮಾಲೋಚನೆಯು ಪೈಶಾಚಿಕ ಕೃತ್ಯವಾಗಿದೆ" (ಅಲ್ ಮುಜಾದಲ: 10) ಎಂದು ಅಲ್ಲಾಹ್ ಹೇಳುತ್ತಾನೆ. ಗುಂಪುಗಾರಿಕೆ ಇತ್ಯಾದಿಗಳಿಂದಾಗಿ ಪರಸ್ಪರರಲ್ಲಿ ಭಿನ್ನಾಭಿಪ್ರಾಯಗಳುಂಟಾಗುತ್ತದೆ. "ಸತ್ಯವಿಶ್ವಾಸಿಗಳು ಅದರಿಂದ ಬೇಸರಗೊಳ್ಳಲೆಂದು ಹಾಗೆ ಮಾಡಲಾಗುತ್ತದೆ." (ಅಲ್ ಮುಜಾದಲ: 10) ಶೈತಾನಿ ಶಕ್ತಿಗಳು ವಿಶ್ವಾಸಿಗಳ ನಡುವೆ ಮನಸ್ತಾಪವನ್ನು ಹುಟ್ಟಿಸಿ ಹಿಝ್ಬುಲ್ಲಾದಲ್ಲಿ ಒಡಕುಂಟು ಮಾಡಲು ಪ್ರಯತ್ನಿಸು ತ್ತವೆ. ಹಾಗಾಗಿ ಗುಪ್ತ ಸಮಾಲೋಚನೆಗಳಲ್ಲಿ ಎಂದಿಗೂ ಪಾಲ್ಗೊಳ್ಳಬಾರದು. ಅದು ಪರಸ್ಪರ ಸಂಬಂಧವನ್ನು ಕೆಡಿಸುತ್ತದೆ. ಸತ್ಯವಿಶ್ವಾಸಿಗಳ ಗುಣದ ಕುರಿತು ಪ್ರಸ್ತಾಪಿಸುತ್ತಾ ಹೀಗೆನ್ನಲಾಗಿದೆ, "ಸ್ವತಃ ತಮಗೆ ಅಗತ್ಯವಿದ್ದರೂ ಇತರರಿಗೆ ತಮ್ಮ ಮೇಲೆ ಪ್ರಾಶಸ್ತ್ಯ ನೀಡುತ್ತಾರೆ. ವಾಸ್ತವದಲ್ಲಿ ಯಾರು ತಮ್ಮ ಮನಸ್ಸಿನ ಸಂಕುಚಿತತೆಯಿಂದ ರಕ್ಷಿಸಲ್ಪಟ್ಟರೋ ಅವರೇ ವಿಜಯಿಗಳು." (ಅಲ್ ಹಶ್ರ್: 9) ಅಂದರೆ ಈ ರೀತಿಯ ಹೃದಯ ವೈಶಾಲ್ಯತೆ ಬೆಳೆಯದೆ ಹಿಝ್ಬುಲ್ಲಾ ಅಥವಾ ಬುನ್ಯಾನುಮ್ಮರ್‌ಸೂಸ್ ಆಗಲು ಸಾಧ್ಯವಿಲ್ಲ.

ಸಂಕುಚಿತತೆಯ ಭಾವನೆಯಿದ್ದರೆ ಯಾರೂ ಯಶಸ್ವಿಯಾಗಲಾರದು. ಉದ್ದೇಶ ದೊಡ್ಡದು, ಅದಕ್ಕಾಗಿ ಹೊರಟ ಸಂಘಟನೆಯೂ ದೊಡ್ಡದು, ಮಾತು ಹಿರಿದು ಆದರೆ ಹೃದಯ ಸಂಕುಚಿತವಾಗಿದ್ದರೆ ಅದರಲ್ಲೇನು ಅರ್ಥವಿದೆ? ವಸ್ತುತಃ ಹೃದಯ ವೈಶಾಲ್ಯತೆ ಎಂಬುದು ಪರಸ್ಪರರಿಗಾಗಿ ಪ್ರಾರ್ಥಿಸುವುದರಲ್ಲೂ ಇದೆ. ಅಂತಹವರ ಪ್ರಾರ್ಥನೆ ಈ ರೀತಿ ಇರುತ್ತದೆ, "ನಮ್ಮ ಪ್ರಭೂ, ನಮ್ಮನ್ನೂ ನಮಗಿಂತ ಮುಂಚೆ ಸತ್ಯವಿಶ್ವಾಸ ಸ್ವೀಕಾರ ಮಾಡಿದ್ದ ನಮ್ಮೆಲ್ಲ ಸಹೋದರರನ್ನೂ ಕ್ಷಮಿಸಿ ಬಿಡು ಮತ್ತು ನಮ್ಮ ಮನಗಳಲ್ಲಿ ಸತ್ಯವಿಶ್ವಾಸಿಗಳ ಬಗ್ಗೆ ಯಾವುದೇ ಹಗೆತನವನ್ನಿರಿಸದಿರು. ನಮ್ಮ ಪ್ರಭೂ, ನೀನು ಮಹಾ ವತ್ಸಲನೂ ಕರುಣಾನಿಧಿಯೂ ಆಗಿರುವೆ." (ಅಲ್ ಹಶ್ರ್: 10) ಮಾನವರೆಂದ ಮೇಲೆ ಭಿನ್ನಾಭಿಪ್ರಾಯಗಳು ಹುಟ್ಟುವುದು ಸಹಜ. ಆದರೆ ಅದು ಹಗೆತನದ ಮಟ್ಟಕ್ಕೆ ಇಳಿಯಬಾರದು ಎಂಬುದನ್ನು ಈ ವಚನ ಬೆಟ್ಟು ಮಾಡುತ್ತದೆ.

ತರುವಾಯ ಅಜ್ಞಾನ, ಪಕ್ಷಪಾತವು ಸಂಘಟನೆಯಲ್ಲಿ ಇರಬಾರದು ಎಂದು ಹೇಳಲಾಯಿತು. "ನಾವು ಮದೀನಕ್ಕೆ ಹಿಂದಿರುಗಿದಾಗ ಗೌರವಾನ್ವಿತನು ನಿಂದ್ಯನನ್ನು ಅಲ್ಲಿಂದ ಹೊರಕ್ಕಟ್ಟಿ ಬಿಡುವನೆಂದು ಇವರು ಹೇಳುತ್ತಾರೆ." (ಅಲ್ ಮುನಾಫಿಕೂನ್: 8) ಇದು ಕಪಟ ವಿಶ್ವಾಸಿಗಳ ಸರದಾರನಾದ ಅಬ್ದುಲ್ಲಾ ಬಿನ್ ಉಬೈ ಹೇಳಿದ ಮಾತು. ಅಂದರೆ ಮಕ್ಕಾದಿಂದ ಮದೀನಕ್ಕೆ ವಲಸೆ ಬಂದವರನ್ನು ಮಕ್ಕಾಗೆ ಅಟ್ಟಿ ಬಿಡುವುದೆಂದು ಅವನ ಮಾತಿನ ಇಂಗಿತವಾಗಿತ್ತು. ಭಾಷೆ, ಪ್ರದೇಶಗಳ ಆಧಾರದಲ್ಲಿ ಇಂತಹ ಪಕ್ಷಪಾತ ಸಂಘಟನೆಗೆ ಮಾರಕವಾಗಿದೆ.

ಇವು ಹಿಝ್ಬುಲ್ಲಾ ಮತ್ತು ಬುನ್ಯಾನುಮ್ಮರ್‌ಸೂಸ್‌ಗೆ ಇರಬೇಕಾದ ನಾಲ್ಕು ಮೂಲಭೂತ ಶರ್ತಗಳಾಗಿವೆ. ಒಂದನೆಯದಾಗಿ ಹಿಝ್ಬುಲ್ಲಾ-ಹಿಝ್ಬುಶ್ಶೈತಾನ್‌ನ ವ್ಯತ್ಯಾಸ ಅರಿಯುವುದು. ಎರಡನೆಯದಾಗಿ ಸಂಘಟನೆಯ ಜನರು ತಮ್ಮ ಹೊಣೆಗಾರಿಕೆಗಳನ್ನು ಸೂಕ್ತ ರೀತಿಯಲ್ಲಿ ಪಾಲಿಸಬೇಕು. ಮೂರನೆಯದಾಗಿ ವ್ಯಕ್ತಿಯು ತನ್ನ ಸರ್ವಸ್ವವನ್ನೂ ದೇವಮಾರ್ಗದಲ್ಲಿ ತೊಡಗಿಸಿಕೊಳ್ಳಬೇಕು. ನಾಲ್ಕನೆಯದಾಗಿ ಪರಸ್ಪರರ ಸಂಬಂಧವು ಅತ್ಯುತ್ತಮವಾಗಿರಬೇಕು.


**ಸನ್ಮಾರ್ಗ ಚಂದಾ ದರ**

| | | |
|---|---|---|
| ವಾರ್ಷಿಕ | ರೂ. | 390.00 |
| ಅರ್ಧವಾರ್ಷಿಕ | ರೂ. | 195.00 |
| **ಗಲ್ಫ್ ರಾಷ್ಟ್ರಗಳಲ್ಲಿ** | | |
| ವಾರ್ಷಿಕ | ರೂ. | 1,200.00 |
| ಅರ್ಧವಾರ್ಷಿಕ | ರೂ. | 650.00 |

website: www.sanmarga.com
email:
sanmargamatter@gmail.com







## ಜಮಾಅತೆ ಇಸ್ಲಾಮಿ: ಅಂದು-ಇಂದು-ಮುಂದು

(5ನೇ ಪುಟದಿಂದ)

ದೇಶದ ಭದ್ರತೆಯನ್ನೇ ಅಪಾಯಕ್ಕೆ ದೂಡುತ್ತಿದೆಯೆಂದು ಇದರಿಂದ ವ್ಯಕ್ತವಾಗುತ್ತದೆ. ಈ ವಿಷಯಗಳಲ್ಲಿ ಜಮಾಅತೆ ಇಸ್ಲಾಮಿ ಮತ್ತು ಸಮಾನ ಮನಸ್ಕ ಸಂಘಟನೆಗಳು ನೀಡಿದ ಮುನ್ನೆಚ್ಚರಿಕೆಗಳು ಬಾಲಿಶವಲ್ಲವೆಂದು ಅನುಭವಗಳು ಸಾಬೀತುಪಡಿಸುತ್ತಿವೆ.

ಜಮಾಅತೆ ಇಸ್ಲಾಮಿ, ಎಸ್‌ಐಒ, ಸಾಲಿ ಡಾರಿಟಿ, ಯೂತ್‌ವಿಂಗ್, ಜಿ.ಐ.ಓ., ಜಮಾಅತ್‌ನ ಮಹಿಳಾ ವಿಭಾಗ ಮುಂತಾದುವುಗಳ ಚಟುವಟಿಕೆಗಳನ್ನು ಪರಿಶೀಲಿಸಿದರೆ, ಆಂದೋಲನವು ಈ ನಿಟ್ಟಿನಲ್ಲಿ ದೇಶಕ್ಕೆ ಹಿರಿಯ ಕೊಡುಗೆ ನೀಡಿದೆಯೆಂದು ವ್ಯಕ್ತವಾದೀತು. ಪ್ರತ್ಯಕ್ಷ ಹೋರಾಟಗಳು, ಭಾಷಣ, ಬರೆಹ, ಜಾಗೃತಿ ಅಭಿಯಾನಗಳು, ಚುನಾವಣಾ ನೀತಿ ಹಾಗೂ ಇತರ ವಿಷಯಗಳಲ್ಲಿ ಸ್ವೀಕರಿಸುವ ಸಾಮ್ರಾಜ್ಯಶಾಹಿತ್ವ ವಿರೋಧಿ ಒತ್ತಡ ತಂತ್ರ ಇತ್ಯಾದಿ ಬಹುಮುಖ ಕಾರ್ಯಕ್ರಮಗಳನ್ನು ಈ ರಂಗದಲ್ಲಿ ಆಂದೋಲನವು ನಡೆಸುತ್ತಿದೆ. ಸಾಮ್ರಾಜ್ಯಶಾಹಿತ್ವ ಮತ್ತು ಬಂಡವಾಳಶಾಹಿತ್ವಗಳ ಬಗ್ಗೆ ನೀವು ಯಾಕಿಷ್ಟು ಮಾತಾಡುತ್ತೀರಿ? ಎಂದು ಹಲವರು ಪ್ರಶ್ನಿಸುತ್ತಾರೆ. ದೇಶದ ಮತ್ತು ಜನರ ಸ್ವಾತಂತ್ರ್ಯ, ಹಿತ ಮತ್ತು ಭದ್ರತೆಯ ಬಗ್ಗೆ ಆಂದೋಲನಕ್ಕೆ ಅಷ್ಟೊಂದು ಕಾಳಜಿಯಿರುವುದರಿಂದ ಎಂಬುದೇ ಅದರ ಉತ್ತರವಾಗಿದೆ. ಈ ಪ್ರಶ್ನೆಯೇ ಅದರ ಪುರಾವೆಯಾಗಿದೆಯಲ್ಲವೇ?

ಭಾರತೀಯ ಸಮಾಜದ ಸುಸ್ಥಿರ ಉಳಿವು ಮತ್ತು ಶೋಭಾಯಮಾನ ಭವಿಷ್ಯವನ್ನು ಗುರಿಯಾಗಿರಿಸಿರುವ ಇಷ್ಟೊಂದು ವೈವಿಧ್ಯಮಯ ಕಾರ್ಯಸೂಚಿಗಳಿಂದ ಹಸ್ತಕ್ಷೇಪಿಸುವ, ಇಸ್ಲಾಮಿನ ಬುನಾದಿಯಲ್ಲಿ ಕಾರ್ಯಾಚರಿಸುತ್ತಿರುವ ಬೇರೊಂದು ಸಂಘಟನೆ ಭಾರತದಲ್ಲಿಲ್ಲ. ನಮ್ಮ ಸ್ವಾತಂತ್ರ್ಯ, ಭದ್ರತೆ, ಪ್ರಜಾಪ್ರಭುತ್ವ ಮತ್ತು ಜಾತ್ಯತೀತ ಮೌಲ್ಯಗಳು ಕೈಜಾರದಂತೆ ಸಂರಕ್ಷಿಸಲಿಕ್ಕಾಗಿ ಜಮಾಅತೆ ಇಸ್ಲಾಮಿ ನಿನ್ನೆಗಳಲ್ಲಿ ನಡೆಸಿದ ಸಕ್ರಿಯ ಹಸ್ತಕ್ಷೇಪಗಳನ್ನು ನಾಳೆಯೂ ಮುಂದುವರಿಸುವುದು.

(ಮುಗಿಯಿತು)

# ಪತಿಗೆ ಸಾಷ್ಟಾಂಗ?

**ಅಜ್ಮಲ್ ಹುಸೈನ್, ಧಾರವಾಡ**

## ಕೇಳಿದಿರಾ? ಕೇಳಿ ಮುಜೀಬ್

● **“ಅಲ್ಲಾಹನ ಹೊರತು ಯಾರಿಗಾದರೂ ಸಾಷ್ಟಾಂಗವೆರಗಬಹುದೆಂದಾಗಿದ್ದರೆ, ನಾನು ಪತಿಗೆ ಸಾಷ್ಟಾಂಗವೆರಗುವಂತೆ ಪತ್ನಿಗೆ ಆಜ್ಞಾಪಿಸುತ್ತಿದ್ದೆ” ಎಂದು ಪ್ರವಾದಿ(ಸ) ಹೇಳಿರುವುದಾಗಿ ಅಬೂದಾವೂದ್‌ನಲ್ಲಿದೆ.**

1. **ನನ್ನ ಅಭಿಪ್ರಾಯದಲ್ಲಿ, ಇದು ಇಸ್ಲಾಮಿನ ತೌಹೀದ್ ಕಲ್ಪನೆಗೆ ವಿರುದ್ಧವಾದ ಹದೀಸಾಗಿದೆ.**
2. **ಎರಡನೆಯದಾಗಿ, ಹಿಂದುಗಳಲ್ಲಿ ಸ್ತ್ರೀಯು ಪತಿಯ ದಾಸಿಯೆಂಬ ಕಲ್ಪನೆಯಿದೆ. ಪತಿವ್ರತತೆಯ ಧರ್ಮವಾಗಿದೆ. ಪತಿವ್ರತೆಯೆಂದರೆ ಪತಿಯು ಆಕೆಯ ಆರಾಧ್ಯ ದೇವತೆಯೆಂದಾಗಿದೆ. ಈ ಹದೀಸ್ ಅದೇ ಕಲ್ಪನೆಯನ್ನು ಮೂಡಿಸುತ್ತದೆ.**
3. **ಈ ಹದೀಸ್ “ಅಲ್ಲಾಹನು ನಿಮ್ಮನ್ನು ಒಂದು ಜೀವದಿಂದ ಸೃಷ್ಟಿಸಿದನು ಮತ್ತು ಆ ಜೀವದಿಂದಲೇ ಅದರ ಜೋಡಿಯನ್ನು ಸೃಷ್ಟಿಸಿದನು” ಎಂಬ ಕುರ್‌ಆನ್ ಸೂಕ್ತಕ್ಕೆ ವಿರುದ್ಧವಾಗಿದೆ.**
4. **ಈ ಹದೀಸ್‌ನಿಂದ ಮಹಿಳೆಯನ್ನು ನಿಂದಿಸಿದಂತಾಗುತ್ತದೆ ಎಂದು ಭಾಸವಾಗುತ್ತದೆ.**

**ದಯವಿಟ್ಟು ಗೊಂದಲವನ್ನು ನಿವಾರಿಸಿರಿ.**

❍ ಒಂದು ಹದೀಸ್ ಅನೇಕ ಹದೀಸ್ ಗ್ರಂಥಗಳಲ್ಲಿ ಉಲ್ಲೇಖಗೊಂಡಿದ್ದು ಅದು ಸರಿಯಾದ ಪರಂಪರೆಯಿಂದ ಬಂದಿರುವುದು ಸಾಬೀತಾಗಿದ್ದರೆ ಅದರ ಬಗ್ಗೆ ಸಮರ್ಥನೆಯ ದಾರಿ ಹುಡುಕಬೇಕೇ ಹೊರತು ಸಂದೇಹ ಗೊಂದಲಗಳಿಗೆ ಎಡೆ ಮಾಡಿಕೊಡಬಾರದು. ಹದೀಸ್ ವಿದ್ವಾಂಸರು ಹದೀಸ್ ಕ್ರೋಢೀಕರಣದಲ್ಲಿ ಸಾಟಿಯಿಲ್ಲದ ಶ್ರಮ ವಹಿಸಿದ್ದಾರೆ. ಅವರು ರಿವಾಯತ್(ವರದಿ ಪರಂಪರೆ) ಮತ್ತು ದಿರಾಯತ್ (ಹದೀಸ್ ವರದಿಗಾರರ ಚಾರಿತ್ರ್ಯ, ಇತಿಹಾಸ ಇತ್ಯಾದಿ) ಎರಡೂ ಮುಖಗಳಿಂದ ಹದೀಸ್‌ಗಳನ್ನು ಪರಿಶೀಲಿಸಿದ್ದಾರೆ. ನಿಶ್ಚಿತ ನಿಯಮ ನಿಬಂಧನೆಗಳ ಆಧಾರದಲ್ಲಿ ಸಹೀಹ್, ದಈಫ್, ಮೌದೂಲ್ (ಸರಿಯಾದ, ದುರ್ಬಲ ಮತ್ತು ಕೃತಕ) ವರದಿಗಳನ್ನು ಪ್ರತ್ಯೇಕಿಸಿದ್ದಾರೆ.

2. ಧರ್ಮದ ಯಾವುದೇ ವಿಷಯವನ್ನು ಗ್ರಹಿಸಲು ಕೇವಲ ಒಂದು ಹದೀಸನ್ನು ಅವಲಂಬಿಸಿದರೆ ಸಾಲದು. ಈ ವಿಷಯಕ್ಕೆ ಸಂಬಂಧಿಸಿದ ಇತರ ಹದೀಸ್‌ಗಳನ್ನೂ ನೋಡಬೇಕಾಗುತ್ತದೆ. ಎಲ್ಲವನ್ನೂ ಕಲೆ ಹಾಕಿ ಸರಿಯಾದ ಅಭಿಪ್ರಾಯಕ್ಕೆ ಬರಬೇಕಾಗಿದೆ.

3. ಒಂದು ಹದೀಸ್‌ನಲ್ಲಿ ಒಂದು ಘಟನೆ ನಮೂಧಿಸಲಾಗಿದ್ದರೆ, ಅದರಲ್ಲಿ ಅದರ ಪೂರ್ಣ ವಿವರ ಸಿಗಬೇಕೆಂದಿಲ್ಲ. ಕೆಲವು ವಿಷಯಗಳನ್ನು ಅದರ ಹಿನ್ನೆಲೆ ಮತ್ತು ಪರಿಸ್ಥಿತಿಗಳಿಂದ ಶೋಧಿಸಬೇಕಾಗುತ್ತದೆ. ಹದೀಸ್ ವಿದ್ವಾಂಸರು ಕೂಡಾ ಹೆಚ್ಚಿನ ವೇಳೆ ಘಟನೆಯ ಒಂದು ಮುಖವನ್ನು ಒಂದು ಕಡೆ ವಿವರಿಸಿದ್ದಾರೆ. ಇನ್ನೊಂದು ಕಡೆ ಅದರ ಇನ್ನೊಂದು ಮುಖವನ್ನು ಉಲ್ಲೇಖಿಸಿದ್ದಾರೆ. ಆದ್ದರಿಂದ ಒಂದು ಹದೀಸಿನಲ್ಲಿ ಘಟನೆಯ ಯಾವುದೇ ಒಂದು ಅಂಶ ಉಲ್ಲೇಖಿಸಲಾಗದಿದ್ದರೆ ಅದನ್ನು ಸಂಪೂರ್ಣವಾಗಿ ನಿರಾಕರಿಸುವುದು ಸರಿಯಲ್ಲ. ಅದರ ಎಲ್ಲ ಮುಖಗಳನ್ನು ಒಟ್ಟಾಗಿ ಸೇರಿಸಿ ಅಧ್ಯಯನ ನಡೆಸಬೇಕು.

ಪ್ರಸ್ತುತ ಹದೀಸ್ ಅನೇಕ ಸಹಾಬಿಗಳಿಂದ ವಿವಿಧ ಹದೀಸ್ ಗ್ರಂಥಗಳಲ್ಲಿ ಉಲ್ಲೇಖಗೊಂಡಿದೆ. ಅದನ್ನು ಉಲ್ಲೇಖಿಸಿದವರಲ್ಲಿ ಅಬೂ ಹುರೈರಾ, ಮುಆದ್ ಬಿನ್ ಜಬಲ್, ಸುರಾಕಾ ಬಿನ್ ಮಾಲಿಕ್, ಇಬ್ನು ಅಬ್ಬಾಸ್, ಬುರೈರಾ, ಉಮ್ಮುಸಲಮ, ಆಯಿಶಾರಂಥ ಪ್ರಸಿದ್ಧ ಸಹಾಬಿಗಳಿದ್ದಾರೆ.

ಈ ಹದೀಸ್ ಇಸ್ಲಾಮಿನ ತೌಹೀದ್ ಕಲ್ಪನೆಗೆ ವಿರುದ್ಧವಾದುದೆಂದು ಹೇಳುವುದು ಸರಿಯಲ್ಲ. ಒಂದು ವೇಳೆ ಮಹಿಳೆಗೆ ತನ್ನ ಪತಿಗೆ ಸಾಷ್ಟಾಂಗವೆರಗಬೇಕೆಂಬ ಆಜ್ಞೆ ನೀಡಿರುತ್ತಿದ್ದರೆ, ಆಗ ಅದು ತೌಹೀದ್‌ನ ಕಲ್ಪನೆಗೆ ಖಂಡಿತ ವಿರುದ್ಧವಾಗುತ್ತಿತ್ತು. ಇಂತಹ ಪ್ರಯೋಗಗಳು ಅರಬಿಯಲ್ಲಿ ಸಾಮಾನ್ಯ. ಉಮರ್(ರ) ಅವರ ಸ್ಥಾನಮಾನದ ಕುರಿತು ಪ್ರವಾದಿ(ಸ) ಹೇಳಿದ್ದರು– ನನ್ನ ಬಳಿಕ ಯಾರಾದರೂ ಪ್ರವಾದಿಯಾಗುತ್ತಿದ್ದರೆ ಅದು ಉಮರ್ ಆಗುತ್ತಿದ್ದರು (ತಿರ್ಮಿದಿ). ಇದರರ್ಥ ಉಮರ್ ಪ್ರವಾದಿಯಾಗಲಿದ್ದಾರೆಂಬ ಭವಿಷ್ಯ ನುಡಿ ಖಂಡಿತ ಅಲ್ಲ. ಮುಸೈಲಿಮ ಕದ್ದಾಬ್‌ನ ಪ್ರತಿನಿಧಿಗಳೊಂದಿಗೆ ಪ್ರವಾದಿ(ಸ) ಹೇಳಿದ್ದರು– ರಾಯಭಾರಿಗಳನ್ನು ಕೊಲ್ಲಬಾರದೆಂಬ ನಿಯಮವಿಲ್ಲದಿರುತ್ತಿದ್ದರೆ ನಾನು ನಿಮ್ಮಿಬ್ಬರ ರುಂಡ ಹಾರಿಸುತ್ತಿದ್ದೆ. (ಅಬೂದಾವೂದ್). ರಾಯಭಾರಿಗಳನ್ನು ಕೊಲ್ಲಬಹುದೆಂಬ ಅರ್ಥ ಇದರಿಂದ ಹೊರಡುವುದಿಲ್ಲವಷ್ಟೆ. ಸಂದೇಹಾಸ್ಪದ ಚಾರಿತ್ರ್ಯದ ಓರ್ವ ಮಹಿಳೆಯ ಕುರಿತು ಪ್ರವಾದಿ(ಸ) ಹೇಳಿದರು– ಸಾಕ್ಷ್ಯವಿಲ್ಲದೆ ಯಾರನ್ನಾದರೂ ಕಲ್ಲೆಸೆದು ಕೊಲ್ಲಬಹುದಾಗಿರುತ್ತಿದ್ದರೆ ಆಕೆಗೆ ಕಲ್ಲೆಸೆಯುತ್ತಿದ್ದೆ (ಬುಖಾರಿ). ಇದರರ್ಥ ಸಾಕ್ಷ್ಯವಿಲ್ಲದೆಯೂ ಕಲ್ಲೆಸೆದು ಕೊಲ್ಲಬಹುದಾಗುವುದು ಹೇಗೆ?

ನೀವು ಪ್ರಸ್ತಾಪಿಸಿದ ಹದೀಸ್‌ನಲ್ಲಿ ಪತಿಯು ಪತ್ನಿಯ ದೇವರೆಂಬ ಹಿಂದುಗಳ ಕಲ್ಪನೆ ಮೂಡುತ್ತದೆಂದು ನೀವು ಭಾವಿಸಿರುವುದು ಕೂಡಾ ಸರಿಯಲ್ಲ. ಈ ಹದೀಸ್‌ನ ಸರಿಯಾದ ಅರ್ಥ ಗ್ರಹಿಸಬೇಕಾದರೆ, ಹದೀಸ್ ಹಿನ್ನೆಲೆ ವಿವರಿಸಿರುವ ಇನ್ನೂ ಕೆಲವು ಹದೀಸ್‌ಗಳನ್ನು ನೋಡಬೇಕಾಗುತ್ತದೆ.

ಕೈಸ್‌ಬಿನ್ ಸಅದ್ ವರದಿ ಮಾಡುತ್ತಾರೆ– ನಾನು ಹೀರಾಕ್ಕೆ ಹೋದಾಗ ಜನರು ತಮ್ಮ ಧಾರ್ಮಿಕ ನೇತಾರರಿಗೆ ಸಾಷ್ಟಾಂಗವೆರಗುವುದನ್ನು ಕಂಡೆ. ಈ ಗೌರವ ಸೂಚಕ ಸಾಷ್ಟಾಂಗಕ್ಕೆ ನಮ್ಮ ಪ್ರವಾದಿಯೇ ಹೆಚ್ಚು ಅರ್ಹರಾಗಿದ್ದಾರೆಂದು ನನ್ನ ಮನಸ್ಸಿನಲ್ಲಿ ಮೂಡಿತು. ನಾನು ಪ್ರವಾದಿಯವರ ಬಳಿ ಬಂದಾಗ ನಡೆದ ಘಟನೆಯನ್ನು ವಿವರಿಸಿ ನನ್ನ ಮನದಿಂಗಿತವನ್ನೂ ತಿಳಿಸಿದೆ. ಆಗ ಪ್ರವಾದಿಯವರು ಮೇಲಿ ನಂತೆ ಹೇಳಿದರು. (ಅಬೂದಾವೂದ್)

ಇದೇ ರೀತಿ ಇಬ್ನು ಮಾಜದ ವರದಿ ಪ್ರಕಾರ, ಮುಆದ್ ಬಿನ್ ಜಬಲ್ ಸಿರಿಯಾ ಪ್ರಯಾಣದಲ್ಲಿರುವಾಗ ಅಲ್ಲಿನ ಕ್ರೈಸ್ತರು ತಮ್ಮ ಪಾದ್ರಿಗಳ ಮುಂದೆ ಸಾಷ್ಟಾಂಗವೆರಗುವುದನ್ನು ಕಂಡರು. ಅವರು ಮರಳಿ ಬಂದು ಕೈಸ್‌ರಂತೆಯೇ ಪ್ರವಾದಿಯವರಲ್ಲಿ ತಮ್ಮ ಇಂಗಿತವನ್ನು ವ್ಯಕ್ತಪಡಿಸಿದರು. ಆಗ ಪ್ರವಾದಿ(ಸ) ಮೇಲಿನಂತೆ ಹೇಳಿದರು.

ಈ ಹದೀಸ್‌ನಿಂದ ಪತಿ–ಪತ್ನಿಯರ ಹಕ್ಕುಗಳನ್ನು ಅತಿ ಉತ್ಪ್ರೇಕ್ಷಿತವಾಗಿ ಪ್ರತಿಪಾದಿಸಲಾಗಿದೆ. ಪತ್ನಿಗೆ ಪತಿಯ ಆಜ್ಞೋಲ್ಲಂಘನೆ ಮಾಡಬಾರದು. ಆತನ ಮಾತನ್ನು ವಿರೋಧಿಸಬಾರದು, ಆತನಿಂದ ಸಿಗುವ ಸವಲತ್ತುಗಳಿಗಾಗಿ ಕೃತಜ್ಞಳಾಗಿರುವುದು ಕಡ್ಡಾಯವೆಂದು ತಿಳಿಸಲಾಗಿದೆ. ಪತಿಯನ್ನು ಅನುಸರಿಸುವುದು ಪತ್ನಿಯ ಮೇಲೆ ಕಡ್ಡಾಯವಾಗಿದೆಯೆಂದು ಒತ್ತುಕೊಟ್ಟು ಹೇಳಲಾಗಿದೆಯೆಂದು ಅಲ್ಲಾಮಾ ಮುಬಾರಕ್ ಪುರಿಯವರು ಬರೆಯುತ್ತಾರೆ. ಅದೇ ರೀತಿ ಪುರುಷನು ಆಕೆಯ ಎಲ್ಲ ಧರ್ಮ ಸಮ್ಮತ ಬೇಡಿಕೆಗಳನ್ನು ಈಡೇರಿಸುವುದನ್ನು ಕಡ್ಡಾಯ ಗೊಳಿಸಲಾಗಿದೆ.

ಇಸ್ಲಾಮಿನಲ್ಲಿ ಸ್ತ್ರೀ **(8ನೇ ಪುಟಕ್ಕೆ)**

# ಮೌಲಾನಾ ಕಾಲಮ್

## ತರಾವೀಹ್– 1



● ತರಾವೀಹ್ ನಮಾಝ್‌ನ ಸಂಖ್ಯೆಯ ಕುರಿತು ಸಮುದಾಯದಲ್ಲಿ ಭಿನ್ನಾಭಿಪ್ರಾಯಗಳಿವೆ. ಈ ಕುರಿತು ಸಮಗ್ರವಾಗಿ ಉತ್ತರಿಸುವಿರಾ?

❍ ಇಸ್ಲಾಮೀ ಚರಿತ್ರೆಯ ಕುರಿತು ತಿಳುವಳಿಕೆಯ ಕೊರತೆಯೇ ಇಂದು ತರಾವೀಹ್‌ನ ರಕಅತ್ ಕುರಿತು ಸಮುದಾಯದ ಒಳಗೆ ಭಿನ್ನಾಭಿಪ್ರಾಯ ಮೂಡಲು ಕಾರಣ. ಪ್ರವಾದಿಯವರಿಗೆ(ಸ) ಪ್ರವಾದಿತ್ವ ಲಭಿಸಿದ ಆರಂಭ ಕಾಲವನ್ನು ಇಸ್ಲಾಮಿನ ನಿಯಮ ನಿರ್ಮಾಣದ ಕಾಲಾವಧಿ ಎಂದು ಹೇಳಬಹುದಾಗಿದೆ. ಅದಕ್ಕೆ ಕುರ್‌ಆನ್ ಸಾಕ್ಷಿಯಾಗಿದೆ. ಸೂರಃ ಅಲ್ ಹಶ್ರ್‌ನಲ್ಲಿ “ಪ್ರವಾದಿಯವರು(ಸ) ನೀಡುವುದನ್ನು ಸ್ವೀಕರಿಸಿರಿ. ತಡೆದುದರಿಂದ ದೂರವಿರಿ” ಎಂದು ಹೇಳಲಾಗಿದೆ. ಪ್ರವಾದಿ(ಸ) ನಮಗೆ ಉತ್ತಮ ಮಾರ್ಗದರ್ಶಕರಾಗಿದ್ದಾರೆ. ಅವರ ಜೀವನದಲ್ಲಿ ನಮಗೆ ಮಾದರಿ ಇದೆ. ಈ ಕುರಿತು ಅನೇಕ ಕಡೆಗಳಲ್ಲಿ ಪ್ರಸ್ತಾಪಿಸಲಾಗಿದೆ. ಪ್ರವಾದಿಯವರ(ಸ) ಕಾಲಾನಂತರ ಖುಲಫಾಉರ್ರಾಶಿದೀನ್‌ಗಳ ಕಾಲಘಟ್ಟವಾಗಿದೆ. ಪ್ರವಾದಿಯವರು(ಸ) ಹೇಳಿದರು– ನನ್ನನ್ನು ಅನುಸರಿಸಿರಿ. ನನ್ನ ಸಂಗಾತಿಗಳನ್ನು ಅನುಸರಿಸಿರಿ. ಈ ನಿಟ್ಟಿನಲ್ಲಿ ನಾವು ಅವರನ್ನು ಅನುಸರಿಸಬೇಕಾಗಿದೆ. ಅಂದರೆ ತರಾವೀಹ್ ಕೇವಲ ರಮಝಾನ್‌ಗೆ ಸೀಮಿತವೇ ಅಥವಾ ಇತರ ಸಂದರ್ಭಗಳಿಗೂ ಅನ್ವಯವೇ ಎಂಬುದನ್ನು ನಾವು ತಿಳಿಯಬೇಕಾಗಿದೆ. ಪ್ರವಾದಿಯವರು(ಸ) ರಮಝಾನ್ ಅಲ್ಲದೆ ಇತರ ರಾತ್ರಿಗಳಲ್ಲಿಯೂ ಐಚ್ಛಿಕ ನಮಾಝ್ ಮಾಡಿದ್ದಾರೆ. ಐಚ್ಛಿಕ ನಮಾಝನ್ನು ರಾತ್ರಿಯೇ ನಿರ್ವಹಿಸುತ್ತಿದ್ದರು. ಸೂರಃ ಬನೀ ಇಸ್ರಾಈಲ್‌ನ 79ನೇ ಸೂಕ್ತದಲ್ಲಿ, “ರಾತ್ರಿಕಾಲದಲ್ಲಿ ತಹಜ್ಜುದ್ ನಿರ್ವಹಿಸಿರಿ. ಇದು ನಿಮಗೆ ಐಚ್ಛಿಕ ಕರ್ಮವಾಗಿದೆ.” ಎಂದು ಹೇಳಲಾಗಿದೆ. ಸೂರಃ ಮುಝ್ಝಮ್ಮಿಲ್‌ನ 1,2,3 ಹಾಗೂ 20ನೇ ಸೂಕ್ತದಲ್ಲಿಯೂ ಈ ಕುರಿತು ಪರಾಮರ್ಶಿಸಲಾಗಿದೆ. ಇದರಿಂದ ಪ್ರವಾದಿಯವರು(ಸ) ಅತೀ ಹೆಚ್ಚು ನಮಾಝನ್ನು ನಿಶಾ ಸಂದರ್ಭದಲ್ಲಿ ಮಾಡುತ್ತಿದ್ದರು ಎಂಬುದಾಗಿ ತಿಳಿಯಬಹುದು.

ಇಮಾಮ್ ಬುಖಾರಿಯವರ(ರ) ಹದೀಸ್ ಗ್ರಂಥವನ್ನು ತೆರೆದು ನೋಡಿದಾಗ ಅನೇಕ ಕಡೆ ತರಾವೀಹ್ ನಮಾಝ್‌ಗೆ ಪ್ರೋತ್ಸಾಹ ನೀಡಿರುವುದನ್ನು ಕಾಣಬಹುದು. ಧರ್ಮ ನಿಷ್ಠೆಯೊಂದಿಗೆ, ಪರಲೋಕ ಪ್ರಜ್ಞೆಯೊಂದಿಗೆ ಓರ್ವನು ರಾತ್ರಿ ನಮಾಝ್ ನಿರ್ವಹಿಸಿದರೆ ಆತನ ಪಾಪಗಳನ್ನು ಅಲ್ಲಾಹನು ಕ್ಷಮಿಸುವನು ಎಂಬುದಾಗಿ ಅದರಲ್ಲಿ ಹೇಳಲಾಗಿದೆ. ಇತರ ಅನೇಕ ಗ್ರಂಥಗಳಲ್ಲೂ ಈ ಕುರಿತು ಪ್ರಸ್ತಾಪ ಮಾಡಿರುವುದು ಕಾಣಸಿಗುತ್ತದೆ. ಅನೇಕ ಕಡೆ ರಮಝಾನಿನ ರಾತ್ರಿಯ ನಮಾಝಿಗೆ ಉತ್ತೇಜನ ನೀಡಲಾಗಿದೆ.

ಆಯಿಶಾ(ರ) ಹೇಳುತ್ತಾರೆ, “ಜನರು ಗುಂಪು ಗುಂಪಾಗಿ ಬಂದು ರಮಝಾನ್‌ನ ರಾತ್ರಿಯಲ್ಲಿ ಪ್ರವಾದಿಯವರೊಂದಿಗೆ(ಸ) ನಮಾಝ್ ಮಾಡುತ್ತಿರುವುದನ್ನು ನೋಡಿದ್ದೇನೆ. ಪ್ರವಾದಿಯವರು(ಸ) ಕೇವಲ ಮೂರು ದಿನ ಮಾತ್ರ ಮಸೀದಿಯಲ್ಲಿ ನಮಾಝ್ ಮಾಡಿದರು.”

ನಂತರ ಪ್ರವಾದಿಯವರಲ್ಲಿ(ಸ) ಈ ಕುರಿತು ಕೇಳಿದಾಗ, “ಜನರ ಉತ್ಸಾಹವನ್ನು ಕಂಡು ಈ ನಮಾಝನ್ನು ಅಲ್ಲಾಹನು ಕಡ್ಡಾಯಗೊಳಿಸಿ ಬಿಟ್ಟರೆ ನನ್ನ ಸಮುದಾಯಕ್ಕೆ ಕಷ್ಟವಾದೀತು ಎಂಬ ಭಯದಿಂದ ನಾನು ಮಸೀದಿಯಲ್ಲಿ ನಮಾಝ್ ಮಾಡಲಿಲ್ಲ” ಎಂದರು. ನಂತರ ನಾಲ್ಕೈದು ಮಂದಿ ಬಂದು ನಮಾಝ್ ಮಾಡುತ್ತಾ ಹೋಗುತ್ತಿದ್ದರು. ಅವರಲ್ಲಿ ಆಗ ರಕಾಅತ್‌ನ ಸಂಖ್ಯೆಯ ಕುರಿತು ಇಂತಿಷ್ಟೇ ಎಂದು ನಿಗದಿಯಿರಲಿಲ್ಲ.

ಆಗ ರಕಅತ್‌ಗಿಂತ ನಮಾಝ್‌ಗೆ ಹೆಚ್ಚು ಪ್ರಾಶಸ್ತ್ಯ ನೀಡುತ್ತಿದ್ದರು. ಕೆಲವೊಮ್ಮೆ 4 ರಕಅತ್, ಕೆಲವೊಮ್ಮೆ 6 ಹಾಗೆಯೇ 8ರಲ್ಲಿ ಮುಕ್ತಾಯಗೊಳಿಸಿದ ಬಗ್ಗೆ ವರದಿಗಳಿವೆ. ಆ ಸಂದರ್ಭದಲ್ಲಿ ನಮಾಝ್‌ನ ಸಂಖ್ಯೆಗೆ ನಿಗದಿ ಇರಲಿಲ್ಲ ಎಂಬುದನ್ನು ಚರಿತ್ರೆಯನ್ನು ಅಭ್ಯಸಿಸಿದಾಗ ತಿಳಿದು ಬರುತ್ತದೆ. ಅವರು ರಾತ್ರಿ ನಮಾಝನ್ನು ಫಜ್ರ್‌ನ ಅದಾನ್‌ಗೆ ಮುಅದ್ದಿನ್ ಬರುವ ತನಕ ನಿರ್ವಹಿಸುತ್ತಿದ್ದರು. ಆ ಕೂಡಲೇ ನಮಾಝ್ ಮುಕ್ತಾಯಗೊಳ್ಳುತ್ತಿತ್ತು. ನಮಾಝ್ ಮುಕ್ತಾಯಗೊಳಿಸಿದಾಗ ಎಷ್ಟು ರಕಅತ್ ಆಯಿತು ಎಂದು ತಿಳಿಯುತ್ತಿತ್ತು. ಆದ್ದರಿಂದಲೇ ಆಗ ಅದಕ್ಕೆ ಇಂತಿಷ್ಟೇ ರಕಅತ್ ಎಂಬ ನಿಗದಿ ಇರಲಿಲ್ಲ. ಅದೊಂದು ಸುದೀರ್ಘವಾದ ನಮಾಝ್ ಆಗಿತ್ತು. ಆದ್ದರಿಂದಲೇ ಪ್ರವಾದಿಯವರ(ಸ) ನಮಾಝ್ ಸುದೀರ್ಘ ಕುರ್‌ಆನ್ ಪಾರಾಯಣದಿಂದೊಡಗೂಡಿದ ನಮಾಝ್ ಆಗಿತ್ತು ಎಂಬುದನ್ನು ತಿಳಿಯಬಹುದು.

ಈ ತರಾವೀಹ್ ನಮಾಝಿನ ಕುರಿತು ವಿವೇಚಿಸುವಾಗ ಅಂದಿನ ನಮಾಝ್‌ಗೂ ಇಂದಿನ ನಮಾಝ್‌ಗೂ ಹೋಲಿಸಲು ಸಾಧ್ಯವಾಗದ ಸ್ಥಿತಿಯಿದೆ. ಯಾಕೆಂದರೆ ಇಂದು 8 ರಕಅತನ್ನೋ ಅಥವಾ 20 ರಕಅತನ್ನೋ ಒಂದು ಗಂಟೆಯಲ್ಲಿ ಮುಗಿಸುತ್ತಾರೆ. ಪ್ರವಾದಿಯವರು(ಸ) ನಿರ್ವಹಿಸಿದಂತೆ ನಮಾಝ್ ಮಾಡುವವರು ಇಂದು ಯಾರೂ ಇಲ್ಲ ಎನ್ನಬಹುದು. ಅಂದರೆ ಪ್ರವಾದಿಯವರ(ಸ) ಕಾಲದಲ್ಲಿ ನಮಾಝಿನ ಒಂದು ರಕಅತ್‌ಗೆ 2 ಗಂಟೆ ಸಮಯ ತಗಲುತ್ತಿತ್ತು. ಹುದೈಫಾ(ರ) ಹೇಳುತ್ತಾರೆ, ರಕಅತ್‌ಗಳಲ್ಲಿ ಕುರ್‌ಆನ್ ಪಾರಾಯಣಕ್ಕೆ ನೀಡಿದಷ್ಟು ಸಮಯವನ್ನು ರುಕೂಅ್‌ಗೂ ಸುಜೂದ್‌ಗೂ ಮತ್ತು ಕುಳಿತುಕೊಳ್ಳುವುದಕ್ಕೂ ಪ್ರವಾದಿ(ಸ) ನೀಡುತ್ತಿದ್ದರು. ಅಂದರೆ ರುಕೂಅ್ ಹಾಗೂ ಸುಜೂದ್‌ನಲ್ಲಿ ತಸ್ಬೀಹ್ ಮಾಡುತ್ತಿದ್ದರು. ಈ ನಮಾಝ್ ನಾಲ್ಕು ರಕಅತನ್ನು ಮೀರುತ್ತಿರಲಿಲ್ಲ. ಬಿಲಾಲ್‌ರವರು(ರ) ಫಜ್ರ್‌ನ ಅದಾನ್‌ಗೆ ಬರುವ ತನಕ ಈ ನಮಾಝ್ ನಿರ್ವಹಿಸಲಾಗುತಿತ್ತು. ಎಂದೂ ಹೇಳಿದ್ದಾರೆ.

ಇದು ಪ್ರವಾದಿಯವರ(ಸ) ತರಾವೀಹ್ ನಮಾಝ್‌ನ ರೀತಿಯಾಗಿತ್ತು.

(ಮುಂದುವರಿಯುವುದು)

ನಿರೂಪಣೆ: ಸಲೀಮ್ ಬೋಳಂಗಡಿ

ಕುರ್‌ಆನ್ ಅಧ್ಯಯನ
522

## ಅಧ್ಯಾಯ: 4

# ಅನ್ನಿಸಾ

## ವಚನಗಳು: 74

ಫಲ್‌ಯುಕಾತಿಲ್= ಆದ್ದರಿಂದ ಯುದ್ಧ ಮಾಡಲಿ, ಫೀಸಬೀಲಿಲ್ಲಾಹಿ= ಅಲ್ಲಾಹನ ಮಾರ್ಗದಲ್ಲಿ, ಅಲ್ಲದೀನ ಯಶ್ರೂನ= ಮಾರಾಟ ಮಾಡಿದವರು, ಅಲ್‌ಹಯಾತದ್ದುನ್‌ಯಾ= ಲೌಕಿಕ ಜೀವನವನ್ನು, ಬಿಲ್ ಆಖಿರತಿ= ಪರಲೋಕಕ್ಕೆ ಪ್ರತಿಯಾಗಿ, ವಮನ್ ಯುಕಾತಿಲ್ ಫೀ ಸಬೀಲಿಲ್ಲಾಹಿ= ಅಲ್ಲಾಹನ ಮಾರ್ಗದಲ್ಲಿ ಯುದ್ಧ ಮಾಡುವವನು, ಫಯುಕ್ತಲ್= ಹೀಗೆ ವಧಿಸಲ್ಪಡುತ್ತಾರೆ, ಅವ್ ಯಗ್ಲಿಬ್= ಅಥವಾ ಜಯಶೀಲರಾಗುತ್ತಾರೆ, ಫಸೌಫ ನುಅ್‌ತೀಹಿ= ನಿಶ್ಚಯವಾಗಿಯೂ ನಾವು ಆತನಿಗೆ ನೀಡುವೆವು, ಅಜ್‌ರನ್ ಅಝೀಮನ್= ಶ್ರೇಷ್ಠ ಪ್ರತಿಫಲ.

**74: ಆದ್ದರಿಂದ ಪರಲೋಕ ಜೀವನಕ್ಕಾಗಿ ಇಹಲೋಕ ಜೀವನವನ್ನು ಮಾರುವವರು ಅಲ್ಲಾಹನ ಮಾರ್ಗದಲ್ಲಿ ಹೋರಾಡಬೇಕು. ಅಲ್ಲಾಹನ ಮಾರ್ಗದಲ್ಲಿ ಹೋರಾಡಿದವನು ವಧಿಸಲ್ಪಟ್ಟರೂ ಜಯ ಸಾಧಿಸಿದರೂ ನಿಶ್ಚಯವಾಗಿಯೂ ನಾವು ಆತನಿಗೆ ಮಹಾ ಪ್ರತಿಫಲವನ್ನು ನೀಡುವೆವು.**

74: 'ಫಲ್‌ಯುಕಾತಿಲ್' ಎಂಬ ಮೂಲ ಪದವನ್ನು 71 ಅಥವಾ 72ನೇ ವಚನದೊಂದಿಗೆ ಜೋಡಿಸ ಬಹುದು. 71ನೇ ವಚನದೊಂದಿಗೆ ಜೋಡಿಸಿದಾಗ, ಹೀಗೆ ಗುಂಪುಗಳಾ ಗಿಯೂ ಒಗ್ಗಟ್ಟಾಗಿಯೂ ಹೊರಟು ಹೋಗಿ ಯುದ್ಧ ಮಾಡಬೇಕೆಂದೂ 72–73ನೇ ವಚನದೊಂದಿಗೆ ಜೋಡಿಸಿ ದಾಗ ಅದರ ಅರ್ಥವು ಕಪಟಿಗಳು ಸ್ವಾರ್ಥ ಲಾಭಗಳಿಗಾಗಿ ಮಾತ್ರ ಯುದ್ಧ ಮಾಡುವುದರಿಂದ ನೈಜ ವಿಶ್ವಾಸಿಗಳು ಪರಲೋಕ ಜೀವನದ ಬದಲಿಗೆ ಲೌಕಿಕ ಜೀವನವನ್ನು ತ್ಯಜಿಸುವವರಾಗಿ ಯುದ್ಧ ಮಾಡಬೇಕೆಂದೂ ಆಗುತ್ತದೆ.

'ಯಶ್ರೂನ' ಎಂಬ ಪದವು 'ಶುರಾಅ' ಎಂಬ ಮೂಲದಿಂದ ಬಂದಿದೆ. ಖರೀದಿಸು ಎಂಬ ಮೂಲಾರ್ಥವಿದ್ದರೂ ಮಾರಾಟ ಮಾಡು ಎಂಬರ್ಥದಲ್ಲಿಯೂ ಅದನ್ನು ಬಳಸಲಾಗುತ್ತದೆ. ಯೂಸುಫ್ ಅಧ್ಯಾಯದಲ್ಲಿ 'ವ ಶರವಹು ಬಿ ಸಮನಿನ್ ಬಖ್‌ಸಿನ್' (ಅವರು ಅವರನ್ನು ತುಚ್ಛ ಬೆಲೆಗೆ ಮಾರಿದರು) ಎಂದು ಕುರ್‌ಆನ್ ಹೇಳುತ್ತದೆ. ಈ ವಚನದಲ್ಲಿ ಹೆಚ್ಚಿನ ಕುರ್‌ಆನ್ ವಿದ್ವಾಂಸರು 'ಮಾರು' ಎಂಬರ್ಥವನ್ನು ಸ್ವೀಕರಿಸಿದ್ದಾರೆ. ಈ ಅರ್ಥದಂತೆ 'ಅಲ್ಲದೀನ' ಎಂಬ ಸಂಯೋಜಕ ಪದವು 'ಫಲ್‌ಯುಕಾತಿಲ್' ಎಂಬ ಕ್ರಿಯೆಯ ಕರ್ತೃ ಸ್ಥಾನ ಪಡೆಯುತ್ತದೆ. ಲೌಕಿಕ ಜೀವನದ ಲಾಭ ಮತ್ತು ಸುಖ–ಸೌಲಭ್ಯಗಳನ್ನು ಪರಲೋಕ ವಿಜಯಕ್ಕಾಗಿ ಸಲ್ಲಿಸಿದವರು ಭೀತಿ ಮತ್ತು ಚಾಂಚಲ್ಯವಿಲ್ಲದೆ ಅಲ್ಲಾಹ್ ಮತ್ತು ಪ್ರವಾದಿಯ ವಿರೋಧಿಗಳನ್ನು ಪ್ರತಿಭಟಿಸಲಿಕ್ಕಾಗಿ ಸ್ವತಃ ಸಿದ್ಧರಾಗಿ ಮುಂದೆ ಬರಬೇಕು ಅಥವಾ ಆ ರೀತಿ ಮುಂದೆ ಬಂದವರೇ ನೈಜ ವಿಶ್ವಾಸಿಗಳು. 'ಅಲ್ಲದೀನ ಯಶ್ರೂನ' ಎಂಬ ಮಾತಿಗೆ 'ಖರೀದಿಸುವವರು'



ಎಂಬ ಅರ್ಥ ನೀಡಿದಾಗ 'ಅಲ್ಲದೀನ' ಎಂಬ ಪದವು 'ಫಲ್‌ಯುಕಾತಿಲ್' ಎಂಬ ಕ್ರಿಯೆಯ ಕರ್ಮಸ್ಥಾನದಲ್ಲಿ ನಿಲ್ಲುತ್ತದೆ. ಪರಲೋಕ ಜೀವನ ಮತ್ತು ಅದರ ವಿಜಯವನ್ನು ತಿರಸ್ಕರಿಸಿದ, ಲೌಕಿಕ ಜೀವನದ ಸುಖ ಸೌಲಭ್ಯಗಳನ್ನು ಆಯ್ಕೆ ಮಾಡಿದ ಸತ್ಯನಿಷೇಧಿಗಳಾದ ಅಕ್ರಮಿಗಳನ್ನು ಪ್ರತಿಭಟಿಸಿ ಸೋಲಿಸು ವುದು ಅಥವಾ ನೈಜ ವಿಶ್ವಾಸಿಗಳಿಂದ ಮಾತ್ರ ಅವರನ್ನು ಪ್ರತಿಭಟಿಸಲು ಸಾಧ್ಯ. ಸಂದರ್ಭಸಾಧಕ ಹೇಡಿಗಳಿಂದ ಸಾಧ್ಯ ವಾಗಲಾರದೆಂದರ್ಥ.

ಅಲ್ಲಾಹನಿಗೆ ಕೇವಲ ನಾಮಮಾತ್ರ ವಾಗಿರುವ ವಿಶ್ವಾಸಿಗಳು ಮತ್ತು ಸೇವಕರ ಅಗತ್ಯವಿಲ್ಲ. ವಿಶ್ವಾಸ ಮತ್ತು ಕರ್ಮ ದಿಂದ ದೊರೆಯುವ ಲೌಕಿಕ ಲಾಭಗಳು ನೈಜ ಸತ್ಯವಿಶ್ವಾಸಿಗಳಿಗೆ ಸ್ಫೂರ್ತಿದಾಯಕ ವಾಗಿರುವುದಿಲ್ಲ. ಅವರು ಪರಲೋಕ ಹಿತಕ್ಕಾಗಿ ಲೌಕಿಕ ಜೀವನವನ್ನು ಅಲ್ಲಾಹ ನಿಗೆ ಮಾರಿದವರಾಗಿದ್ದಾರೆ. "ಅಲ್ಲಾಹನು ಸ್ವರ್ಗದ ವಾಗ್ದಾನವನ್ನು ನೀಡಿ ವಿಶ್ವಾಸಿ ಗಳಿಂದ ಅವರ ಪ್ರಾಣ ಮತ್ತು ಸಂಪತ್ತನ್ನು ಖರೀದಿಸಿದ್ದಾನೆ."

(ಅತ್ತೌಬ: 111)

ಆದ್ದರಿಂದ ಅಲ್ಲಾಹನ ಮಾರ್ಗದಲ್ಲಿ ಅರ್ಪಿಸುವ ಚಟುವಟಿಕೆಗಳ ಲೌಕಿಕ ಪರಿಣಾಮವು ಅವರಿಗೆ ಸಮಸ್ಯೆಯಾ ಗುವುದಿಲ್ಲ. ಆಗಬೇಕಾಗಿಲ್ಲ. ಯುದ್ಧ, ವಲಸೆ, ಸಂದೇಶ ಪ್ರಚಾರ, ಇತರ ಸೇವೆಗಳು ಮತ್ತು ಸಾಂದರ್ಭಿಕ ಚಟು ವಟಿಕೆಗಳ ನಿರ್ವಹಣೆ ಇತ್ಯಾದಿಗಳು ವಿಶ್ವಾಸಿಗಳ ಹೊಣೆಗಾರಿಕೆಯಾಗಿದೆ. ಅವರ ಸೋಲು–ಗೆಲುವುಗಳನ್ನು ಅಲ್ಲಾಹನು ತೀರ್ಮಾನಿಸುತ್ತಾನೆ. ಅವರ ಚಟುವಟಿಕೆಯು ಪ್ರಾಮಾಣಿಕವಾಗಿದ್ದರೆ, ಅದು ಸಂಪೂರ್ಣ ವಿಫಲಗೊಂಡರೂ ಅಲ್ಲಾಹನು ಅವರಿಗೆ ಶ್ರೇಷ್ಠ ಪ್ರತಿಫಲ ವನ್ನು ನೀಡುತ್ತಾನೆ. ಹಲವೊಮ್ಮೆ ದೇವ ಮಾರ್ಗದ ಹೋರಾಟದಲ್ಲಿ ವಧಿಸಲ್ಪಟ್ಟ ವನು ಅದರಲ್ಲಿ ಜಯಶಾಲಿಯಾದವನಿ ಗಿಂತ ಗೌರವಾರ್ಹನಾಗಬಹುದು. ವಿಜಯಕ್ಕಿಂತ ಮುಂಚೆ ಹುತಾತ್ಮತೆ ಯನ್ನು ಸೂಚಿಸಿರುವುದರಿಂದ ಅದು ವ್ಯಕ್ತವಾಗುತ್ತದೆ. ಈ ಪ್ರಜ್ಞೆಯಿರುವ ವಿಶ್ವಾಸಿಗಳು ಮತ್ತು ಮುಜಾಹಿದರನ್ನು ಧರ್ಮವು ಅಪೇಕ್ಷಿಸುತ್ತದೆಯೇ ವಿನಾ ಸ್ವಂತಕ್ಕೆ ಏನಾದರೂ ಲಾಭವಿದೆಯೆಂದು ಕಂಡಾಗ ಸೇವೆ ಸಲ್ಲಿಸಿ ಇಲ್ಲದಿದ್ದರೆ ದೂರ ಸರಿದು ವಿಮರ್ಶಿಸುವವರನ್ನಲ್ಲ.

### ಕೇಳಿದಿರಾ ಕೇಳಿ? (7ನೇ ಪುಟದಿಂದ)

**ಪುರುಷರ ಮಧ್ಯೆ ಪೂರ್ಣ ಸಮಾನತೆಯಿದೆ. ಅವರ ಮಾನವೀಯ ಹಕ್ಕುಗಳೂ ಸಮಾನವಾಗಿದೆ. ಅವರ ಸಾಮಾಜಿಕ ಹಕ್ಕುಗಳಲ್ಲೂ ಯಾವುದೇ ವ್ಯತ್ಯಾಸವಿಲ್ಲ. ಅಲ್ಲಾಹನ ಬಳಿ ಅವರ ಕರ್ಮಗಳಿಗಿರುವ ಪ್ರತಿಫಲದಲ್ಲೂ ಯಾವುದೇ ತಾರತಮ್ಯ ವಿಲ್ಲ. ಆದರೆ ಕೌಟುಂಬಿಕ ವ್ಯವಸ್ಥೆಯಲ್ಲಿ ಪತಿಗೆ ಪತ್ನಿಗಿಂತ ಒಂದು ಪದವಿ ಹೆಚ್ಚಿದೆ. ಇದು ಕುಟುಂಬ ವ್ಯವಸ್ಥೆಯಲ್ಲಿ ಸಮತೋಲನ ವಿರಲಿಕ್ಕಾಗಿ ಆಗಿದೆ. ಪತಿಯನ್ನು ಮನೆಯ ಯಜಮಾನ(ನಾಯಕ)ನೆಂದು ಸಾರಲಾಗಿದೆ. ಪತ್ನಿಗೆ ಆತ ನನ್ನು ಅನುಸರಿಸುವಂತೆ ಆದೇಶಿಸಲಾಗಿದೆ. ಪವಿತ್ರ ಕುರ್‌ಆನ್ ಹೇಳುತ್ತದೆ.**

**ಪುರುಷರಿಗೆ ಸ್ತ್ರೀಯರ ಮೇಲೆ ಹಕ್ಕಿರುವ ಹಾಗೆಯೇ ಸ್ತ್ರೀಯರಿಗೂ ಪುರುಷರ ಮೇಲೆ ನ್ಯಾಯೋಚಿತ ಹಕ್ಕಿದೆ. ಆದರೆ ಅವರ ಮೇಲೆ ಪುರುಷರಿಗೆ ಒಂದು ಪದವಿ ಇದೆ. (2:228) ಪತ್ನಿಯು ಪತಿಯನ್ನು ಎಲ್ಲ ಧರ್ಮಸಮ್ಮತ ಕಾರ್ಯಗಳಲ್ಲಿ ಅನು ಸರಿಸಲೇಬೇಕು. ಆದರೆ ಶರೀಅತ್ ವಿರೋಧಿ ಧರ್ಮವಿರೋಧಿ ಆಜ್ಞೆಗಳನ್ನು ನೀಡಿದರೆ ಅದನ್ನು ಅನುಸರಿಸಬಾರದು. ಏಕೆಂದರೆ ಪ್ರವಾದಿ(ಸ) ಹೇಳಿದ್ದಾರೆ– "ಅಲ್ಲಾಹನ ಆಜ್ಞೋಲ್ಲಂಘನೆಯಲ್ಲಿ ಯಾವ ಸೃಷ್ಟಿಯ ಆಜ್ಞೆಯನ್ನು ಪಾಲಿಸಬಾರದು."**

**ಒಟ್ಟಿನಲ್ಲಿ ಹದೀಸ್‌ನ ಪದಗಳನ್ನು ಗ್ರಹಿಸುವುದರಲ್ಲುಂಟಾಗುವ ಪ್ರಮಾದವೇ ವಾಸ್ತವದಲ್ಲಿ ಗೊಂದಲ ಸಂದೇಹ ಮತ್ತು ಆಕ್ಷೇಪಗಳಿಗೆ ಕಾರಣವಾಗುತ್ತದೆ.**

# ಸಹೀಹ್ ಬುಖಾರಿ

ಅನುವಾದ: ಎಂ.ಎಸ್.ಕೆ.

## ನಮಾಝ್

**363.** ಇಬ್ನು ಉಮರ್(ರ) ಹೇಳುತ್ತಾರೆ- ಪ್ರವಾದಿ(ಸ) ಮುಅದ್ದಿನ್‌ಗೆ ಅದಾನ್ ಕೊಡಲು ಆದೇಶಿಸುತ್ತಿದ್ದಾರೆ. ಅದರ ಬೆನ್ನಲ್ಲೇ ಹೇಳುತ್ತಿದ್ದರು. ಕೇಳಿರಿ. ಪ್ರಯಾಣ ದಲ್ಲಿರುವಾಗ ರಾತ್ರಿ ಚಳಿ ಅಥವಾ ಮಳೆಯಿದ್ದರೆ ಜೀನಿನೊಳಗೆ ನಮಾಝ್ ಮಾಡಿರಿ.

**364.** ಅಬೂಕತಾದ ಹೇಳುತ್ತಾರೆ- ನಾವು ಪ್ರವಾದಿಯವರೊಡನೆ ನಮಾಝ್ ಮಾಡುತ್ತಿದ್ದೆವು. ಅಷ್ಟರಲ್ಲಿ ಜನರ ಗದ್ದಲ ಕೇಳಿಸಿತು. ನಮಾಝ್ ಮಾಡಿಯಾದ ಬಳಿಕ ಪ್ರವಾದಿ(ಸ) ಅದೇನು ಗದ್ದಲವೆಂದು ಕೇಳಿದರು. ಜನರು ಹೇಳಿದರು- ನಾವು ನಮಾಝ್‌ಗಾಗಿ ಅವಸರಪಡುತ್ತಿದ್ದೆವು. ಪ್ರವಾದಿ(ಸ) ಹೇಳಿದರು- ಹಾಗೆ ಮಾಡಬೇಡಿರಿ. ನಮಾಝ್‌ಗೆ ಬರುವಾಗ ಸಾವಧಾನದಿಂದ ಬನ್ನಿ. ಎಷ್ಟಂಶ ನಮಾಝ್ ಸಿಗುತ್ತದೋ ನಿರ್ವಹಿಸಿರಿ. ಉಳಿದದ್ದನ್ನು ಅನಂತರ ಪೂರ್ತಿಗೊಳಿಸಿರಿ.

## ಇಕಾಮತ್

**365.** ಅಬೂಕತಾದ ಹೇಳುತ್ತಾರೆ- ಪ್ರವಾದಿ(ಸ) ಹೇಳಿದರು- ನಮಾಝ್‌ಗಾಗಿ ಇಕಾಮತ್ ಹೇಳಲಾದಾಗ ನನ್ನನ್ನು ಕಾಣುವ ವರೆಗೆ ಎದ್ದು ನಿಲ್ಲಬೇಡಿರಿ.

**366.** ಅನಸ್‌ರಿಂದ ವರದಿ: ಒಮ್ಮೆ ನಮಾಝ್‌ಗಾಗಿ ಇಕಾಮತ್ ಹೇಳಲಾಯಿತು. ಪ್ರವಾದಿವರ್ಯರು ಮಸೀದಿಯ ಒಂದು ಬದಿಯಲ್ಲಿ ಒಬ್ಬರೊಂದಿಗೆ ಮಾತನಾಡುತ್ತಿ ದ್ದರು. ಜನರು ನಿದ್ರಿಸುವ ವರೆಗೂ ಅವರು ನಮಾಝ್‌ಗೆ ನಿಲ್ಲಲಿಲ್ಲ.

## ಸಾಮೂಹಿಕ ನಮಾಝ್‌ನ ಮಹತ್ವ

**367.** ಅಬೂಹುರೈರಾ ವರದಿ ಮಾಡುತ್ತಾರೆ- ಪ್ರವಾದಿ(ಸ) ಹೇಳಿದರು- ನನ್ನ ಪ್ರಾಣ ಯಾರ ಕೈಯಲ್ಲಿದೆಯೋ ಆತನಾಣೆ! ನಾನು ಕಟ್ಟಿಗೆ ಉರಿಸಲು ಆಜ್ಞೆ ಕೊಟ್ಟು ನಮಾಝ್ ಮಾಡಲು ಆದೇಶಿಸಿ, ತರುವಾಯ ಅದಾನ್ ಕೊಟ್ಟಾಗ ಒಬ್ಬ ವ್ಯಕ್ತಿ ಇಮಾಮತ್ ಮಾಡಲು ನೇಮಿಸಿ, ಆ ಬಳಿಕ ನಮಾಝ್‌ನಲ್ಲಿ ಹಾಜರಾಗದೆ ಮನೆಯಲ್ಲೇ ಉಳಿಯುವವರನ್ನು ಅವರ ಮನೆಗಳ ಸಮೇತ ಹೊತ್ತಿಸಿ ಬಿಡಲು ಬಯಸಿದ್ದೇನೆ. ನನ್ನ ಪ್ರಾಣ ಯಾರ ಕೈಯಲ್ಲಿದೆಯೋ ಆತನಾಣೇ! ಒಂದು ಮಾಂಸ ಸಹಿತ ಮೂಳೆ ಅಥವಾ ಎರಡು ಪಕ್ಕೆಲುಬುಗಳ ಮಧ್ಯೆಯಿರುವ ಆಡಿನ ಮಾಂಸ ಸಿಗುತ್ತದೆಂದು ಜನರಿಗೆ ತಿಳಿದರೆ ಅವರು ಇಶಾ ನಮಾಝ್‌ಗೆ ಖಂಡಿತ ಹಾಜರಾಗುತ್ತಿದ್ದರು.

**368.** ಪ್ರವಾದಿ(ಸ) ಹೇಳಿರುವುದಾಗಿ ಅಬೂಹುರೈರಾ ವರದಿ ಮಾಡುತ್ತಾರೆ- ಜಮಾಅತ್(ಸಾಮೂಹಿಕ) ನಮಾಝ್ ಒಬ್ಬಂಟಿಗನಾಗಿ ಮಾಡುವ ನಮಾಝ್‌ಗಿಂತ 25 ಪಟ್ಟು ಹೆಚ್ಚು ಶ್ರೇಷ್ಠವಾಗಿದೆ. ತರುವಾಯ ಅಬೂಹುರೈರಾ ಹೇಳುತ್ತಾರೆ- ಎಷ್ಟು ಬೇಕೋ ಅಷ್ಟು ಕುರ್‌ಆನ್ ಪಠಿಸಿರಿ. ಇನ್ನ ಕುರ್‌ಆನಲ್ ಫಜ್ರಿ ಕಾನ ಮಶ್ಹೂದಾ.

**369.** ಅಬೂಮೂಸಾ ಹೇಳುತ್ತಾರೆ- ಪ್ರವಾದಿ(ಸ) ಹೇಳಿದರು: ನಮಾಝ್‌ನಲ್ಲಿ ಅತ್ಯಂತ ಹೆಚ್ಚು ಪುಣ್ಯಫಲ ಪಡೆಯುವವನು ಅತಿ ದೂರದಲ್ಲಿರುವವನಾಗಿರುವನು. ತರುವಾಯ ಅದಕ್ಕಿಂತ ಕಡಿಮೆ ದೂರದಲ್ಲಿರುವವನು. ಇಮಾಮರೊಂದಿಗೆ ನಮಾಝ್ ಮಾಡಲೆಂದು ಕಾದು ಕುಳಿತಿರುವವನ ಪುಣ್ಯವು ಒಬ್ಬಂಟಿಗನಾಗಿ ನಮಾಝ್ ಮಾಡುವವನಿಗಿಂತ ಹೆಚ್ಚಾಗಿದೆ.

## ಹುತಾತ್ಮರು

**370.** ಅಬೂಹುರೈರಾ ವರದಿ ಮಾಡುತ್ತಾರೆ- ಪ್ರವಾದಿ(ಸ) ಹೇಳಿದರು- ರಸ್ತೆಯಲ್ಲಿ ನಡೆಯುತ್ತಿರುವಾಗ ಒಂದು ಮುಳ್ಳಿನ ಗೆಲ್ಲು ಕಂಡು ಅದನ್ನು ದಾರಿಯಿಂದ ಸರಿಸಿದವನ ಬಗ್ಗೆ ಅಲ್ಲಾಹನು ಪ್ರಸನ್ನನಾಗುತ್ತಾನೆ ಮತ್ತು ಅವನನ್ನು ಕ್ಷಮಿಸಿ ಬಿಡುತ್ತಾನೆ. ತರುವಾಯ ಪ್ರವಾದಿ(ಸ) ಹೇಳಿದರು- ಪ್ಲೇಗ್ ಮತ್ತು ಕಾಲರಾದಲ್ಲಿ ಸಾಯುವವನು, ಮುಳುಗಿ ಸಾಯುವವನು. ಮಣ್ಣಿನಡಿ ಹೂತು ಸಾಯುವವನು, ಅಲ್ಲಾಹನ ಮಾರ್ಗದಲ್ಲಿ ಸಾಯುವವನು- ಈ ಐದು ಮಂದಿ ಶಹೀದ್(ಹುತಾತ್ಮರು)ಗಳಾಗಿದ್ದಾರೆ. ಬಾಕಿ ಉಳಿದ ಹದೀಸ್ ಹಿಂದೆ ಉಲ್ಲೇಖಗೊಂಡಿದೆ. (ನೋಡಿರಿ. ಹದೀಸ್ ನಂಬ್ರ 356)

## ಪಾದದ ಗುರುತು

**371.** ಅನಸ್ ವರದಿ ಮಾಡುತ್ತಾರೆ- ಬನೂ ಸಲಮ ಗೋತ್ರದವರು ತಮ್ಮ ಮನೆಗಳನ್ನು ಬಿಟ್ಟು ಪ್ರವಾದಿವರ್ಯರ ಹತ್ತಿರ ವಾಸ್ತವ್ಯ ಹೂಡಬಯಸಿದರು. ಅವರು ಮದೀನವನ್ನು ಬಿಡುವುದು ಪ್ರವಾದಿಯವರಿಗೆ ಇಷ್ಟವಾಗಲಿಲ್ಲ. ಅವರು ಕೇಳಿದರು- ಪಾದ ಚಿಹ್ನೆಗಳನ್ನು (ಕಾಲಿನ ಗುರುತುಗಳನ್ನು) ನೀವು ಪುಣ್ಯವೆಂದು ಭಾವಿಸುವುದಿಲ್ಲವೆ?

## ಫಜ್ರ್ ಮತ್ತು ಇಶಾ

**372.** ಅಬೂಹುರೈರಾ ವರದಿ ಮಾಡುತ್ತಾರೆ- ಪ್ರವಾದಿ(ಸ) ಹೇಳಿದರು: ಮುನಾಫಿಕರಿಗೆ (ಕಪಟ ವಿಶ್ವಾಸಿಗಳಿಗೆ) ಫಜ್ರ್ ಮತ್ತು ಇಶಾ ನಮಾಝ್ ತುಂಬಾ ಭಾರವಾಗುತ್ತದೆ. ಆ ಎರಡು ನಮಾಝ್‌ಗಳ ಪುಣ್ಯ ಎಷ್ಟೆಂದು ಅವರಿಗೆ ತಿಳಿದಿರುತ್ತಿದ್ದರೆ ತೆವಳಿಕೊಂಡಾದರೂ ಬರುತ್ತಿದ್ದರು.

## ಸಿದ್ದೀಕುಲ್ ಅಕ್ಬರ್ - 16

ಇ.ಎಸ್. ಇಬ್ರಾಹೀಮ್

# ದೇಶದ್ರೋಹಿಗಳ ವಿರುದ್ಧ ಕ್ರಮ

**ಜ**ನರ ಜೀವನವು ಶಾಂತಿ-ಸಮೃದ್ಧವಾಗಿರಬೇಕಾದರೆ ದೇಶ ಭದ್ರವಾಗಿರುವುದು ಪ್ರಾಮುಖ್ಯವಾಗಿದೆ. ಆದುದರಿಂದ ರಾಷ್ಟ್ರದ ಸುರಕ್ಷೆಯು ಪರಮ ಪ್ರಧಾನವಾಗಿದೆ. ಯಾವುದೇ ಆಡಳಿತಾಧಿಕಾರಿ ದೇಶದ್ರೋಹಿಗಳು ಕಡಿಮೆ ಸಂಖ್ಯೆಯಲ್ಲಿದ್ದರೆ, ಅವರನ್ನು ಬಂಧಿಸಿ ಶಿಕ್ಷಿಸಬಹುದಾಗಿದೆ. ಅವರು ಒಂದು ತಂಡ ಅಥವಾ ಒಂದು ಜನವಿಭಾಗವಾದರೆ ಸೇನಾ ಕಾರ್ಯಾಚರಣೆಯನ್ನೇ ನಡೆಸಬೇಕಾಗುತ್ತದೆ. ಇದು ಆಡಳಿತಾಧಿಕಾರಿಗಳು ಅನುಸರಿಸುತ್ತಾ ಬಂದಿರುವ ಕಾರ್ಯವಷ್ಟೇ. ಅಬೂಬಕರ್‌ರು ಕೂಡಾ ದೇಶದ ಹಿತದೃಷ್ಟಿಯಿಂದ ಈ ನೀತಿಯನ್ನು ಕಾರ್ಯರೂಪಕ್ಕೆ ತಂದಿದ್ದಾರೆ.

ಈವರೆಗೂ ನೀವು ಝಕಾತ್ ನಿಷೇಧಿಗಳ ವಿರುದ್ಧ ಹೋರಾಟವನ್ನು ಮತ್ತು ಮುಸ್ಲಿಮರು ವಿಜಯಶಾಲಿಗಳಾಗಿರುವುದನ್ನು ಪರಾಮರ್ಶಿಸಿದ್ದೇವೆಯಷ್ಟೇ? ಮುಸ್ಲಿಮರ ವಿರುದ್ಧ ಯುದ್ಧದಲ್ಲಿ ವಿರೋಧಿಗಳು ಹಿಮ್ಮೆಟ್ಟಿದ್ದಾರೆ. ಇಂತಹವರಲ್ಲಿ ಕೆಲವರು ಶರಣಾಗಿ ಮರಳಿ ಇಸ್ಲಾಮಿನ ವೃತ್ತವನ್ನು ಸೇರಿಕೊಂಡರು ಮತ್ತು ಕೆಲವರು ಇಸ್ಲಾಮಿ ವೃತ್ತದಿಂದ ಗಡೀಪಾರುಗೊಂಡರು.

ಈ ಗಡಿಪಾರಿಗೆ ತುತ್ತಾದವರು ಮುಸ್ಲಿಮರೊಂದಿಗೆ ಪ್ರತೀಕಾರವೆಸಗಲು ಹೊಂಚು ಹಾಕಿದರು. ತಮ್ಮ ಪ್ರತೀಕಾರಕ್ಕೆ ಕಪಟ ಪ್ರವಾದಿಗಳಾದ ತುಲೈಹಾ ಮತ್ತು ಮುಸೈಲಿಮರನ್ನು ಬೆಂಬಲಿಸುವ ಉಪಾಯವನ್ನು ಕಂಡು ಹಿಡಿದರು. ಈ ಮಾರ್ಗವನ್ನು ಅಬ್ಸ್, ದುಬ್‌ಯಾನ್, ಬನೂ ಬಕ್ರ್ ಗೋತ್ರಗಳು ಅನುಸರಿಸಿವೆ.

ಖಲೀಫಾ ಅಬ್‌ರಕನ್ನು ಸ್ವಾಧೀನ ಪಡಿಸಿದ ನಂತರ ಅದನ್ನು ಸಾರ್ವಜನಿಕ ಸೊತ್ತೆಂದು ಘೋಷಿಸಿಯೇ ಮದೀನಾಕ್ಕೆ ಮರಳಿ ಬಂದರೆಂಬುದನ್ನು ನಾವು ಹಿಂದೆಯೇ ತಿಳಿದುಕೊಂಡಿರುವೆವಷ್ಟೇ. ಅಂದರೆ ಝಕಾತ್ ನಿಷೇಧಿ ಕಲಹಕಾರರನ್ನು ಬೇರುಸಹಿತ ಕೀಳುವುದು ಖಲೀಫಾರ ದೃಷ್ಟಿಕೋನವಾಗಿತ್ತು. ಆದರೂ ಅದಕ್ಕೆ ಏನು ಮಾಡುವುದೆಂಬ ಯೋಚನೆಯು ಅವರನ್ನು ಆವರಿಸಿದೆ. ಗಲಭೆಕೋರರನ್ನು ಸಹಿಸುವುದಾಗಲಿ ಅವರೊಡನೆ ರಾಜಿ ಮಾಡಿಕೊಳ್ಳುವುದಾಗಲಿ ಸಾಧ್ಯವಿಲ್ಲ. ಅವರಿಗಿರುವ ಏಕೈಕ ದಾರಿಯೆಂದರೆ, ಪಶ್ಚಾತ್ತಾಪಟ್ಟು ಇಸ್ಲಾಮೀ ವೃತ್ತವನ್ನು ಮರಳಿ ಸೇರಿಕೊಳ್ಳುವುದು ಒಂದೇ ಆಗಿದೆ. ಅವರಿಂದ ಬೇರೇನನ್ನೂ ಸ್ವೀಕರಿಸಲು ಖಲೀಫಾರು ಸಿದ್ಧರಿಲ್ಲ. ಝಕಾತ್ ನಿಷೇಧಿಗಳು ಸಾಂಕೇತಿಕವಾಗಿ ಮುರ್ತದ್ದ್‌ಗಳೆಂದು ಅರಿಯಲ್ಪಡುತ್ತಿದ್ದಾರೆ. ಇಂದು ಅವರು ಇಸ್ಲಾಮೀ ರಾಷ್ಟ್ರಕ್ಕೆ ಬೆದರಿಕೆಯಾಗಿರುವರು. ಆದುದರಿಂದ ಅವರನ್ನು ಯುದ್ಧದ ಮೂಲಕ ಮೂಲೋತ್ಪಾಟಿಸುವುದೊಂದೇ ದಾರಿಯಾಗಿತ್ತು. ಅದನ್ನು ಬಿಟ್ಟು ಬೇರೆ ಉಪಾಯವಿರಲಿಲ್ಲ.

ಅಬ್‌ರಕನ್ನು ವಶಪಡಿಸಿಕೊಂಡು ಅಬೂಬಕರ್ ಮದೀನಾಕ್ಕೆ ಮರಳಿ ಬಂದಿರುವರಷ್ಟೇ. ಸಿರಿಯಾದಿಂದ ಗೆದ್ದು ಮರಳಿ ಬಂದು ಮದೀನಾದಲ್ಲಿ ವಿಶ್ರಾಂತಿ ಪಡೆಯುತ್ತಿರುವ ಉಸಾಮಾ ಮತ್ತು ಸಂಗಡಿಗರ ಆಯಾಸ ಪರಿಹಾರವಾಗಿರುವುದು ಖಚಿತಪಡಿಸಿ ಕೊಂಡು ಪುನ: ದಿಲ್‌ಕಿಸ್ಸಾಇಗೆ ಅವರನ್ನೆಲ್ಲ ಕರೆದುಕೊಂಡು ಹೋದರು.

ಅಲ್ಲಿ ಇಡೀ ಮುಸ್ಲಿಮ್ ಸೇನೆಯನ್ನು ಹನ್ನೊಂದು ತುಕಡಿಗಳಾಗಿ ವಿಭಜಿಸಿದರು. ವಿಭಜಿಸಲಾಗಿರುವ ಪ್ರತಿಯೊಂದು ದಳಕ್ಕೂ ಬೇರೆ ಬೇರೆ ದಂಡನಾಯಕರನ್ನು ನಿಯುಕ್ತಿಗೊಳಿಸಿದರು. ಪ್ರತಿಯೊಂದು ದಳಕ್ಕೂ ಬೇರೆ ಬೇರೆ ಧ್ವಜಗಳನ್ನು ನಿರ್ಣಯಿಸಿದರು. ಬೇರೆ ಬೇರೆ ಸೇನಾ ತುಕಡಿಗಳನ್ನು ರೂಪಿಸುವಾಗ ಶತ್ರುಗಳು ಹೊಂದಿರುವ ಸಾಮರ್ಥ್ಯಗಳನ್ನು ಪರಿಗಣಿಸಿದರು.

ಅವರು ರೂಪಿಸಿರುವ ದಂಡನಾಯಕರು ಮತ್ತು ಅವುಗಳಿಗೆ ಸೇನಾಕ್ರಮವನ್ನು ಗೊತ್ತುಪಡಿಸಿದ ಗುರಿ ಇಂತಿದೆ,

1. ಪ್ರಥಮ ದಳಕ್ಕೆ ಖಾಲಿದ್ ಬಿನ್ ವಲೀದ್ ದಂಡನಾಯಕರಾಗಿದ್ದಾರೆ. ಅವರು ನಡೆಸಬೇಕಾಗಿರುವ ಸೇನಾ ಕಾರ್ಯಾಚರಣೆಗೆ ಬುಸಾಕವನ್ನು ನಿಗದಿಪಡಿಸಿದರು. ಬುಸಾಕದಲ್ಲಿ ಬನೂ ಅಸದ್ ಗೋತ್ರದವರ ಮಧ್ಯೆ ತುಲೈಹಾ ಎಂಬ ಕಪಟ ಪ್ರವಾದಿ ಪ್ರತ್ಯಕ್ಷವಾಗಿದ್ದಾನೆ. ಅವನನ್ನು ಎದುರಿಸಿ ಯುದ್ಧ ಮಾಡುವುದು ಖಾಲಿದ್ ಮತ್ತು ಅವರ ದಳದ ಕರ್ತವ್ಯವಾಗಿತ್ತು. ಅದಾದ ನಂತರ ಖಾಲಿದ್‌ರ ಸೇನೆಯು ಬುತಾಹ್‌ಗೆ ತೆರಳಬೇಕಾಗಿದೆ. ಅಲ್ಲಿ ಬನೂತಮೀಮ್ ಗೋತ್ರದ ಮಾಲಿಕ್ ಬಿನ್ ನುವೈರಾರನ್ನು ಸಂಗಡಿಗರನ್ನು ಎದುರಿಸಬೇಕು. ತಮೀಮ್ ಮತ್ತು ಅಸದ್ ಗೋತ್ರಗಳು ಮದೀನಾಕ್ಕೆ ಹೆಚ್ಚು ಸಮೀಪವಾಗಿ ವಾಸಿಸುವ ಗೋತ್ರಗಳಾಗಿವೆಯಷ್ಟೇ. ಇವರೆಡೂ ಧರ್ಮಭ್ರಷ್ಟ ಗೋತ್ರಗಳಾಗಿವೆ. ಮಾತ್ರವಲ್ಲ ಪ್ರಬಲ ವಿಭಾಗಗಳೂ ಆಗಿವೆ.

ಈ ಪ್ರಬಲ ವಿಭಾಗವನ್ನು ಮೊದಲು ಎದುರಿಸಿ ಸೋಲಿಸುವುದು ಇತರರು ಶರಣಾಗುವುದಕ್ಕೆ ಅನಿವಾರ್ಯ ಕೂಡಾ ಆಗಿತ್ತು. ಮಾತ್ರವಲ್ಲ ಇಸ್ಲಾಮೀ ರಾಷ್ಟ್ರದ ಭದ್ರತೆಯ ದೃಷ್ಟಿಯಿಂದಲೂ ಅವರನ್ನು ಅವಗಣಿಸುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಸೇನಾ ಕಾರ್ಯಾಚರಣೆ ಅವರಿಂದಲೇ ಪ್ರಾರಂಭವಾಗಲಿ ಎಂದು ಅಬೂಬಕರ್ ನಿರ್ಧರಿಸಿದರು. ಹಾಗಾಗಿ ಅವರ ವಿರುದ್ಧ ಕಾರ್ಯಾ ಚರಣೆಗೆ ಯುದ್ಧ ವೀರನಾದ ಖಾಲಿದ್‌ರನ್ನೇ ಅಬೂಬಕರ್ ಆಯ್ದುಕೊಂಡಿದ್ದರು.

2. ಇಕ್ರಿಮ ಬಿನ್ ಅಬೂ ಜಹಲ್‌ರಿಗೆ ಯಮಾಮವನ್ನು ಖಲೀಫರು ನಿಗದಿಪಡಿಸಿದರು. ಅಲ್ಲಿ ಮುಸೈಲಿಮಾ ಎಂಬ ವ್ಯಕ್ತಿ ಕಪಟ ಪ್ರವಾದಿತ್ವದೊಂದಿಗೆ ರಂಗ ಪ್ರವೇಶಿಸಿದ್ದಾನೆ. ಅವನ ಗೋತ್ರವಾಗಿರುವ ಬನೂ ಹನೀಫಾದಲ್ಲಿ ಹೆಚ್ಚಿನವರು ಅವನನ್ನು ಬೆಂಬಲಿಸುತ್ತಿದ್ದರು.

3. ಶುರಹ್ ಬಿಲ್ ಬಿನ್ ಹಸನಾ, ಇಕ್ರಿಮಾರಿಗೆ ಮೊದಲು ಸಹಾಯ ಮಾಡಬೇಕಾಗಿದೆ. ಅದಾದ ನಂತರ ಕುಸಾಅದವರ ನಾಡಿಗೆ ಹೋಗಿ ಅಲ್ಲಿರುವ ಅಮ್ರ್ ಬಿನ್ ಆಸ್‌ರಿಗೆ ನೆರವಾಗಬೇಕಾಗಿದೆ.



ಆದರೆ ಇಕ್ರಿಮಾರಿಗೆ ಕಾರ್ಯಾಚರಣೆಯ ವೇಳೆ ಕಠಿಣ ಪರಿಸ್ಥಿತಿ ನಿರ್ಮಾಣವಾಗಿತ್ತು. ಆದುದರಿಂದ ಶುರಹ್‌ಬೀಲ್ ಮತ್ತು ಇಕ್ರಿಮಾರಿಬ್ಬರೂ ಅಲ್ಲಿ ಖಾಲಿದ್‌ರು ಬರುವವರೆಗೆ ಕಾಯಬೇಕಾಗಿ ಬಂದಿತ್ತು.

4. ಮಹಾಜೀರ್ ಇಬ್ನು ಅಬೀ ಉಮಯ್ಯ, ಇವರು ಮಖ್ಜೂಮ್ ಗೋತ್ರದವರಾಗಿದ್ದಾರೆ. ಇವರನ್ನು ಖಲೀಫಾ ಯಮನ್‌ಗೆ ನಿಯೋಜಿಸಿದರು. ವಧಿಸಲ್ಪಟ್ಟಿರುವ ಕಪಟ ಪ್ರವಾದಿ ಅಸ್ವದ್‌ನ ಅಳಿದುಳಿದು ಕೊಂಡಿದ್ದ ಅನುಯಾಯಿಗುಳು ಕ್ಷೋಭೆಗೆ ನೀರೆರೆಯುತ್ತಿದ್ದಾರೆ ಮತ್ತು ಅಲ್ಲಿ ಝುಬೈದಾ ಗೋತ್ರದ ಅಮ್ರು ಬಿನ್ ಮುಆದ್ ಕರೀಬ್ ಹಾಗೂ ಮುರಾದ್ ಗೋತ್ರದ ಕೈಸ್ ಬಿನ್ ಮಕ್ ಶೂಹ್‌ರ ಸಂಗಡಿಗರು ಕೂಡಾ ಕ್ಷೋಭೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

5. ಔಸ್ ಗೋತ್ರದ ಝೈದ್ ಬಿನ್ ಮುಕ್ರೀನ್, ಇವರನ್ನು ಖಲೀಫರು ಯಮನ್‌ನ ತಿಹಾಮ ಎಂಬಲ್ಲಿಗೆ ನಿಯೋಜಿಸಿದರು.

6. ಅಲ್ ಅಲಾ ಇಬ್ನುಲ್ ಅಝ್ರುಮಿ, ಇವರನ್ನು ಬಹ್ರೈನ್‌ಗೆ ನಿಯೋಜಿಸಲಾಗಿದೆ. ಅಲ್ಲಿ ಧರ್ಮಭ್ರಷ್ಟಗೊಂಡಿರುವ ಹತಮ್ ಬಿನ್ ಝುಬೀಅನನ್ನು ಇವರು ಎದುರಿಸಬೇಕಾಗಿದೆ.

7. ಹುದೈಫ ಬಿನ್ ಮುಹ್ಸಿನ್, ಹಿಮ್ಯರ್ ಗೋತ್ರದವರು. ಒಮನ್‌ನಲ್ಲಿ ಕಪಟ ಪ್ರವಾದಿತ್ವ ವಾದದೊಂದಿಗೆ ರಂಗಪ್ರವೇಶಿಸಿದ ಲಕೀತಿ ಎಂಬವನನ್ನು ಅವರು ಎದುರಿಸಬೇಕಾಗಿದೆ. ದುತ್ತಾಜ್ ಎಂಬ ಇನ್ನೊಂದು ಹೆಸರು ಅವನಿಗಿತ್ತು.

8. ಅರ್ಫಜತ್ ಬಿನ್ ಹಝುಮ, ಇವರನ್ನು ಮಹಾರಾ ಎಂಬಲ್ಲಿಗೆ ನಿಯೋಜಿಸಲಾಗಿದೆ.

ಈ ಎಂಟು ಸೇನಾದಳಗಳನ್ನು ಅಬೂಬಕರ್ ಅರೇಬಿಯಾದ ದಕ್ಷಿಣ ಭಾಗಕ್ಕೆ ನಿಯೋಜಿಸಿದರು. ಉಳಿದಿರುವ ಮೂರು ಸೇನಾದಳಗಳು ಅರೇಬಿಯಾದ ಉತ್ತರ ಭಾಗಕ್ಕೆ ಸಾಗಿದವು.

ಅವುಗಳಿಂತಿವೆ,

1. ಅಮ್ರ್ ಬಿನ್ ಆಸ್, ಇವರನ್ನು ಕುಸಾಅದವರ ನಾಡಾಗಿರುವ ಬಲ್ಕಾಇಗೆ ನಿಯೋಜಿಸಲಾಗಿದ.

2. ಮಅನಿ ಬಿನ್ ಹಾಜಿಸ್, ಸಲಮಾ ವಂಶಕ್ಕೆ ಸೇರಿದವರು. ಇವರು ಬನೂ ಸುಲೈಮ್ ಮತ್ತು ಹವಾಝಿನ್ ಗೋತ್ರಗಳನ್ನು ಎದುರಿಸಬೇಕಾಗಿದೆ.

3. ಖಾಲಿದ್ ಬಿನ್ ಸಈದ್, ಇವರು ಸಿರಿಯಾದ ಗಡಿ ಪ್ರದೇಶಗಳನ್ನು ವಿಮೋಚಿಸಬೇಕಾಗಿದೆ.

ಈ ರೀತಿ ಸೇನಾದಳಗಳನ್ನು ವಿಂಗಡಿಸಿ ಅವುಗಳಿಗೆ ಕಾರ್ಯಾಚರಣೆ ನಡೆಸುವ ಗುರಿಯನ್ನು ಗೊತ್ತುಪಡಿಸಿದ ಮೇಲೆ ಇನ್ನು ಮದೀನಾದಲ್ಲಿಯೇ ವಾಸ್ತವ್ಯವನ್ನು ಹೂಡುವುದೆಂದು ಅಬೂಬಕರ್‌ರ ತೀರ್ಮಾನವಾಗಿದೆ. ಅವರಿಗೂ ಯುದ್ಧ ಕಾರ್ಯಾಚರಣೆಯಲ್ಲಿ ಓರ್ವ ಸೈನಿಕನಾಗಿ ಪಾಲ್ಗೊಳ್ಳಬೇಕೆಂದಿದೆ. ಸತ್ಯ ಮತ್ತು ನ್ಯಾಯ ಸ್ಥಾಪನೆಯ ಮಾರ್ಗದಲ್ಲಿ ತನ್ನನ್ನು ತೊಡಗಿಸುವ ವಾಂಛೆಯಿದೆ. ಆದರೆ ಹಾಗೆ ಮಾಡುವಂತಿರಲಿಲ್ಲ. ಅವರು ಇಸ್ಲಾಮೀ ರಾಷ್ಟ್ರದ ಮುಖ್ಯಸ್ಥರು ಮತ್ತು ಮುಸ್ಲಿಮರ ಖಲೀಫರಾಗಿದ್ದಾರೆ. ಆದುದರಿಂದ ಅಬೂಬಕರ್‌ರು ಇಸ್ಲಾಮೀ ರಾಷ್ಟ್ರದ ರಾಜಧಾನಿಯಲ್ಲಿರುವುದು ಆವಶ್ಯಕವಾಗಿದೆ. ಖಲೀಫರ ಆಜ್ಞೆ ಸೂಚನೆಗಳು ಮದೀನಾದಿಂದಲೇ ಹೊರಡಿಸಬೇಕಾಗಿದೆ.

ಇದು ಖಲೀಫರನ್ನು ಯುದ್ಧದಲ್ಲಿ ನೇರವಾಗಿ ಭಾಗವಹಿಸದಂತೆ ನಿರ್ಧರಿಸಲು ಪ್ರೇರಣೆಯಾಗಿರಬಹುದು.

## ಸಾಮಾನ್ಯನ ಸಾಧನೆ

ಆಲ್ಬರ್ಟ್ ಐನ್‌ಸ್ಟೈನ್ 20 ನೇ ಶತಮಾನದಲ್ಲಿ ವಿಜ್ಞಾನದಲ್ಲಿ ಮಹಾನ್ ಕ್ರಾಂತಿಯನ್ನು ಸಾಧಿಸಿದವರು. ಆದರೆ ಅವರ ಜೀವನದ ಆರಂಭ ಅತ್ಯಂತ ಸಾಮಾನ್ಯವಾಗಿತ್ತು. ಆತ ಮೂರು ವರ್ಷ ಪ್ರಾಯವಾಗುವ ತನಕ ಮಾತಾಡಲು ಕಲಿತಿರಲಿಲ್ಲ. ತಂದೆ ಒಬ್ಬ ಸಾಮಾನ್ಯ ವ್ಯಕ್ತಿಯಾಗಿದ್ದ. ಒಮ್ಮೆ ಶಾಲೆಯಿಂದ ದಡ್ಡನೆಂಬ ಕಾರಣಕ್ಕೆ ವಜಾಗೊಂಡಿದ್ದ. ಝುರಿಕ್‌ನ ಪಾಲಿಟೆಕ್ನಿಕ್‌ನಲ್ಲಿ ಒಂದು ವರ್ಷ ಪ್ರವೇಶ ಸಿಗದೆ ಹೋಗಿತ್ತು. 20 ವರ್ಷ ಪ್ರಾಯವಾಗುವ ತನಕ ಆತನಲ್ಲಿ ಯಾವ ವಿಶೇಷ ಪ್ರತಿಭೆಯೂ ಕಂಡು ಬಂದಿರಲಿಲ್ಲ. ಆದರೆ ಆ ಬಳಿಕ ಆತ ವಿಜ್ಞಾನ ಕ್ಷೇತ್ರದಲ್ಲಿ ಶ್ರಮ ವಹಿಸಿ ದುಡಿದು ಅಸಾಮಾನ್ಯ ಸಾಧನೆಗೈದನು. ಅವನ ಜೀವನ ಚರಿತ್ರೆ ಬರೆದವನೊಬ್ಬ ಹೀಗೆ ಉಲ್ಲೇಖಿಸಿರುವನು.

**We could take heart that it is not neccessary to be a good student to become Einstein**

"ಐನ್‌ಸ್ಟೈನ್ ಆಗಲಿಕ್ಕೆ ವಿದ್ಯಾರ್ಥಿ ದೆಸೆಯಲ್ಲಿ ಉತ್ತಮ ಸಾಧನೆ ಮಾಡಿರಬೇಕೆಂದೇನೂ ಇಲ್ಲ ಎಂಬುದನ್ನು ನಾವು ತಿಳಿದಿರಬೇಕು."

ಐನ್‌ಸ್ಟೈನ್ 26ನೇ ವರ್ಷ ಪ್ರಾಯದಲ್ಲಿ ತನ್ನ ಪ್ರಥಮ ವಿಜ್ಞಾನ ಗ್ರಂಥವನ್ನು ಪ್ರಕಾಶನ ಗೊಳಿಸಿದನು. ಅನಂತರ ಅವನ ಕೀರ್ತಿಯು ಮೇಲೇರುತ್ತಾ ಸಾಗಿತು. ಆತ ಸಾಮಾನ್ಯನಂತೆ ಜೀವನ ಸಾಗಿಸುತ್ತಿದ್ದ. ಸಾಮಾನ್ಯ ಆಹಾರ ಸೇವಿಸುತ್ತಿದ್ದ. ಹೆಚ್ಚಿನ ವೇಳೆ ಅರ್ಧ ರಾತ್ರಿಯ ತನಕ ಕೆಲಸ ಮಾಡುತ್ತಿದ್ದ. ಐನ್‌ಸ್ಟೈನ್‌ಗೆ ಇಸ್ರೇಲ್‌ನ ರಾಷ್ಟ್ರಪತಿಯಾಗುವ ಅವಕಾಶ ನೀಡಲಾಗಿತ್ತು. ಆದರೆ ರಾಜಕೀಯವು ಮಾನವತೆಯ ಅರ್ಬುದವೆನ್ನುತ್ತಾ ಆತ ಆ ಕೊಡುಗೆಯನ್ನು ತಿರಸ್ಕರಿಸಿದ. 1933ರಲ್ಲಿ ಅವನು ಹಿಟ್ಲರ್‌ನ ಜರ್ಮನಿಯನ್ನು ತೊರೆದನು. ಐನ್‌ಸ್ಟೈನ್ ತಲೆ ಕಡಿದು ತರುವವರಿಗೆ ಹಿಟ್ಲರ್ ದೊಡ್ಡ ಮೊತ್ತದ ಬಹುಮಾನಗಳನ್ನು ಘೋಷಿಸಿದ್ದ.

ಇತಿಹಾಸದಲ್ಲಿ ಇಂತಹ ಅನೇಕ ಉದಾಹರಣೆಗಳು ಸಿಗುತ್ತವೆ. ಮನುಷ್ಯನು ಅಸಾಮಾನ್ಯ ಸಾಧನೆಗೆ ಅವನ ಹುಟ್ಟು ಅಸಾಮಾನ್ಯವಾಗಿರಬೇಕೆಂದಿಲ್ಲ. ಸಾಮಾನ್ಯವಾಗಿ ಹುಟ್ಟಿದವರು ಕೂಡಾ ದೊಡ್ಡ ದೊಡ್ಡ ಸಾಧನೆಗಳನ್ನು ಮಾಡಬಹುದು. ಆದರೆ ಅದಕ್ಕಾಗಿ ಮನುಷ್ಯನು ಅಸಾಮಾನ್ಯ ಶ್ರಮವಹಿಸಬೇಕು. ಅತ್ಯಂತ ಕಷ್ಟದ ಪರಿಸ್ಥಿತಿಯಲ್ಲೂ ತಮ್ಮ ಜೀವಂತಿಕೆ ಮತ್ತು ಸ್ವಂತಿಕೆಯನ್ನು ದೃಢಪಡಿಸಬೇಕು. ಸಂಕಷ್ಟದ ಪರಿಸ್ಥಿತಿಯಲ್ಲಿ ಜೀವನದ ಪುರಾವೆ ನೀಡುವವರೇ ದೊಡ್ಡ ಅದೃಷ್ಟ ಶಾಲಿಗಳು. ಏಕೆಂದರೆ ಕಷ್ಟದ ಪರಿಸ್ಥಿತಿಯು ಮನುಷ್ಯನ ಕ್ರಿಯಾಶೀಲತೆಯ ಉತ್ತಮ ಪ್ರೇರಕವಾಗಿದೆ. ಅದು ಮನುಷ್ಯನಲ್ಲಿ ಹುದುಗಿರುವ ಪ್ರತಿಭೆಗಳನ್ನು ಹೊರತರುತ್ತದೆ. ಜೀವನದ ಅತ್ಯುತ್ತಮ ಪಾಠ ಕಷ್ಟದ ಪರಿಸ್ಥಿತಿಯಲ್ಲೇ ಸಿಗುತ್ತದೆ. ಸುಖದ ಸುಪ್ಪತ್ತಿಗೆಗಿಂತಲೂ ಕಷ್ಟದ ಮಡಿಲಲ್ಲಿ ಬೆಳೆದವರು ಮಹಾನರಾಗುತ್ತಾರೆ. ದೇವರ ಈ ವಿಶ್ವದಲ್ಲಿ ಸಾಧ್ಯತೆಗಳಿಗೆ ಕೊರತೆಯೇ ಇಲ್ಲ. ಇಲ್ಲಿ ಸಣ್ಣ ಕೆಲಸದಿಂದ ಆರಂಭಿಸುವವನೂ ನಿರಾಶನಾಗಬೇಕಾಗಿಲ್ಲ. ಸಾಮಾನ್ಯ ಸ್ಥಿತಿಯು ಜೀವನದ ಸುಭದ್ರ ಸೋಪಾನ. ಇತಿಹಾಸದ ಹೆಚ್ಚಿನ ಮಹತ್ಸಾಧನೆಗಳು ಸಾಮಾನ್ಯ ಸ್ಥಿತಿಯಲ್ಲೇ ಜನ್ಮ ತಾಳಿವೆ.

ಚಿಂತನೆ



ಇಬ್ರಾಹೀಮ್ ಸಈದ್

# ಅಕ್ರಮದ ನಿರ್ಮೂಲನೆ- ಅಲ್ಲಾಹನ ಕಾರ್ಯವಿಧಾನ

## ಮೂಸಾ v/s ಫಿರ್‌ಔನ್- 3

ಅಖ್ಲಾಕ್ ಹುಸೈನ್



ಅಕ್ರಮವು ಮಿತಿಮೀರಿದಾಗ ಮತ್ತು ಬದಲಾವಣೆಯ ಯಾವುದೇ ದಾರಿಗಾಣದೆ ಜನ ಸಾಮಾನ್ಯರು ಹತಾಶರಾದಾಗ, ಆಡಳಿತ ವರ್ಗವು ತನ್ನನ್ನು ನಿರಂಕುಶ ಪ್ರಭುತ್ವದ ಒಡೆಯರೆಂದು ಭಾವಿಸಿದಾಗ ಮತ್ತು ಒಂದು ವರ್ಗವು ತನ್ನ ಅಧಿಕಾರವನ್ನು ಭದ್ರಪಡಿಸಿ ಅದೆಂದೂ ಅಳಿದು ಹೋಗದೆಂದು ಭಾವಿಸಿ ದಬ್ಬಾಳಿಕೆ ನಡೆಸಿ ಹಿಂಸೆ ದೌರ್ಜನ್ಯಗಳ ಎಲ್ಲ ಮೇರೆಗಳನ್ನು ಮೀರಿದಾಗ, ಅಲ್ಲಾಹನ ಕರುಣೆಯು ಅಸಹಾಯಕ ದಾಸರ ಸಹಾಯಕ್ಕೆ ಧಾವಿಸಿ ಬರುತ್ತದೆ. ತನ್ನ ಸಹಾಯದ ನಿರೀಕ್ಷೆಯಿರಿಸಿದವರನ್ನೆಂದೂ ನಿರಾಶೆಗೊಳಿಸದ ಒಂದು ಅಸ್ತಿತ್ವವಿದೆಯೆಂಬುದನ್ನು ಮತ್ತೊಮ್ಮೆ ತೋರಿಸಿ ಕೊಡುತ್ತದೆ. ಅವನ ಕೆಲಸದಲ್ಲಿ ವಿಳಂಬವಾಗ ಬಹುದು. ಅದರಲ್ಲೂ ಯುಕ್ತಿ ಅಡಗಿದೆ. ಆದರೆ ಅಂಧಕಾರವಿಲ್ಲ. ನಾವು ನೋಡುತ್ತೇವೆ. ಈಜಿಪ್ಟ್‌ನಲ್ಲಿ ಇಸ್ರಾಈಲ್ ಜನಾಂಗಕ್ಕೆ ಜೀವಿಸುವ ಹಕ್ಕನ್ನು ನಿಷೇಧಿಸಿದಾಗ, ಅವರನ್ನು ಶಾಶ್ವತ ಗುಲಾಮಗಿರಿಯಲ್ಲಿ ಬಂಧಿಸಿಡುವ ಎಲ್ಲ ಬಾಗಿಲುಗಳನ್ನು ಮುಚ್ಚಿ ಬಿಡಲಾದಾಗ ಅಲ್ಲಾಹನು ಆ ಅಕ್ರಮಿಗಳ ಅಧಿಕಾರವನ್ನು ಕಿತ್ತೆಸೆಯುವ ತೀರ್ಮಾನ ಮಾಡಿದನು.

"ನಾವು ಭೂಮಿಯಲ್ಲಿ ತುಳಿಯಲ್ಪಟ್ಟವರ ಮೇಲೆ ಕೃಪೆ ತೋರಲು, ಅವರನ್ನು ನಾಯಕರನ್ನಾಗಿ ಮಾಡಲು ಮತ್ತು ಅವರನ್ನೇ ಉತ್ತರಾಧಿಕಾರಿಗಳಾಗಿ ಮಾಡಿ ಅವರಿಗೆ ಪ್ರಭುತ್ವ ನೀಡಲು ಹಾಗೂ ಫಿರ್‌ಔನ್, ಹಾಮಾನ್ ಮತ್ತವರ ಸೇನೆಗಳಿಗೆ ಯಾವುದರ ಭಯವಿತ್ತೋ ಅದನ್ನೇ ತೋರಿಸಿ ಕೊಡಬೇಕೆಂದು ಬಯಸಿದ್ದೆವು." (ಕುರ್‌ಆನ್: 28: 5-6)

ಚರಿತ್ರೆಯಲ್ಲಿ ಪದೇ ಪದೇ ಪುನರಾವರ್ತನೆಗೊಳ್ಳುತ್ತಿರುವ ದೈವಿಕ ಕಾರ್ಯ ವಿಧಾನವಿದು. ಲೋಕದಲ್ಲಿ ಎಂದಾದರೂ ಒಬ್ಬ ಫಿರ್‌ಔನ್ ಬಂದು ತನ್ನ ನಿರಂಕುಶ ಆಡಳಿತದ ಮೂಲಕ ಜನರ ಮೇಲೆ ದಬ್ಬಾಳಿಕೆ ನಡೆಸಿದಾಗ ಅವನನ್ನು ದಮನಿಸಲು ಅಲ್ಲಾಹನು ವ್ಯವಸ್ಥೆ ಮಾಡಿದನು. ಫಿರ್‌ಔನನ ಕಾಲದ ಅಕ್ರಮ-ಅತ್ಯಾಚಾರಕ್ಕೆ ಬಲಿಯಾಗಿ ಯಾವುದೇ ಮುಕ್ತಿ ಮಾರ್ಗವನ್ನು ಕಾಣದೆ ತತ್ತರಿಸುವ ಎಲ್ಲ ದಮನಿಕರು ಮತ್ತು ಮರ್ದಿತರಿಗೆ ಈ ಸೂಕ್ತಗಳಲ್ಲಿ ಸುವಾರ್ತೆ ಇದೆ. ಅನ್ಯಾಯದ ಹಗ್ಗವು ದೀರ್ಘವಾಗಿರಬಹುದು. ಆದರೆ ಅದು ಶಾಶ್ವತವಲ್ಲ. ಒಂದಲ್ಲ ಒಂದು ದಿನ ಈ ಪರಂಪರೆ ಕೊನೆಗೊಳ್ಳಲೇ ಬೇಕು. ಸಕಲ ಅಕ್ರಮ-ಅತ್ಯಾಚಾರಕ್ಕೆ ಬಲಿಯಾಗಿದ್ದ ಅದೇ ಮರ್ದಿತರು ತಮ್ಮನ್ನು ದಮನಿಸುವುದರಲ್ಲಿ ಯಾವುದೇ ಕೊರತೆಯುಂಟು ಮಾಡಿರದ ಅದೇ ಆಡಳಿತದ ಒಡೆಯರಾಗಲಿರುವರೆಂಬ ಶುಭ ಸಂದೇಶವು ಅಲ್ಲಾಹನ ವತಿಯಿಂದ ಆ ಎಲ್ಲ ಜನ ವರ್ಗಗಳಿಗೆ ಈ ಮೂಲಕ ನೀಡಲಾಗಿದೆ.

ಇಲ್ಲಿ ಫಿರ್‌ಔನ್ ಮತ್ತು ಅವನ ಪರಿವಾರದವರೊಂದಿಗೆ ಅದೇ ನಡೆಯಿತು. ಹುಟ್ಟುವ ಸ್ವಾತಂತ್ರ್ಯದಿಂದಲೂ ವಂಚಿತರಾಗಿದ್ದ ಇಸ್ರಾಈಲ್ ಜನಾಂಗವನ್ನು ಅಲ್ಲಾಹನು ಫಿರ್‌ಔನನ ಕಪಿಮುಷ್ಠಿಯಿಂದ ಬಿಡಿಸಿದ್ದಷ್ಟೇ ಅಲ್ಲ, ಫಿರ್‌ಔನ್ ಮತ್ತವನ ಆಪ್ತರನ್ನೂ ಬೆಂಬಲಿಗರನ್ನೂ ಸಂಪೂರ್ಣ ಅಳಿಸಿ ಹಾಕುವ ವ್ಯವಸ್ಥೆ ಮಾಡಿದನು. ಯಾವ ಆತಂಕವನ್ನು ನೀಗಿಸಲಿಕ್ಕಾಗಿ ಫಿರ್‌ಔನ್ ರಾತ್ರಿ ಹಗಲೆನ್ನದೆ ಚಿಂತಿಸುತ್ತಿದ್ದನೋ ಅದನ್ನೇ ಮಾಡಿ ಬಿಟ್ಟನು.

ಫಿರ್‌ಔನನಂತಹ ಬಲಿಷ್ಠ ಚಕ್ರವರ್ತಿಯನ್ನು ಕಾಡುತ್ತಿದ್ದ ಆ ಆತಂಕಗಳು ಯಾವುದಾಗಿತ್ತು? ಪ್ರತಿಯೊಬ್ಬ ನಿರಂಕುಶಾಡಳಿತಗಾರನು ತನ್ನ ಪ್ರಜೆಗಳ ಮೇಲೆ ದಬ್ಬಾಳಿಕೆ ನಡೆಸುತ್ತಾ ಇರುವಾಗ ತನ್ನ ಅಧಿಕಾರವು ಬುಡಮೇಲಾಗುವುದೋ ಎಂಬ ಚಿಂತೆ ಕಾಡುತ್ತಿರುತ್ತದೆ. ಎಲ್ಲಾದರೂ ಒಂದು ಎಲೆ ಅಲುಗಾಡಿದರೂ ಅವನ ನಿದ್ರೆ ಹಾರಿ ಬಿಡುತ್ತದೆ. ಇದು ತನ್ನನ್ನು ಹತ್ತಿಕ್ಕುವ ಯಾವನೋ ವೈರಿಯ ವಿಧ್ವಂಸಕ ಕೃತ್ಯವಾಗಿರಲೇ ಬೇಕೆಂದು ಆತ ಭಾವಿಸುತ್ತಿರುತ್ತಾನೆ. ಆದ್ದರಿಂದ ಮುಂದೆಂದಾದರೂ ಬರಬಹುದು ಅಥವಾ ಅವನ ಮನಮಸ್ತಿಷ್ಕದಲ್ಲಿ ಮೂಡುವ ಯಾವುದೋ ಅಪಾಯವನ್ನು ತಡೆಗಟ್ಟುವ ಚಿಂತೆಯಲ್ಲೇ ಆತ ದಿನ ಕಳೆಯುತ್ತಾನೆ.

ಇಸ್ರಾಈಲ್ ಜನಾಂಗವು ಈಜಿಪ್ಟ್ ದೇಶದಲ್ಲಿ ಅತ್ಯಂತ ಶಕ್ತಿಶಾಲಿ ಆಡಳಿತ ವರ್ಗವೆಂಬ ನೆಲೆಯಲ್ಲಿ ಬದುಕಿತ್ತು. ಜನಸಂಖ್ಯೆಯ ಬಹುದೊಡ್ಡ ಪಾಲು ಅವರದೇ ಆಗಿತ್ತು. ಜನರ ಸಂಖ್ಯಾಬಲವು ಯಾವಾಗಲೂ ವಿರೋಧಿಗಳಿಗೆ ಪ್ರಾಣಕಂಟಕವಾಗಿರುತ್ತದೆ. ಫಿರ್‌ಔನ್ ಈ ಅಪಾಯವನ್ನು ಚೆನ್ನಾಗಿ ಮನಗಂಡಿದ್ದನು. ಅವನು ಈ ಜನಬಲವನ್ನು ಕಡಿಮೆಗೊಳಿಸಲು ಗಂಡು ಸಂತಾನವನ್ನು ನಿಯಂತ್ರಿಸುವ ವ್ಯವಸ್ಥೆ ಮಾಡಿದನು. ಆರ್ಥಿಕವಾಗಿ ಅವರನ್ನು ವ್ಯಾಪಾರ ಮತ್ತು ಹುದ್ದೆಗಳಿಂದ ದೂರವಿರಿಸಿದನು. ಸಾಮಾಜಿಕವಾಗಿ ಅವರಿಗೆ ಗುಲಾಮರ ಮತ್ತು ನೌಕರರ ಸ್ಥಾನಮಾನ ನೀಡಿದನು. ರಾಜಕೀಯವಾಗಿ ಎಂದೂ ತಲೆಯೆತ್ತಲು ಸಾಧ್ಯವಿಲ್ಲದ ರೀತಿಯಲ್ಲಿ ಅವರನ್ನು ಅತ್ಯಂತ ದುರ್ಬಲ ಅಲ್ಪಸಂಖ್ಯಾತರಾಗಿ ಮಾಡಿದನು. ಈ ರೀತಿ ತನ್ನ ಶಾಶ್ವತ ಪ್ರಭುತ್ವವನ್ನು ಉಳಿಸುವ ವ್ಯವಸ್ಥೆ ಮಾಡಿದನು.

ಈ ರಕ್ಷಣಾ ವ್ಯವಸ್ಥೆ ಕೇವಲ ಫಿರ್‌ಔನನಿಗೆ ಸೀಮಿತವಾಗಿರಲಿಲ್ಲ. ಅದರಲ್ಲಿ ಹಾಮಾನ್‌ನ ನಾಯಕತ್ವದಲ್ಲಿದ್ದ ಅವನ ಮಂತ್ರಿ ಮಹೋದಯರೂ ಇದ್ದರು. ಇವರು ನಿರಂಕುಶ ಪ್ರಭುಗಳ ಬೆಂಬಲಕ್ಕಿರುವ ವರ್ಗವಾಗಿರುವುದರಿಂದಲೂ ಅವರ ರಕ್ಷಣೆ ಅಗತ್ಯವಾಗಿತ್ತು. ಇವರು ಚಕ್ರವರ್ತಿಗೆ ಅತ್ಯಧಿಕ ನಿಷ್ಠರಾಗಿರುತ್ತಾರೆ. ಇಂತಹ ನಿರಂಕುಶ ಪ್ರಭುತ್ವದ ಉಳಿವಿಗಾಗಿ ಅವರ ಅಗತ್ಯವಿರುತ್ತದೆ. ಆದ್ದರಿಂದ ಅಲ್ಲಾಹನು ಕೇವಲ ಫಿರ್‌ಔನನಿಗೆ ಮಾತ್ರ ಗತಿ ಕಾಣಿಸುವ ವ್ಯವಸ್ಥೆ ಮಾಡಿದ್ದಲ್ಲ. ಅವನ ಜೊತೆಯಲ್ಲಿ ಈ ವರ್ಗದ ದುರ್ಗತಿಯ ವ್ಯವಸ್ಥೆಯನ್ನು ಮಾಡಿದನು.

### ಪಂಜರದ ಪಕ್ಷಿಯ ವ್ಯಥೆ

ನಾನು ಪಂಜರದ ಪಕ್ಷಿಯಾಗಿರುವೆನು
ಕೇಳುವವರಾರು ನನ್ನೊಡಲ ವ್ಯಥೆಯನು?
ನಾನು ಸಂತೋಷವ ಕಳೆದು ಕೊಂಡೆನು
ಬೇರೆಯವರ ಸಂತೋಷಕ್ಕೆ ಕಾರಣವಾದೆನು

ದೂರದ ಕಾಡು ಅಲ್ಲಿರುವ ಬೆಟ್ಟದ
ಬಳಿಯಲ್ಲಿ ಹರಿಯುವ ನದಿ ತೀರದಲಿ

ಗೆಳೆಯರೊಡನೆ ತಿಂದುಂಡು ನಾ ಬದುಕಿದೆ
ಇನ್ನು ಅಂತಹ ಸಂತೋಷ ಗಳಿಸದೆ
ಇನ್ನು ಮುಂದೆ ನಾನು ಬದುಕಬಹುದೇ?
ಎಂಬ ಚಿಂತೆಯು ನನ್ನ ಕಾಡುತ್ತಿದೆ

ಮನುಷ್ಯ ನನ್ನನ್ನು ದೂರದೂರಿನಿಂದ
ತಂದು ಇಲ್ಲಿ ಇಟ್ಟುಕೊಂಡಿರುವನು

ಮನುಷ್ಯ ನನ್ನನ್ನೇಕೆ ಹಿಂಸಿಸುತ್ತಿದ್ದ?
ಪಕ್ಷಿಗಳಿಗೆಲ್ಲಿ ಬದುಕುವ ಹಕ್ಕಿದೆ?
ನಮಗೆ ಇಲ್ಲೇನು ಬದುಕಬಾರದೇ?
ಎಂದು ಪಕ್ಷಿಯು ಪ್ರಶ್ನಿಸುತ್ತಿದೆ

ಮುಹಮ್ಮದ್ ಅರ್ಝ್ಮಾಲ್, ಕಸ್ಬಾಬೆಂಗ್ರೆ

# ಜಾಗತೀಕರಣದಿಂದಾದ ಲಾಭ

## ಇಸ್ಲಾಮಿ ಬ್ಯಾಂಕಿಂಗ್- 50

ಡಾ| ಮುಹಮ್ಮದ್ ಆರಿಫ್

ಜಾಗತೀಕರಣವು ಇಸ್ಲಾಮಿಕ್ ಹಣಕಾಸಿನ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆಗೆ ನಾಂದಿ ಹಾಡಿದೆ. ಅಂತಾರಾಷ್ಟ್ರೀಯ ಹೂಡಿಕೆದಾರರನ್ನು ಆಕರ್ಷಿಸುವುದಕ್ಕಾಗಿ ಬೃಹತ್ ಫೈನಾನ್ಶಿಯಲ್ ಹೌಸ್‌ಗಳ ಬೆಳವಣಿಗೆ ಇಂತಹ ಒಂದು ಆರಂಭವಾಗಿದೆ. ಬಹ್ರೈನ್ ಈ ವಿಚಾರವಾಗಿ ಮುಖ್ಯವಾಗುತ್ತಿದೆ. ಅಲ್ಲಿನ ಇಸ್ಲಾಮಿಕ್ ಮಾರ್ಕೆಟಿನಲ್ಲಿ ಸರಕಾರಿ ಬಿಲ್ಲುಗಳನ್ನು ನಿಭಾಯಿಸುವುದು ಆರಂಭಗೊಂಡಿದೆ. ಮಲೇಷ್ಯಾದ ಲೆಬನ್(Labuan) ಈ ರೀತಿ ಬೆಳೆದು ಬಂದ ಇನ್ನೊಂದು ಕೇಂದ್ರವಾಗಿದೆ.

ಅದೇ ವೇಳೆ ಜಾಗತೀಕರಣವು ಇಸ್ಲಾಮಿಕ್ ಬ್ಯಾಂಕುಗಳಿಗೆ ಬೃಹತ್ ಸವಾಲನ್ನೇ ಒಡ್ಡುತ್ತಿದೆ ಎಂಬ ವಿಚಾರವೂ ಪ್ರಧಾನವೇ? ಇದನ್ನು ಎದುರಿಸಬೇಕಾದರೆ ಹೊಸ ಸಾಧ್ಯತೆಗಳನ್ನು ಸಂಶೋಧಿಸುವುದು ಅನಿವಾರ್ಯವಾಗಿದೆ. ಪರಂಪರಾಗತವಾಗಿ ಮುಂದುವರಿಯುತ್ತಿರುವ ಮುದಾರಬ, ಮುಷಾರಕ, ಮುರಾಬಹ, ಇಜಾದಗಳಲ್ಲದೆ ಹೊಸ ರೀತಿಗಳನ್ನು ಇಸ್ಲಾಮಿ ವೃತ್ತವು ಬೆಳೆಸಿ ತರಬೇಕಾಗಿದೆ. ಹಾಗಿದ್ದರೂ ಇವೆಲ್ಲವೂ ಇಸ್ಲಾಮಿ ವಿಧಿವಿಧಾನದಂತಾಗಿರಬೇಕು ಎಂಬ ವಿಚಾರ ನಿಸ್ಸಂದೇಹವಾಗಿದೆ. ಈಗಿರುವುದರಲ್ಲಿ ಕೆಲವು ಇಸ್ಲಾಮಿಗಿಂತ ಮೊದಲು ರೂಢಿಯಲ್ಲಿರುವುದಾಗಿದೆ. ಇದೇ ಆಧಾರದಲ್ಲಿ ಶರೀಅತ್‌ನ ವಿದ್ಯಮಾನದಂತೆ ಹೊಸ ರೀತಿಯನ್ನು ಕಂಡು ಹುಡುಕಬೇಕಾಗಿದೆ.

ಹೊಸ ರೀತಿಗಳನ್ನು ಅಭಿವೃದ್ಧಿ ಪಡಿಸಿದಾಗ ಮತ್ತು ಶರೀಅತ್ತು ಅದಕ್ಕೆ ವಿಶ್ಲೇಷಿಸುವಾಗ ಹಿಂಬಾಗಿಲುಗಳ ಮೂಲಕ ಬಡ್ಡಿ ಒಳಪ್ರವೇಶಿಸದಂತೆ ಎಚ್ಚರ ವಹಿಸಬೇಕಾಗಿದೆ. ಸಾಲ ಪತ್ರಗಳು ಇದರೊಂದಿಗೆ ಸೇರಿಸಿ ಚರ್ಚಿಸಬೇಕಾದ ವಿಚಾರವಾಗಿದೆ. ಮಲೇಶ್ಯನ್ ಸರಕಾರ ಹತ್ತು ವರ್ಷಗಳಿಂದ ಇಸ್ಲಾಮಿಕ್ ಬಾಂಡುಗಳನ್ನು ಮಾರುಕಟ್ಟೆಗೆ ಇಳಿಸಿದೆ. ಗಲ್ಫ್ ಸರಕಾರಗಳಿಗೆ ಹಸ್ತಾಂತರ ಮಾಡಲು ಅಸಾಧ್ಯವಾಗಿರುವ ಮತ್ತು ಸಂಪೂರ್ಣ ಬೆಳವಣಿಗೆಯಾಗುವವರೆಗೆ ವಾಣಿಜ್ಯ ಬ್ಯಾಂಕುಗಳಲ್ಲಿ ಕಾದಿರಿಸಬಹುದಾದ ಸಾಲಪತ್ರಗಳನ್ನು ಅದು ಬಿಡುಗಡೆಗೊಳಿಸಿದೆ. ಇಸ್ಲಾಮ್ ಸಾಲಾಧಾರಿತ ಸಾಲಪತ್ರಗಳ ಮಾರಾಟವನ್ನು ರುಜುಗೊಳಿಸುವುದಿಲ್ಲ ಎಂಬುದೇ ಹೀಗೆ ಮಾಡುವುದಕ್ಕೆ ಕಾರಣವಾಗಿದೆ.

ಬ್ಯಾಂಕ್ ಆಸ್ತಿಯ ದ್ರುವೀಕರಣವನ್ನು (ಸುಲಭವಾಗಿ ಹಣವಾಗಿ ಮಾಡುವ ಸ್ಥಿತಿ) ನಿಯಂತ್ರಿಸುವುದು ಇದರ ಪ್ರಮುಖವಾದ ದೋಷವಾಗಿದೆ. ಸಾರ್ವಜನಿಕ ಅಗತ್ಯಗಳಿಗೆ ಹಣ ಹುಡುಕುವ ಸಾಧ್ಯತೆಗಳನ್ನು ಕೂಡ ಇದು ನಿರಾಕರಿಸುತ್ತದೆ.

ಬಹ್ರೈನ್ ಇದಕ್ಕೊಂದು ಪರಿಹಾರವನ್ನು Sukuk Alsalam ಎಂಬ ಸಾಲ ಪತ್ರಗಳಿಂದ ಕಂಡುಕೊಂಡಿತು. ಇದು ನಿರೀಕ್ಷಿತ ವರಮಾನವನ್ನು ಲೆಕ್ಕಮಾಡಿ ನಿಶ್ಚಿತ ಲಾಭದ ಭರವಸೆಯನ್ನು ನೀಡುತ್ತಿದೆ. ಇದಕ್ಕೆ ಜನರ ಪ್ರತಿಕ್ರಿಯೆ ನಿರೀಕ್ಷೆಗೂ ಮೀರಿ ಸಿಕ್ಕಿದೆ. ಕುವೈತ್ ಫೈನಾನ್ಸ್ ಹೌಸ್, ದುಬೈ ಇಸ್ಲಾಮಿಕ್ ಬ್ಯಾಂಕ್, ಬಹ್ರೈನ್ ಇಸ್ಲಾಮಿಕ್ ಬ್ಯಾಂಕ್ ಈ ಮೂರು ಬ್ಯಾಂಕುಗಳು ಪ್ರಮುಖವಾದ ಈ ಸಾಲಪತ್ರದ ಮಾರಾಟಕ್ಕಾಗಿ ಲಿಕ್ವಿಡಿಟಿ ಮ್ಯಾನೇಜ್‌ಮೆಂಟ್ ಸ್ಥಾಪಿಸುವುದಕ್ಕಾಗಿ ಪ್ರೇರಣೆಯಾಗಿದೆ.

ಜಾಗತೀಕರಣ ಬರೇ ಸ್ಪರ್ಧೆಯನ್ನು ಮಾತ್ರವಲ್ಲ ಸಹಕಾರದ ಬಾಗಿಲನ್ನು ಕೂಡಾ ತೆರೆದುಕೊಟ್ಟಿದೆ. ಮಲೇಶ್ಯಾ ಮತ್ತು ಬಹ್ರೈನ್ ನಡುವೆಯಿರುವ ಸಹಕಾರ ಇದನ್ನೇ ಸೂಚಿಸುತ್ತಿದೆ. ಮಲೇಶ್ಯಾದ May Bank ಅದರ ಖಾತೆಯನ್ನು ಬಹ್ರೈನ್‌ನಲ್ಲಿ ಪ್ರಾರಂಭಿಸಿದೆ. ಇದು ಬಡ್ಡಿಯಾಧಾರಿತ ಬ್ಯಾಂಕಾಗಿದ್ದರೂ ಇಸ್ಲಾಮಿಕ್ ಬ್ಯಾಂಕಿಂಗ್ ಸೇವೆಯನ್ನು ಕೂಡಾ ಒದಗಿಸುತ್ತಿದೆ. ಲೆಬಾನ್, ಮನಾಮ ಇಸ್ಲಾಮಿಕ್ ಬ್ಯಾಂಕುಗಳು ಅಂತಾರಾಷ್ಟ್ರೀಯ ಇಸ್ಲಾಮಿಕ್ ಫೈನಾನ್ಸ್ ಮಾರ್ಕೆಟನ್ನು ಜಾರಿಗೆ ತರುವುದಕ್ಕೆ ಜತೆಗೂಡಿ ಪ್ರಯತ್ನವನ್ನು ಆರಂಭಿಸಿವೆ.

ಚದುರಿಕೊಂಡಿರುವ ಸಣ್ಣ ಪ್ರಮಾಣದ ಹಣಕಾಸು ಮಾರುಕಟ್ಟೆಯ ಜಾಗತೀಕರಣ ನಿಯಂತ್ರಣ ಮುಂತಾದ ವಿಚಾರಕ್ಕೂ ಏಕೀಕರಣಕ್ಕೂ ನೆರವಾಗಿದೆ. ಇಸ್ಲಾಮಿಕ್ ಬ್ಯಾಂಕುಗಳಿಗೆ ಬ್ಯಾಂಕ್ ಆಫ್ ಇಂಟರ್‌ನೇಶನಲ್ಸ್ (BIS) ನಂತಿರುವ ಅಂತಾರಾಷ್ಟ್ರೀಯ ಸಂಸ್ಥೆಗಳ ಅಂಗೀಕಾರ ದೊರಕಲು ಜಾಗತೀಕರಣದಿಂದಾಗಿ ನೆರವಾಗಿದೆ. ಉಳಿದಿರುವ ಇಸ್ಲಾಮಿಕ್ ಬ್ಯಾಂಕುಗಳಿಗೆ ಕೂಡಾ ನಿಷ್ಕರ್ಷೆ ಮಾಡಿರುವುದಕ್ಕಿಂತ ಹೆಚ್ಚಿನ ಬಂಡವಾಳ ಸಾಮರ್ಥ್ಯಗಳಿವೆ. ಬಹ್ರೈನ್‌ನ ಅಲ್ ಬರಕ ಇಸ್ಲಾಮಿಕ್ ಬ್ಯಾಂಕ್‌ಗೆ ಶೇ 22, ಜೋರ್ಡಾನ್ ಇಸ್ಲಾಮಿಕ್ ಬ್ಯಾಂಕ್‌ಗೆ ಶೇ. 16ರಷ್ಟು ಮೂಲ ಬಂಡವಾಳವಿದೆ. BIS ನಿರ್ಣಯಿಸಿರುವುದು ಶೇ. 8 ಮೂಲ ಬಂಡವಾಳವನ್ನಾಗಿದೆ. ಪರಂಪರಾಗತ ಬ್ಯಾಂಕುಗಳಷ್ಟು ಮೂಲ ಬಂಡವಾಳ ಇಸ್ಲಾಮಿಕ್ ಬ್ಯಾಂಕುಗಳಿಗೆ ಅಗತ್ಯವಿಲ್ಲ.

# ವಿವಾಹ ಸಮಾರಂಭಗಳೆಂದರೆ ಹೀಗೇನಾ?



ವಿವಾಹ ಸಮಾರಂಭಗಳು ಇಂದು ಮಲಿನಗೊಳ್ಳುತ್ತಿವೆ. ಮದುವೆಯ ಕುರಿತು ಇರುವ ಸುಂದರ ಕಲ್ಪನೆಯನ್ನು ಇಂದು ನಡೆಯುವ ಮದುವೆ ಸಮಾರಂಭಗಳು ಕಲುಷಿತಗೊಳಿಸುತ್ತಿವೆ. ಮುಸ್ಲಿಮ್ ಮೊಹಲ್ಲಾಗಳಲ್ಲಿ ನಡೆಯುವ ಕೆಲವು ಅದ್ದೂರಿ ಮದುವೆಗಳನ್ನು ಇದಕ್ಕೆ ಉದಾಹರಿಸಬಹುದಾಗಿದೆ. ಇಸ್ಲಾಮಿ ಸಂಸ್ಕೃತಿಯನ್ನು ವಿವಾಹಗಳು ಇಂದು ಮರೆತುಬಿಟ್ಟಿವೆ ಎಂದರೂ ತಪ್ಪಾಗಲಾರದು.

ಆಗರ್ಭ ಶ್ರೀಮಂತರ ಅದ್ದೂರಿ ಮದುವೆಗಳನ್ನು ನೋಡಿಯೂ ತುಟಿ ಪಿಟಿಕ್ಕೆನ್ನದ ಧಾರ್ಮಿಕ ನೇತಾರರು ತಮ್ಮ ಮೌನ ಸಮ್ಮತಿಯೊಂದಿಗೆ ಈ ವಿವಾಹದಲ್ಲಿನ ಆಡಂಬರವನ್ನು ಸಮಾಜದಲ್ಲಿ ಬೇರೂರುವಂತೆ ಮಾಡಿದ್ದಾರೆ. ಹಣ, ಅಂತಸ್ತು ಇಲ್ಲಿ ಮುಖ್ಯವಾಗಿವೆಯೇ ಹೊರತು ಧಾರ್ಮಿಕವಾಗಿ ಯಾವುದೇ ಮಾನದಂಡವಿರುವುದಿಲ್ಲ. ಬೆರಗಾಗುವಂತಹ ಆಮಂತ್ರಣ ಪತ್ರಿಕೆಯಿಂದ ಮದುವೆಯ ಒಡ್ಡೋಲಗ ಪ್ರಾರಂಭವಾಗುತ್ತದೆ. ಜೊತೆಗೆ ಲಕ್ಷಗಟ್ಟಲೆ ವರದಕ್ಷಿಣೆ, ಚಿನ್ನದ ಬೆಲೆ ಗಗನಕ್ಕೇರುತ್ತಿದ್ದರೂ ವರದಕ್ಷಿಣೆಯ ಪವನ್‌ನ ಸಂಖ್ಯೆಯಲ್ಲಿ ಯಾವುದೇ ಕಡಿತವಾಗುತ್ತಿಲ್ಲ. ಅದು ಬಿಟ್ಟು ವರದಕ್ಷಿಣೆಯು ಗಾತ್ರದಲ್ಲಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಇದರ ಭಾರವನ್ನು ಹೆಣ್ಣು ಹೆತ್ತವರು ಹೊರಬೇಕಾಗಿದೆ. ಆದ್ದರಿಂದಲೇ ಸಮುದಾಯದಲ್ಲಿ ನಡೆಯುವ ಮದುವೆಗಳು ಚಿಂತನಾರ್ಹವಾಗಿದೆ.

ಮದುವೆಯ ಮುನ್ನಾ ದಿನ ನಡೆಯುವಂತಹ ಗ್ರಾಂಡ್ ಪಾರ್ಟಿಗಳು ನಂತರ ಮದುವೆಯ ದಿನ ಸಾವಿರಾರು ಜನರನ್ನು ಸೇರಿಸಿ ನಡೆಸುವ ಔತಣ ಕೂಟಗಳು ಹುಬ್ಬೇರಿಸುವಂತೆ ಮಾಡುತ್ತವೆ. ಒಂದು ಹಾಲ್‌ನಲ್ಲಿ ನಡೆದ ಮದುವೆಯಲ್ಲಿ ಹೆಂಗಸರ ಕಿರುಚಾಟ ಕೇಳಿ ಗಲಿಬಿಲಿಗೊಂಡಿದ್ದೆ. ಅವರ ಕಿರುಚಾಟ ಆಕಾಶವೇ ಕಳಚಿ ಬಿದ್ದಂತಿತ್ತು. ಈ ಕುರಿತು ತಿರುಗಿ ನೋಡಿದಾಗ ವಧುವಿನ ಜೊತೆ ಹಾರ ಬದಲಾಯಿಸಲು ತನ್ನ ಗೆಳೆಯರೊಂದಿಗೆ ಮದುಮಗ ಬಾಲ್ಕನಿಯೇರಿದ್ದ. ಅವನನ್ನು ಹುಡುಗಿಯರು ಛೇಡಿಸುವ ಚೀರಾಟವಾಗಿತ್ತು ಆ ಸದ್ದು. ಹೀಗೆ ಜನರು ಕಕ್ಕಾಬಿಕ್ಕಿಯಾಗುವಂತೆ ನಡೆಸುವ ಔತಣ ಕೂಟಗಳು ಮದುವೆಯ ಪಾವಿತ್ರ್ಯವನ್ನೇ ಕೆಡಿಸುತ್ತಿವೆ ಎನ್ನಬಹುದು. ಇನ್ನು ಶಾದಿಮಹಲ್‌ಗಳನ್ನು ಬಿಟ್ಟು ಮನೆಗಳಲ್ಲಿ ಮದುವೆಯಾದರೆ ಮದುಮಗನೊಂದಿಗೆ ನೂರು ನೂರೈವತ್ತು ಮಂದಿ ಯುವಕರು ಮದುಮಗಳ ಮನೆಗೆ ಹೋಗುವುದಿದೆ. ನೂರೈವತ್ತು ಹೆಂಗಸರೂ ವರನ ಮನೆಯಿಂದ ವಧುವಿನ ಮನೆಗೆ ಟ್ರಿಪ್ ಹೊಡೆಯುವುದು ಸಾಮಾನ್ಯವಾಗಿದೆ. ಆನಂತರ ವರನ ಕಡೆಯಿಂದ ಮದುವೆ ಕಳೆದು 2 ದಿನವಾಗುವಷ್ಟರಲ್ಲಿ ನೂರೈವತ್ತು ಹೆಂಗಸರನ್ನು ಹೊತ್ತುಕೊಂಡು ವಧುವಿನ ಮನೆಗೆ ಪಯಣ. ಇದು ನಮ್ಮ ಸಮಾಜದಲ್ಲಿ ನಡೆಯುವ ಮದುವೆ ಸಮಾರಂಭಗಳ ಸಣ್ಣ ಚಿತ್ರಣವಷ್ಟೇ.

ವಧುವಿನ ಮನೆಗೆ ಹೋದ ವರನನ್ನು ರೂಮಲ್ಲಿ ಬಂಧಿಯಾಗಿಸಿ ಆತನಿಂದ ಹಣ ಕಕ್ಕಿಸಿ ಐಸ್‌ಕ್ರೀಮ್ ತಿಂದು ಚೆಲ್ಲಾಟವಾಡುತ್ತಾ ಕೀಟಲೆ ಕೊಡುವ ಹುಡುಗಿಯರೂ ಈ ಸಮಾಜದಲ್ಲಿದ್ದಾರೆ. ಇದೊಂದು ಫ್ಯಾಶನ್ ಆಗಿಬಿಟ್ಟಿದೆ.

ಇನ್ನು ಸಿಗರೇಟು ಸೇದುತ್ತಲೋ ಗುಟ್ಕಾ ಜಗಿಯುತ್ತಲೋ ರೌಡಿ ಪಡೆಗಳಂತೆ ವರನ ಬೆಂಗಾವಲಾಗಿ ಬರುವ ಯುವಕರು ವಧುವಿನ ಮನೆಗೆ ಹೋಗಿ ತಮಾಷೆಯ ಹೆಸರಲ್ಲಿ ನಡೆಸುವ ರೌದ್ರಾವತಾರಗಳೂ ಈ ಸಮಾಜದಲ್ಲಿದೆ. ಅಲ್ಲದೆ, ಗಂಡು ಹೆಣ್ಣೆಂಬ ಭೇದ ಭಾವವೂ ಕೆಲವೊಂದು ಮದುವೆಗಳಲ್ಲಿ ಕಂಡು ಬರುವುದಿಲ್ಲ. ಸಂಪೂರ್ಣ ಪಾಶ್ಚಾತ್ಯ ಶೈಲಿಯನ್ನು ಅನುಕರಿಸುವ ವಿವಾಹಗಳಾಗಿ ಅದು ಮಾರ್ಪಡುತ್ತಿದೆ.

ಹೀಗೆ ಧಾರ್ಮಿಕವಾದ ಎಲ್ಲ ಮೌಲ್ಯಗಳನ್ನು ಅವಹೇಳಿಸುವ ಈ ಅನಾಗರಿಕತೆಯ ವಿರುದ್ಧ ಸಮುದಾಯದ ಪಂಡಿತ ವರ್ಗವು ಜಾಗೃತರಾಗಬೇಕಾಗಿದೆ. ವಿವಾಹ ಸಮಾರಂಭಗಳನ್ನು ಮಾಲಿನ್ಯದಿಂದ ಮುಕ್ತಗೊಳಿಸುವ ಅನಿವಾರ್ಯತೆಯಿದೆ. ಇಸ್ಲಾಮಿನ ನೀತಿ ಸಂಹಿತೆಯನ್ನು ನಮ್ಮ ಮದುವೆಗಳಲ್ಲಿ ಅಳವಡಿಸುವ ಅಗತ್ಯವಿದೆ. ಒಂದೆಡೆ ವರದಕ್ಷಿಣೆಯ ಆರ್ಭಟ, ಇನ್ನೊಂದೆಡೆ ಅದ್ದೂರಿ ಮದುವೆಗಳ ಔತಣ ಕೂಟಗಳ ಅಟ್ಟಹಾಸ, ಮತ್ತೊಂದೆಡೆ ಹೆಣ್ಣು ಗಂಡೆಂಬ ಭೇದವಿಲ್ಲದೆ ನಲಿದು ಬೆರೆಯುವ ಪ್ರದರ್ಶನ ಕೂಟ. ಇದನ್ನು ಯಾವ ಧರ್ಮಗ್ರಂಥಗಳು ಅಂಗೀಕರಿಸುತ್ತವೆ? ಇಂತಹ ಮದುವೆಗಳ ಕುರಿತು ಸಮಾಜ ಜವಾಬ್ದಾರಿಯುತವಾಗಿ ವರ್ತಿಸಬೇಕಾಗಿದೆ.

**ಮ ಹಿ ಳಾ ವೇ ದಿ ಕೆ**

ಸವಿಯ ಎಸ್.

# ಮಕ್ಕಳಿಗೆ ಪವಿತ್ರ ಕುರ್‌ಆನ್ ಕಲಿಸಿರಿ

## ಕುಟುಂಬ ಒಂದು ಅಧ್ಯಯನ-33

ಮುಶ್ತಾಕ್ ತಿಜಾರವಿ

**ಮೂ**ರನೆಯ ಮುಖ್ಯ ವಿಚಾರವೇನೆಂದರೆ ಮಕ್ಕಳಲ್ಲಿ ಆತ್ಮವಿಶ್ವಾಸವು ಹುಟ್ಟುವಂತೆ ಮಾಡುವುದು. ಒಂದು ವೇಳೆ ಮಗು ತನ್ನ ಮೇಲೆ ಭರವಸೆಯನ್ನು ಕಳಕೊಳ್ಳುವಂತಾದರೆ ಅದರ ಜೀವನದಲ್ಲಿ ಅದಕ್ಕಿಂತ ದೊಡ್ಡ ದುರ್ಘಟನೆ ಬೇರೆ ಇರಲಾರದು. ಆತ್ಮವಿಶ್ವಾಸವು ಈ ಜೀವನದಲ್ಲಿ ಭಾರೀ ದೊಡ್ಡ ಸಾಧಕ ಅಸ್ತ್ರವಾಗಿದೆ. ಆತ್ಮವಿಶ್ವಾಸವಿದ್ದರೆ ಮಾತ್ರ ವ್ಯಕ್ತಿಯು ಜೀವನದ ಪ್ರತಿ ಕ್ಷೇತ್ರದಲ್ಲಿಯೂ ಯಶಸ್ವಿಯಾಗುತ್ತಾನೆ. ಇಂತಹ ವ್ಯಕ್ತಿ ಅನೇಕ ಸಮಸ್ಯೆಗಳನ್ನು ಆತ್ಮವಿಶ್ವಾಸದ ಬಲದಿಂದಲೇ ಪರಿಹರಿಸಿಕೊಳ್ಳುತ್ತಾನೆ. ಅದೇ ವೇಳೆ ತನ್ನಲ್ಲಿ ಭರವಸೆ ಕಳಕೊಂಡಿರುವ ವ್ಯಕ್ತಿ ಮುಂದೆ ಬರಲಾರನು.

ನಾಲ್ಕನೆಯ ಮುಖ್ಯ ವಿಚಾರವೆಂದರೆ ಮಕ್ಕಳಲ್ಲಿ ನಾಯಕತ್ವದ ಸಾಮರ್ಥ್ಯವನ್ನು ಉಂಟು ಮಾಡಲು ಶ್ರಮಿಸುವುದು. ಅವರಲ್ಲಿ ನಿರ್ಧರಿಸುವ ಶಕ್ತಿ ಸೃಷ್ಟಿಯಾಗುವುದು. ಅವನು ಸರಿಯಾದ ಪರಿಣಾಮವನ್ನು ಪಡೆಯುವಂತಾಗುವುದು. ತನ್ನ ಸಾಮರ್ಥ್ಯವನ್ನು ಸಂಪೂರ್ಣವಾಗಿ ದುಡಿಸಿಕೊಳ್ಳುವಂತಾಗುವುದು. ಈ ವಿಚಾರವನ್ನು ಮಕ್ಕಳಲ್ಲಿ ಬೆಳೆಸುವುದಕ್ಕೆ ಪ್ರಯತ್ನಿಸಬೇಕಾಗಿದೆ. ಪ್ರವಾದಿ ಇಬ್ರಾಹೀಮರು(ಅ) ತನ್ನ ಸಂತಾನದಲ್ಲಿ ದೇವಭಯವಿರಿಸುವವರ ನಾಯಕತ್ವ ವಹಿಸುವವನ ಸಮುದಾಯವನ್ನು ಎಬ್ಬಿಸು ಎಂದು ಅಲ್ಲಾಹನಲ್ಲಿ ಪ್ರಾರ್ಥಿಸಿದ್ದರು.

**ಶುದ್ಧ ಆಹಾರದ ಮಹತ್ವ:**

ಮಕ್ಕಳ ತರಬೇತಿಯಲ್ಲಿ ಶುದ್ಧ ಆಹಾರ ಸಂಪಾದಿಸುವ ಅಗತ್ಯವನ್ನು ಮನವರಿಕೆ ಮಾಡಿಕೊಡಬೇಕು. ಅದರಂತೆ ತಮ್ಮ ಮಕ್ಕಳ ಪೋಷಣೆಗೆ ಶುದ್ಧ, ಪ್ರಾಮಾಣಿಕವಾದ ರೀತಿಯಿಂದ ಸಂಪಾದನೆಯನ್ನು ಬಳಸಬೇಕಾಗಿದೆ. ಶುದ್ಧ ಆಹಾರದಿಂದ (ನಿಷಿದ್ಧ ಮೂಲದಿಂದ ಸಂಪಾದಿಸದೆ) ರೂಪುಗೊಳ್ಳುವ ಶರೀರ ಒಳಿತು, ಸಂಭಾವಿತ, ಆತ್ಮವಿಶ್ವಾಸ ಮುಂತಾದವುಗಳಿಂದ ಸದ್ಗುಣಗಳಿಂದ ಭರಿತವಾಗಿರುತ್ತವೆ. ನಿಷಿದ್ಧ ಮೂಲದಿಂದ ಬೆಳೆಸುವ ಶರೀರದಲ್ಲಿ ಈ ಗುಣಗಳು ಬೆಳವಣಿಗೆಯಾಗುವುದು ತ್ರಾಸದಾಯಕವಾಗಿದೆ. ಉಪಯುಕ್ತ ಮತ್ತು ಪ್ರಾಥಮಿಕವಾದ ಕೆಲವು ವಿಚಾರಗಳನ್ನು ಗಮನಿಸುವುದರಿಂದ ಮಕ್ಕಳಲ್ಲಿ ಒಳ್ಳೆಯ ಮಾತನ್ನು ಸ್ವೀಕರಿಸುವ ಆತ್ಮವಿಶ್ವಾಸ, ಧೈರ್ಯ, ಪ್ರಾಮಾಣಿಕತೆ ಇತ್ಯಾದಿ ಸದ್ಗುಣಗಳು ಬೆಳೆದು ಬರುತ್ತವೆ. ತರಬೇತಿಯ ವಿಚಾರದಲ್ಲಿ ಶುದ್ಧ ಆಹಾರವು ಬಹಳ ಮಹತ್ವದಾಯಕವಾಗಿದೆ. ತರಬೇತಿಯ ಕ್ಷೇತ್ರ ತುಂಬ ವಿಶಾಲವಾದುದು. ಶೈಕ್ಷಣಿಕ, ನೈತಿಕ, ಕಲಾತ್ಮಕ, ತಾಂತ್ರಿಕ, ಧಾರ್ಮಿಕ, ರಾಜಕೀಯ ಎಲ್ಲ ಪ್ರಕಾರದ ತರಬೇತಿ ಮಿಶ್ರಿತವಾಗಿರಬೇಕು. ಈ ಎಲ್ಲ ಕ್ಷೇತ್ರದ ತರಬೇತಿಯನ್ನು ತಂದೆ-ತಾಯಿ ಮಾಡಬಹುದು. ಅದರಲ್ಲೂ ಧಾರ್ಮಿಕ, ಮತ್ತು ನೈತಿಕ ತರಬೇತಿ ಬಹಳ ಪ್ರಮುಖ ವಿಚಾರವಾಗಿದೆ. ಇದರಿಂದಲೇ ಯಾವುದೇ ವ್ಯಕ್ತಿ ಉತ್ತಮ ವ್ಯಕ್ತಿಯಾಗುತ್ತಾನೆ.

ಪ್ರವಾದಿವರ್ಯರು(ಸ) ಹೇಳಿದ್ದಾರೆ, "ತಂದೆ ಮಕ್ಕಳಿಗೆ ನೀಡುವ ಅತ್ಯುತ್ತಮ ಕೊಡುಗೆಯೆಂದರೆ ಶಿಕ್ಷಣವಾಗಿದೆ." (ಮಿಶ್ಕಾತ್)

"ಓ ಸತ್ಯವಿಶ್ವಾಸಿಗಳೇ ನಿಮ್ಮನ್ನು ಮತ್ತು ನಿಮ್ಮ ಸಂತಾನಗಳನ್ನು ನರಕದಿಂದ ರಕ್ಷಿಸಿರಿ." (66:6)

ಒಂದು ಹದೀಸ್ ಹೀಗೂ ಇದೆ. "ವ್ಯಕ್ತಿಯು ತನ್ನ ಮನೆಯವರ ಹೊಣೆಗಾರನಾಗಿದ್ದಾನೆ. ಅವನಲ್ಲಿ ಅವರ ಕುರಿತು ಪ್ರಶ್ನಿಸಲಾಗುವುದು." (ಬುಖಾರಿ, ಮುಸ್ಲಿಮ್)

ಪ್ರವಾದಿವರ್ಯರ(ಸ) ಶಿಕ್ಷಣದಂತೆ ಮಕ್ಕಳಿಗೆ ಮೂಲಭೂತ ವಿಚಾರಗಳನ್ನು ಇತರೆಲ್ಲ ವಿಚಾರಕ್ಕಿಂತ ಮೊದಲು ಕಲಿಸಬೇಕಾಗಿದೆ. ಅಂದರೆ ಏಕದೇವತ್ವ (ತೌಹೀದ್), ಪ್ರವಾದಿತ್ವ (ರಿಸಾಲತ್), ಆಖಿರತ್(ಪರಲೋಕ) ಇವುಗಳ ವಿಚಾರವು ಮಕ್ಕಳಿಗೆ ಆರಂಭಿಕ ಶಿಕ್ಷಣವಾಗಿ ದೊರಕಬೇಕಾಗಿದೆ. ಪವಿತ್ರ ಕುರ್‌ಆನ್, ಸ್ವರ್ಗ-ನರಕಗಳ ಕುರಿತು ಮಕ್ಕಳಿಗೆ ಕಲಿಸಿರಿ.

## ಅಹಿಂಸೆ ಆಚರಿಸುವದೆಂತು?

ಅಹಿಂಸೆ
ಆಚರಿಸುವದೆಂತು?
ಹೇಳಿ
ಕೊಡಿ ನನಗೆ?

ಬಾಯಿ ತೆರೆದರೂ
ಮುಚ್ಚಿದರೂ
ಉಸಿರೆಳೆದರೂ
ಬಿಟ್ಟರೂ
ಕೋಟ್ಯಾನು
ಕೋಟಿ
ಸೂಕ್ಷ್ಮಾಣು
ಕೊಲ್ಲುವ
ಮಾನವ!

ಜೋಳ
ಗೋಧಿ
ಅಕ್ಕಿ
ರಾಗಿ
ರಾಶಿ
ಮಾಡುವೆನೆಂದರೂ
ಕೋಟ್ಯಾನು ಕೋಟಿ
ಸಸಿಗಳ
ಜೀವ ಅಪಹರಿಸುವವ

ಬಟ್ಟಲು
ಮೊಸರು
ತಿನ್ನ ಬೇಕೆಂದರೂ
ಅಗಣಿತ
ಜೀವಗಳು
ಸ್ವಾಹಾ!

ಹೆಜ್ಜೆ
ಎತ್ತಿಟ್ಟರೂ
ಕೋಟಿ ಕೋಟಿ
ಜೀವಿಗಳ
ಕೊಲ್ಲುವದು
ಗ್ಯಾರಂಟಿ!

ಹಾಗಾದರೆ
ಅಹಿಂಸೆ
ಆಚರಿಸುವದೆಂತು?
ಹೇಳಿ
ಕೊಡಿ
ನನಗೆ?

ಡಾ। ಅಮೀರುದ್ದೀನ್. ಕಾಝಿ

# ಬಾಲಪಂಕ್ತಿ



✍ ಜಿ.ಎಮ್.



## ಬೇಟೆಗಾರನ ಕೋವಿ

ಹಿಂದಿನ ಕಾಲದಲ್ಲಿ ಅಂಬು ಎಂಬೋರ್ವ ಬೇಟೆಗಾರನಿದ್ದನು. ವಿನಾ ಕಾರಣ ಆತ ಮೃಗಗಳನ್ನು ಪಕ್ಷಿಗಳನ್ನು ಬೇಟೆಯಾಡಿ ಕೊಲ್ಲುತ್ತಿದ್ದ. ನಂತರ ಅದು ನೋವಿನಿಂದ ನರಳುವುದನ್ನು ನೋಡಿ ಸಂತೋಷಪಡುತ್ತಿದ್ದನು. ಇದು ಅವನಿಗೊಂದು ಮನರಂಜನೆಯಾಗಿತ್ತು.

ಅಂಬುವಿಗೆ ಶಂಬು ಎಂಬೋರ್ವ ಮಿತ್ರನಿದ್ದನು. ಶಂಬುವಿಗೆ ತೋರಿಸಲು ಅಂಬು ಒಮ್ಮೆ ಕೋವಿಯನ್ನೆತ್ತಿ ಹೊರಟನು. ಕಾಡಿಗೆ ಹೋಗಿ ಸುಮ್ಮನೆ ಕೆಲವು ಮೃಗಗಳನ್ನು ಬೇಟೆಯಾಡಿ ಕೊಂದನು. ನಂತರ ಶಂಬುವಿನ ಕೈಯಲ್ಲಿದ್ದ ಕವಣೆಯನ್ನು (ಕಾಗೆಯನ್ನು ಓಡಿಸುವ ಬಿಲ್ಲು) ನೋಡಿ ಹಿಯಾಳಿಸುತ್ತಿದ್ದನು.

“ಯಾವುದಕ್ಕೂ ಬಾರದ ಆ ಕವಣೆಯಿಂದ ಏನು ಪ್ರಯೋಜನ. ಅದನ್ನು ಅಲ್ಲಿ ಎಸೆದು ನನ್ನ ಬಳಿಯಿರುವಂತಹ ಕೋವಿ ತೆಗೆದು ವೀರ ಪರಾಕ್ರಮಿಯಂತೆ ನಡೆಯಬಾರದೇ” ಎಂದು ಮೂದಲಿಸುತ್ತಿದ್ದನು.

ಶಂಬು ಆತನೊಡನೆ, “ನೋಡು ಅಂಬು ಒಂದಲ್ಲ ಒಂದು ದಿನ ಈ ಕವಣೆ ಪ್ರಯೋಜನಕ್ಕೆ ಬರುವುದು ಖಂಡಿತ” ಎಂದನು.

ಹೀಗಿರುವಾಗ ಒಮ್ಮೆ ಈರ್ವರೂ ಕಾಡಿಗೆ ತೆರಳಿದರು. ಅರಣ್ಯದ ಮಧ್ಯ ಭಾಗ ಮುಟ್ಟಿದಾಗ ಒಂದು ದೃಶ್ಯಕಂಡು ಅಂಬುಜ ಬೆವರಿದ. ಒಂದು ಚಿರತೆ ಆತನನ್ನು ನೋಡುತ್ತಿರುವುದನ್ನು ಕಂಡು ಹೌಹಾರಿದ. ಚಿರತೆ ಅಂಬುವಿನೆಡೆಗೆ ಧಾವಿಸಿತು. ತಕ್ಷಣ ಅಂಬು ಮತ್ತು ಶಂಬು ಸಮೀಪದಲ್ಲಿದ್ದ ಮರವನ್ನು ಹತ್ತಿ ಬಚಾವಾದರು. ಚಿರತೆ ಮರದಡಿಯಲ್ಲಿ ಬಂದು ನಿಂತಿತು. ಅದು ಕದಲಲೇ ಇಲ್ಲ. ಇಬ್ಬರೂ ನಡುಗಿದರು. ಮೆಲ್ಲನೆ ಶಂಬು “ಅಂಬುಜನೊಡನೆ ನೀನೋರ್ವ ಉತ್ತಮ ಬೇಟೆಗಾರ ನಲ್ಲವೇ? ಆ ಕೋವಿಯಿಂದ ಗುಂಡು ಹಾರಿಸು” ಎಂದು ಹೇಳಿದ. ಚಿರತೆ ನೋಡಿ ಕಂಗಾಲಾದ ಅಂಬುವಿನ ಕೈ ಹೆದರಿ ನಡುಗ ತೊಡಗಿ ಕೋವಿಯೆತ್ತಲೂ ಪಾಪ ಆತ ಅಸಮರ್ಥನಾದ.

ಅಷ್ಟಾಗುವಾಗ ಚಿರತೆ ಮೇಲೆ ಹಾರ ತೊಡಗಿತು. ಶಂಬು ಮೆಲ್ಲನೆ ತನ್ನಲ್ಲಿದ್ದ ಕವಣೆಯನ್ನೆತ್ತಿ ಚಿರತೆಯ ಕಣ್ಣಿಗೆ ಗುರಿಯಿಟ್ಟು ಹೊಡೆದ, ಗುರಿ ತಪ್ಪಲಿಲ್ಲ. ನೋವಿನಿಂದ ಚಟಪಡಿಸುತ್ತಾ ಚಿರತೆ ಭಯದಿಂದ ಓಡಿ ಕಾಡಿನಲ್ಲಿ ಮರೆಯಾಯಿತು. ನಂತರ ಅಂಬು ಶಂಬುವಿನ ಮುಖ ನೋಡಲಾಗದೆ ತಲೆತಗ್ಗಿಸಿದ.

ಶಂಬುವಿನಲ್ಲಿದ್ದ ಕವಣೆ ಈಗ ಆತನ ಪ್ರಾಣ ಉಳಿಸಿತ್ತು. ವೀರ ಶೂರ ಪರಾಕ್ರಮಿಯೆಂದು ಅಹಂಕಾರದಿಂದ ನಡೆಯುತ್ತಿದ್ದ ಅಂಬುವಿನ ಅಹಂಕಾರ ಒಮ್ಮೆಗೇ ಇಳಿದಿತ್ತು.

ಮರದಿಂದ ಕೆಳಗಿಳಿದು ಮನೆಯತ್ತ ಮರಳುವಾಗ ಶಂಭು, “ನೋಡು ಅಂಬು, ಪರಾಕ್ರಮ ಎಂದರೆ! ನಿರುಪದ್ರವಿ ಜೀವಿಗಳನ್ನು ಕೊಲ್ಲುವುದಲ್ಲ” ಎಂದನು.

ತನ್ನ ದುರಹಂಕಾರವನ್ನು ನೀಗಿಸಿದ ಶಂಭುವಿಗೆ ಅಂಬು ಕೃತಜ್ಞತೆ ಸಲ್ಲಿಸಿದನು.

## ಜಾಗತಿಕ ರಾಷ್ಟ್ರಗಳ ಪಕ್ಷಿನೋಟ

### 7) ಅರ್ಜೆಂಟಿನಾ

| | |
|---|---|
| ಸರಕಾರಿ ಹೆಸರು | : ಅರ್ಜೆಂಟೈನ್ ರಿಪಬ್ಲಿಕ್ |
| ರಾಜಧಾನಿ | : ಬ್ಯುನಸ್ ಐರಿಸ್ |
| ಒಟ್ಟು ವಿಸ್ತೀರ್ಣ | : 27,66,889 ಚದರ ಕಿಲೋ ಮೀಟರ್ |
| ಅಂದಾಜು ಜನಸಂಖ್ಯೆ | : 3,95,31,000 |
| ಸ್ಥಳ | : ದಕ್ಷಿಣ ಅಮೇರಿಕಾ |
| ಪ್ರಚಲಿತ ಭಾಷೆಗಳು | : ಸ್ಪಾನಿಷ್, ಇಟಾಲಿಯನ್, ಅಮೆರಿಂಡಿಯನ್ |
| ಧರ್ಮಗಳು | : ಪ್ರೊಟೆಸ್ಟೆಂಟ್, ರೊಮನ್ ಕೆಥೊಲಿಕ್ |
| ನಾಣ್ಯ | : ಅರ್ಜೆಂಟೆನಿಯನ್ ಪೆಸೊ |
| ಸಂಘಟನೆಗಳು | : ವಿಶ್ವಸಂಸ್ಥೆ |

ಜಗತ್ತಿನ 8ನೇ ದೊಡ್ಡ ದೇಶ (ವಿಸ್ತೀರ್ಣ)

### 8) ಅರ್ಮೇನಿಯಾ

| | |
|---|---|
| ಸರಕಾರಿ ಹೆಸರು | : ರಿಪಬ್ಲಿಕ್ ಆಫ್ ಅರ್ಮೇನಿಯಾ |
| ರಾಜಧಾನಿ | : ಯೆರೆವಾನ್ |
| ಒಟ್ಟು ವಿಸ್ತೀರ್ಣ | : 29,800 ಚದರ ಕಿಲೋ ಮೀಟರ್ |
| ಅಂದಾಜು ಜನಸಂಖ್ಯೆ | : 30,02,000 |
| ಸ್ಥಳ | : ಯುರೇಶಿಯೊ ದಕ್ಷಿಣ ಕಾಕಸಸ್ ಪ್ರಾಂತ್ಯ |
| ಪ್ರಚಲಿತ ಭಾಷೆಗಳು | : ಅರ್ಮೇನಿಯನ್, ಅಝೆರಿ |
| ಧರ್ಮಗಳು | : ಅರ್ಮೇನಿಯನ್ ಆರ್ಥಡಾಕ್ಸ್ |
| ನಾಣ್ಯ | : ಡ್ರಾಂ |
| ಸಂಘಟನೆಗಳು | : ವಿಶ್ವಸಂಸ್ಥೆ, ಕಾಮನ್ವೆಲ್ತ್ ಆಫ್ ಇಂಡಿಪೆಂಡೆಂಟ್ ಸ್ಟೇಟ್ಸ್ |

ಜಗತ್ತಿನ 141ನೇ ದೊಡ್ಡ ದೇಶ (ವಿಸ್ತೀರ್ಣ)

### 9) ಆಸ್ಟ್ರೇಲಿಯಾ

| | |
|---|---|
| ಸರಕಾರಿ ಹೆಸರು | : ಕಾಮನ್ವೆಲ್ತ್ ಆಫ್ ಆಸ್ಟ್ರೇಲಿಯಾ |
| ರಾಜಧಾನಿ | : ಕ್ಯಾನ್‌ಬೆರ್ರಾ |
| ಒಟ್ಟು ವಿಸ್ತೀರ್ಣ | : 76,92,024 ಚದರ ಕಿಲೋ ಮೀಟರ್ |
| ಅಂದಾಜು ಜನಸಂಖ್ಯೆ | : 2,07,43,000 |
| ಸ್ಥಳ | : ಓಸಿಯಾನಿಯಾ, ಹಿಂದೂ ಮಹಾಸಾಗರ ಮತ್ತು ದಕ್ಷಿಣ ಪೆಸಿಫಿಕ್ ಸಾಗರಗಳ ಮಧ್ಯೆ |
| ಪ್ರಚಲಿತ ಭಾಷೆಗಳು | : ಇಂಗ್ಲಿಷ್, ಇಟಾಲಿಯನ್, ಗ್ರೀಕ್ |
| ಧರ್ಮಗಳು | : ಪ್ರೊಟೆಸ್ಟೆಂಟ್, ರೊಮನ್ ಕೆಥೊಲಿಕ್, ಆರ್ಥಡಾಕ್ಸ್ |
| ನಾಣ್ಯ | : ಆಸ್ಟ್ರೇಲಿಯನ್ ಡಾಲರ್ |
| ಸಂಘಟನೆಗಳು | : ವಿಶ್ವಸಂಸ್ಥೆ, ಏಶಿಯಾ–ಪೆಸಿಫಿಕ್ ಇಕನಾಮಿಕ್ ಕೊ ಓಪರೇಶನ್, ಕಾಮನ್ವೆಲ್ತ್ ಆಫ್ ನೇಶನ್ಸ್, ಆರ್ಗನೈಝೇಶನ್ ಫಾರ್ ಇಕನಾಮಿಕ್ ಕೊ–ಓಪರೇಶನ್ ಆಂಡ್ ಡೆವಲಪ್‌ಮೆಂಟ್ |

ಜಗತ್ತಿನ 6ನೇ ದೊಡ್ಡ ದೇಶ (ವಿಸ್ತೀರ್ಣ)

## ಅರಬಿ ಸುಡೊಕು 69

| | | | | | |
|---|---|---|---|---|---|
| | | ث | ب | | |
| | ح | | | ث | |
| ث | | | | | ب |
| ح | | | | | ث |
| | ث | | | ب | |
| | | ح | ث | | |

ಆಟದ ನಿಯಮ:
ಖಾಲಿ ಜಾಗದಲ್ಲಿ ا ನಿಂದ ح ವರೆಗಿನ ಅರಬಿ ಅಕ್ಷರಗಳನ್ನು ತುಂಬಬೇಕು. ಉದ್ದ ಸಾಲು, ಅಡ್ಡ ಸಾಲು ಹಾಗೂ 2x3 ಜಾಗದ ಚೌಕದಲ್ಲಿ ಯಾವುದೇ ಅಕ್ಷರ ಎರಡು ಬಾರಿ ಬರುವಂತಿಲ್ಲ. ನಿಮ್ಮ ಜಾಣ್ಮೆಗೆ, ತಾಳ್ಮೆಗೆ, ಬುದ್ಧಿವಂತಿಕೆಗೆ ಇಲ್ಲಿದೆ ಚಾಲೆಂಜ್!

ಅರಬಿ ಸುಡೊಕು 68ರ ಉತ್ತರ

| | | | | | |
|---|---|---|---|---|---|
| ح | ب | ج | ت | ا | ث |
| ث | ت | ا | ح | ج | ب |
| ا | ج | ت | ث | ب | ح |
| ب | ث | ح | ج | ت | ا |
| ت | ا | ث | ح | ب | ج |
| ج | ح | ب | ا | ث | ت |

## ನಮಾಝ್

ಮಿಅರಾಜ್‌ಗೆ ಕರೆದು ಪ್ರವಾದಿಗೆ
ದೇವ ನೀಡಿದನೊಂದು ಉಡುಗೊರೆ
ಐವತ್ತರಿಂದ ಐದಾಗಿಸಿ ಬನ್ನಿರೆಂದು
ಮೂಸಾ ಪ್ರವಾದಿವರ್ಯರಲ್ಲಿಟ್ಟರು ಮೊರೆ
ಅದಾಯಿತು ಪ್ರವಾದಿಯ ನಯನಗಳ
ಶೀತಲತೆ, ಇದೇ ನಮಾಝಿನ ಕಥೆ

ನಿರ್ಲಜ್ಜೆಯ ವಿರುದ್ಧ ಹೋರಾಡಲು
ವಿಶ್ವಾಸಿಗೆ ದೊರೆತ ಖಡ್ಗವಿದು
ಅಶ್ಲೀಲತೆ ತುಂಬಿದ ಸಮಾಜದಲಿ
ಸತ್ಯವಿಶ್ವಾಸಿಯ ಭದ್ರ ಕೋಟೆಯಿದು
ಪರಲೋಕದ ಪ್ರಶ್ನೆ ಪತ್ರಿಕೆಯಲಿ
ಬರುವ ಪ್ರಥಮ ಪ್ರಶ್ನೆ ಇದು!

ಅವಿಶ್ವಾಸಿಗೆ ಹೊರೆಯಾಗಿ ಪರಿಣಮಿಸಿದರೆ
ವಿಶ್ವಾಸಿಗೆ ದೇವ ಸಂಭಾಷಣೆಯ
ಸೌಭಾಗ್ಯವಿದು
ವಿಶ್ವಾಸಿ–ಅವಿಶ್ವಾಸಿಯ ಭಿನ್ನತೆ ತಿಳಿಯಲು
ದೇವ ನೀಡಿದ ಏಕಮಾತ್ರ ಮಾಪಕವಿದು.

ಶಫಿ ಸಲಾಂ, ಆದಿಉಡುಪಿ
ಬಹರೈನ್

## ನಿಮಗೆ ತಿಳಿದಿರಲಿ

1. ಯಾವ ದೇಶದಲ್ಲಿ ಒಂದೇ ರಾತ್ರಿ ಲಕ್ಷದಷ್ಟು ಉಲ್ಕೆಗಳು ಬಿದ್ದಿವೆ?
2. ಏಷ್ಯಾ ಖಂಡದ ವಿಸ್ತೀರ್ಣವೆಷ್ಟು?
3. ಗೋಬಿ ಎಂಬ ಮರುಭೂಮಿಗೆ ಸಂಬಂಧಿಸಿದ ರಾಷ್ಟ್ರಗಳು ಯಾವುದು?
4. ಸಮ ಎಂಬುದಕ್ಕೆ = ಎಂಬ ಚಿಹ್ನೆಯನ್ನು ಬಳಸುವುದಕ್ಕೆ ಪ್ರಾರಂಭವಾದ ಇಸವಿ?
5. ‘ನೀಲ್ ಹೆನ್ರಿಕ್’ ಏಬೆಲ್ ಯಾರು?
6. ಬರ್ಟಂಡ್ ರಸೆಲ್ ಯಾವಾಗ ಜನಿಸಿದರು?
7. ಸ್ಟಾರ್ಟಿಂಗ್ ಯಾವ ದೇಶದ ಪಾರ್ಲಿಮೆಂಟ್‌ನ ಹೆಸರು?
8. ಜಗತ್ತಿನ ಯಾವ ವ್ಯಕ್ತಿಯ ಹೆಸರಿನಲ್ಲಿ 1100 ಪೇಟೆಂಟ್‌ಗಳಿವೆ?
9. ಸ್ಪುಟಿಕ್ ಎಂಬ ಉಪಗ್ರಹವನ್ನು ಹಾರಿಸಿದ ದೇಶ ಯಾವುದು?

ಮುಹಮ್ಮದ್ ಅಝ್ಮಾಲ್, ಕಸ್ಬಾ ಬೆಂಗ್ರೆ

ಉತ್ತರಗಳು

(1) ಪೋಲಾಂಡ್
(2) 4,16,67,920 ಚ.ಕಿ.ಮೀ. (ಜಗತ್ತಿನ ಅತೀ ದೊಡ್ಡ ಖಂಡ)
(3) ಮಂಗೋಲಿಯಾ ಮತ್ತು ಚೀನಾ
(4) 1567
(5) ಗಣಿತ ಪಂಡಿತ
(6) 1872
(7) ನಾರ್ವೆ
(8) ಥಾಮಸ್ ಆಲ್ವಾ ಎಡಿಸನ್
(9) ರಷ್ಯಾ

**ಕಥೆ**

# ಕಪ್ಪು ಹುಡುಗಿ

**✍ ಅಬೂ ಫಾತಿಮಾ ಮವದ್ದ, ಮಂಗಳೂರು**

**ಕ**ನ್ನಡಿಯ ಮುಂದೆ ನಿಂತು ಸಮಿನಾ, ಒದ್ದೆಗಣ್ಣಿನಿಂದ ನಿನ್ನೆ ನಡೆದ ಘಟನೆಗಳನ್ನು ಒಂದೊಂದಾಗಿ ತನ್ನ ಸ್ಮೃತಿ ಪಟಲಕ್ಕೆ ತರುತ್ತಾಳೆ. ಇದು ಮೊದಲನೆಯ ಬಾರಿ ಅಲ್ಲದಿದ್ದರೂ ನಿನ್ನೆ ಯಾಕೋ ಅತಿಯಾದಂತಾಗಿತ್ತು. ಮನೆಯ ಕೆಲಸದಲ್ಲಿ ತೊಡಗಿದ್ದ ಸಮಿನಾಳನ್ನು ತೋರಿಸಿ ಓರ್ವ ಮಹಿಳೆ ಸಮಿನಾಳ ತಾಯಿಯೊಂದಿಗೆ ಇದು ಯಾರು ಎಂದು ಪ್ರಶ್ನಿಸಿದಾಗ, ಅದು ನಮ್ಮ ಕೆಲಸದಾಕೆ ಎಂದು ಬಿಟ್ಟರು. ಇದನ್ನು ಕೇಳಿ ಆಕೆಗೆ ದುಃಖ ಉಮ್ಮಳಿಸಿ ಅಲ್ಲಿಂದ ಎದ್ದು ಒಳಗೋಡಿ ಮನಸ್ಸು ಹಗುರವಾಗುವಷ್ಟು ಅತ್ತಿದ್ದಳು. ಕಾರಣವಿಷ್ಟೇ. 9 ಮಕ್ಕಳಲ್ಲಿ ಸಮಿನಾ ಮಾತ್ರ ಕಪ್ಪಾಗಿದ್ದಳು. ಆದ ಕಾರಣ ಅವಳ ಸ್ವಂತ ತಾಯಿಯೇ ಅವಳನ್ನು ಹಲವು ರೀತಿಯಲ್ಲಿ ಹೀಯಾಳಿಸುತ್ತಿದ್ದರು. ನಿನ್ನ ಈ ಕುರೂಪವನ್ನು ನೋಡಿ ನಿನ್ನನ್ನು ಯಾರು ಮದುವೆಯಾಗುತ್ತಾರೆ. ನಿನ್ನನ್ನು ಮದುವೆಯಾಗುವವನು ಯಾರೋ ಕುರುಡನಾಗಿರಬಹುದು ಎಂದು ಮನ ನೋಯಿಸುವಂತಹ ಮಾತುಗಳನ್ನು ಹೇಳುತ್ತಿದ್ದರು. ಅವಳ ಕಪ್ಪು ಮುಖದ ಕಾರಣ ಹೆಚ್ಚಿನ ವೇಳೆಯಲ್ಲಿ ಮನೆಯಲ್ಲಿಯೇ ಕೂಡಿ ಹಾಕುತ್ತಿದ್ದರು. ಹೊರಗೆ ಹೋಗಲು ಬಿಡುತ್ತಿರಲಿಲ್ಲ. ಸಮಿನಾಳಿಗೆ ತನ್ನ ಸ್ವಂತ ಮನೆಯಲ್ಲಿಯೇ ತಾನು ಪರಕೀಯಳೆಂಬ ಭಾವನೆ ಆಗಲೇ ಬೇರೂರಿತ್ತು.

ಹೀಗೆ, ಒಂದೊಂದಾಗಿ ಯೋಚಿಸುತ್ತಿರುವಾಗ ಭೂತದಂತೆ ಅಲ್ಲಿ ಅವಳ ತಾಯಿ ಪ್ರತ್ಯಕ್ಷಳಾಗುತ್ತಾಳೆ ಮತ್ತು ಕನ್ನಡಿಯ ಮುಂದೆ ಸಮಿನಾ ನಿಂತಿರುವುದನ್ನು ಕಂಡು ಅಣಕಿಸುತ್ತಾಳೆ, "ದೊಡ್ಡ ವಿಶ್ವಸುಂದರಿ ಇವಳು. ಫ್ಯಾರ್ ಆಂಡ್ ಲವ್‌ಲೀಯನ್ನು ಮುಖಕ್ಕೆ ಹಚ್ಚಿದರೆ ಅದು ಕೂಡಾ ಕಪ್ಪಾಗಿ ಬಿಡಬಹುದು. ಮನೆಯಲ್ಲಿ ಇಷ್ಟು ಕೆಲಸವಿರುವಾಗ ಮಹಾರಾಣಿಯಂತೆ ಕನ್ನಡಿ ಮುಂದೆ ನಿಂತಿದ್ದಾಳೆ. ಮನೆಯ ಕೆಲಸವನ್ನು ಯಾರು ಮಾಡುವುದು?"

ಸಮಿನಾ ಅಡುಗೆ ಮನೆಗೆ ಧಾವಿಸುತ್ತಾಳೆ ಮತ್ತು ಕೆಲಸ ಮಾಡುವ ಮೂಲಕ ತನ್ನ ನೋವನ್ನು ಮರೆಯಲು ಪ್ರಯತ್ನಿಸುತ್ತಾಳೆ. ಹಲವಾರು ಬಾರಿ ತನ್ನ ಈ ನೋವನ್ನು ತನ್ನ ಆಪ್ತ ಸ್ನೇಹಿತೆಯರಾದ ರಷೀದಾ ಹಾಗೂ ಹಪ್ಸಾರೊಂದಿಗೆ ತೋಡಿಕೊಂಡಿದ್ದಳು.

ಒಮ್ಮೆ ತಾಯಿಯೊಂದಿಗೆ ಮಾರುಕಟ್ಟೆಗೆ ಹೊರಟು ನಿಂತಾಗ ದಾರಿ ಮಧ್ಯೆ ಸಮಿನಾಳ ಸ್ನೇಹಿತೆಯರಾದ ರಷೀದಾ, ಹಪ್ಸಾ, ಸಫಿಯ್ಯ ಮತ್ತು ಅವಳ ಗಂಡ ಎದುರಾಗುತ್ತಾರೆ. ಆಗ ಆ ಮಹಾತಾಯಿ ಸಮಿನಾಳ ಗೆಳತಿಯರೊಂದಿಗೆ, "ನೀವು ಎಷ್ಟು ಸುಂದರಿಯಾಗಿದ್ದೀರಾ? ಆದರೆ ಇದು ನೋಡು ಕಾಗೆ" ಎಂದು ಪರ ಪುರುಷನ ಎದುರಲ್ಲಿಯೇ ತನ್ನ ಮಗಳನ್ನು ನಿಂದಿಸಲು ಪ್ರಾರಂಭಿಸುತ್ತಾಳೆ. ನಿಮಗೆ ಯಾರಾದರೂ ಒಳ್ಳೆಯ ಪತಿಯಂದಿರು ಸಿಗಬಹುದು. ಆದರೆ ಇವಳಿಗೆ ಯಾರು ಕೊಡುತ್ತಾರೆ? ನನ್ನ ಘನತೆಯನ್ನು ಮಣ್ಣು ಪಾಲು ಮಾಡಲಿಕ್ಕೆ ಹುಟ್ಟಿದವಳು."

ಗೆಳತಿಯರು ಸಮಿನಾಳತ್ತ ನೋಡಿದಾಗ ನೋವಿನ ನಗುವನ್ನು ಬೀರಿದಳು. ಸಮಿನಾ ಹೆಚ್ಚಿನ ವೇಳೆಯಲ್ಲಿ ಏಕಾಂಗಿತನವನ್ನೇ ಇಷ್ಟಪಡುವಳು. ಒಮ್ಮೊಮ್ಮೆ ಏಕಾಂತದಲ್ಲಿ ಆತ್ಮಹತ್ಯೆ ಮಾಡುವ ಯೋಚನೆಗಳೂ ಅವಳ ಮನಸ್ಸಿನಲ್ಲಿ ಸುಳಿದಾಡುತ್ತದೆ. ಆದರೆ ಆ ಕೂಡಲೇ ಅಲ್ಲಾಹನ ಸ್ಮರಣೆಯಾಗಿ ಅದರಿಂದ ದೂರವುಳಿಯುತ್ತಾಳೆ.

ತಾಯಿ ಎಂಬುದು ಮಹಾತ್ಯಾಗದ ಸಂಕೇತ. ತನ್ನ ಮಕ್ಕಳಿಗಾಗಿ ಯಾವ ತ್ಯಾಗಕ್ಕೂ ಸಿದ್ಧ. ತನ್ನ ಮಕ್ಕಳಿಗೆ ಯಾವುದಾದರೂ ತೊಂದರೆ ಯಾದರೆ ಅನ್ನ ಪಾನೀಯವನ್ನು ಲೆಕ್ಕಿಸದೆ, ನಿದ್ದೆ, ಆರಾಮವನ್ನು ಬಲಿಕೊಟ್ಟು ಅವರ ಆರೈಕೆಯಲ್ಲಿ ತೊಡಗುತ್ತಾಳೆ. ತಾಯಿ ಸಹನೆಯ ಸಾಕಾರ ಮೂರ್ತಿ ಎಂದೆಲ್ಲ ಮಾತುಗಳನ್ನು ಕೇಳಿದ್ದೆ. ಆದರೆ ಈ ಮಹಾತಾಯಿ, ತಾಯಿ ಎಂಬ ಪದಕ್ಕೆ ಅಪವಾದವಾಗಿದ್ದಾಳೆ. ಕೇವಲ ತನ್ನ ಮೈಯ ಬಣ್ಣವನ್ನು ಸಹಿಸದೇ ಇರುವಷ್ಟು ಕಠೋರಳಾಗಿದ್ದಾಳೆ. ತಾಯಿಯ ಪಾದದಡಿಯಲ್ಲಿ ಸ್ವರ್ಗವಿದೆ ಎಂದು ಪ್ರವಾದಿವರ್ಯರು(ಸ) ಹೇಳಿರುವಾಗ ನನ್ನ ತಾಯಿಯ ಪಾದದಡಿಯಲ್ಲಿ ಸ್ವರ್ಗ ಕಾಣುತ್ತಿಲ್ಲವಲ್ಲ. ಇಡೀ ದೇಹದಲ್ಲಿಯೇ ಬೆಂಕಿಯನ್ನೂ ಹೊತ್ತು ನಡೆಯುತ್ತಾಳೆ. ಹೆಚ್ಚಿನ ವೇಳೆಯಲ್ಲಿ ಆ ಬೆಂಕಿಯನ್ನು ನನ್ನ ಮೇಲೆಯೇ ಕಾರುತ್ತಾಳೆ. ಅದೇ ರೀತಿ ಲೆಕ್ಕದ ಪರಿಧಿಯನ್ನೂ ಮೀರಿ ಹಲವಾರು ವರಮಹಾಶಯರು ಸಮಿನಾಳ ನೋಡಿ ಕಪ್ಪು ಎಂಬ ಕಾರಣವನ್ನು ನೀಡಿ ತಿರಸ್ಕರಿಸಿದಾಗ, ಪ್ರತಿಯೊಂದು ತಿರಸ್ಕಾರದ ನಂತರ ಸಮಿನಾಳ ತಾಯಿಯು ನೀಡುತ್ತಿದ್ದ ಮಾನಸಿಕ ಹಿಂಸೆಯಲ್ಲಿ ಹೆಚ್ಚಳವಾಗುತ್ತಿದ್ದವು... ಹೀಗೆ ಒಂದೊಂದಾಗಿ ಯೋಚಿಸುತ್ತಿದ್ದ ಸಮಿನಾಳಿಗೆ ತನ್ನ ತಾಯಿಯ ಮೇಲೆ ಜಿಗುಪ್ಸೆಯುಂಟಾಗುತ್ತದೆ ಹಾಗೂ ತನ್ನಲ್ಲಿರುವ ಮೈ ಬಣ್ಣವು ಅಪರಾಧಿಗಳ ಬಣ್ಣ ಎಂಬ ಭಾವನೆ ಸಮಿನಾಳಲ್ಲಿ ಮೂಡುತ್ತದೆ.

ಇಷ್ಟೆಲ್ಲ ಮಾನಸಿಕ ಹಾಗೂ ದೈಹಿಕ ಹಿಂಸೆ ದೌರ್ಜನ್ಯಗಳನ್ನು ದಿನಂಪ್ರತಿ ಅನುಭವಿಸುವ ಸಮಿನಾಳಿಗೆ ಸ್ವಲ್ಪ ಮಟ್ಟಿಗೆ ಮನಃಶಾಂತಿ ಹಾಗೂ ಸಮಾಧಾನ ಲಭಿಸುತ್ತಿದ್ದುದು ತಮ್ಮ ಗೆಳತಿಯರಾದ ರಷೀದಾ ಹಾಗೂ ಹಪ್ಸಾರ ಮುಂದೆ ತನ್ನ ವೃತ್ತಾಂತವನು ತಿಳಿಸಿದಾಗ ಮಾತ್ರ. ಆಗ ಅವರಿಂದ ಬರುವ ಸಮಾಧಾನಕರ ಮಾತುಗಳಿಂದ ತಾಯಿಯಿಂದಾಗಿ ತನ್ನ ಒಂದೊಂದೇ ಭಾವನೆಗಳು ಆಗ್ರಹಾಭಿಲಾಷೆಗಳು ಸಾಯುತ್ತಿರುವಾಗ, ಗೆಳತಿಯರಿಂದಾಗಿ ಅದು ಪುನಃ ತೆರೆದು ತನ್ನ ರಾಜಕುಮಾರನ ಬರುವಿಕೆಯನ್ನೇ ಕಾಯ ತೊಡಗುತ್ತಾಳೆ.

ಕೊನೆಗೂ ಸಮಿನಾಳ ಕನಸು ಸಾಕ್ಷಾತ್ಕಾರಗೊಳ್ಳುವ ಸಮಯ ಬಂದೇ ಬಿಟ್ಟಿತು. ನನ್ನನ್ನು ನೋಡದೇ ಕೇವಲ ಬ್ರೋಕರ್ ಅದ್ದುವಿನ ಮೂಲಕ ನನ್ನನ್ನು ಒಪ್ಪಿಕೊಂಡಿರುವುದನ್ನು ತಿಳಿದ ಸಮಿನಾಳಿಗೆ ಅವನ ಬಗ್ಗೆ ಹೆಮ್ಮೆಯುಂಟಾಗುತ್ತದೆ. ಅದರ ಜತೆಗೆ ಸಂತೋಷದಿಂದಾಗಿ ಕಾಲು ನೆಲದಲ್ಲಿ ನಿಲ್ಲದೇ ಈ ಸಂತೋಷದ ಸುದ್ದಿಯನ್ನು ಆದಷ್ಟು ಬೇಗ ತನ್ನ ಗೆಳತಿಯರೊಂದಿಗೆ ಹಂಚಿ ವರದಕ್ಷಿಣೆ ಇಲ್ಲದೆ ಹಾಗೂ ನನ್ನನ್ನು ನೋಡದೇ ಒಪ್ಪಿರುವ ಆ ಪುರುಷನ ದೊಡ್ಡ ಗುಣವನ್ನೂ ಒಂದೇ ಉಸಿರಲ್ಲಿ ಹೇಳಿ ಅವರ ಉತ್ತರಕ್ಕೂ ಕಾಯದೇ ಹೊರಟು ಹೋಗುತ್ತಾಳೆ. ಸಂತೋಷಾಚಾರಿಸುವುದನ್ನೇ ಮರೆತಿದ್ದ ಸಮಿನಾಳ ಸಂತೋಷವನ್ನು ನೋಡಿ ಗೆಳತಿಯರೂ ಸಂತೋಷಗೊಳ್ಳುತ್ತಾರೆ.

ಈಗ ಸಮಿನಾಳ ಮನೆಯಲ್ಲಿ ಸಂಭ್ರಮ ಹಾಗೂ ಸಡಗರದ ವಾತಾವರಣ. ಮನೆಯಲ್ಲಿ ಎಲ್ಲರ ಬಾಯಿಯಲ್ಲೂ ಮದುವೆಯದೇ ಚರ್ಚೆ. ಕೊನೆಗೆ ಆ ದಿನವು ಬಂತು. ಸಮಿನಾಳನ್ನು ಶೃಂಗರಿಸಲಾಗಿದೆ. ಪಕ್ಕದಲ್ಲಿ ಅವಳ ಗೆಳತಿಯರಿದ್ದು ಸಮಿನಾಳನ್ನು ಛೇಡಿಸುತ್ತಿದ್ದಾರೆ. ಸಮಿನಾ ನಾಚಿಕೆಯಿಂದ ತಲೆ ತಗ್ಗಿಸುತ್ತಾಳೆ. ಆದರೆ ಕಣ್ಣು ಮಾತ್ರ ತನ್ನ ರಾಜಕುಮಾರನ ಹುಡುಕಾಟದಲ್ಲಿತ್ತು. ವರನ ಕಡೆಯವರು ವರನನ್ನು ಸಮಿನಾಳ ಬಳಿ ಕರೆತರುತ್ತಿದ್ದಾರೆ ಎಂದು ಗೆಳತಿಯರು ಸಮಿನಾಳಿಗೆ ತಿಳಿಸಿದಾಗಲಂತೂ ಕುತೂಹಲ ತಡೆಯಲಾಗದೇ ತನ್ನ ಹೃದಯವನ್ನು ಕದ್ದ ಆ ಕನಸುಗಾರನನ್ನು ನೋಡಬೇಕೆಂಬ ಹಂಬಲದಿಂದ ತನ್ನ ತಲೆಯನ್ನು ಎತ್ತುತ್ತಾಳೆ. ವರನ ಪೋಷಾಕಿನಲ್ಲಿ ಓರ್ವ ಬುದ್ಧಿಮಾಂದ್ಯ ವ್ಯಕ್ತಿ ಇರುವುದನ್ನು ಕಂಡು ಸಮಿನಾ ಒಮ್ಮೆಲೇ ಗರಬಡಿದಂತಾಗಿ ಕುಸಿಯುತ್ತಾಳೆ. ಆ ನಂತರದ ಕಾರ್ಯವು ಯಾಂತ್ರಿಕವಾಗಿ ನಡೆಯಿತು.

ಈ ಆಘಾತದಿಂದ ಹೊರಬಂದು ತನ್ನ ಗೆಳತಿಯರ ಕಡೆಗೆ ನೋಡಿದಾಗ ಅವರೂ ಕೂಡಾ ಖಿನ್ನ ವದನರಾಗಿ ತಮ್ಮ ಅಸಹಾಯಕತೆಯನ್ನು ತೋರ್ಪಡಿಸಿದರು. ಇಷ್ಟರ ತನಕ ತಾಯಿಯ ಮೇಲಿದ್ದ ಎಲ್ಲ ಕೋಪವನ್ನು ಪ್ರಕಟಿಸುವ ಮೂಲಕ ತಾಯಿಯನ್ನು ದುರುಗುಟ್ಟುತ್ತಾಳೆ. ಈಗ ಸಮಿನಾಳಲ್ಲಿ ಮೊದಲಿದ್ದ ಉತ್ಸಾಹ, ಲವಲವಿಕೆ ಸಂತೋಷ ಎಲ್ಲವೂ ಮಾಯವಾಗಿ ಅಸಹನೆ, ಬೇಸರ, ಜಿಗುಪ್ಸೆಗಳೂ ಆ ಜಾಗದಲ್ಲಿ ಸೇರಿಕೊಂಡಿವೆ. ಆದರೂ ಒಂದು ತೃಪ್ತಿಯಿತ್ತು. ಈ ನರಕಮಯ ಮನೆಯಿಂದ ತನಗೆ ಮುಕ್ತಿ ಸಿಕ್ಕಿತಲ್ಲ. ಇನ್ನು ಜೀವಮಾನ ವಿಡೀ ಅಲ್ಲಿ ಕೊಳೆತು ಸತ್ತರೂ ಈ ಮನೆಗೆ ಹಿಂದಿರುಗಲಾರೆ. ಎಂಬ ದೃಢ ನಿರ್ಧಾರವನ್ನು ಕೈಗೊಳ್ಳುತ್ತಾಳೆ. ಆದರೆ ಸಮಿನಾಳ ತಾಯಿಯು ವರನ ಕಡೆಯವರಿಂದ ಇವತ್ತು ಒಂದು ದಿನ ಸಮಿನಾ ನಮ್ಮ ಮನೆಯಲ್ಲಿರಲಿ ಎಂದು ಅನುಮತಿ ಕೇಳಿದಾಗ ಅನಿವಾರ್ಯವಾಗಿ ಅಂದು ಸಮಿನಾಳಿಗೆ ತನ್ನ ಮನೆಯಲ್ಲಿಯೇ ನಿಲ್ಲಬೇಕಾಯಿತು.

ಕೋಣೆಯಲ್ಲಿ ಒಬ್ಬಳೇ ಕೂತು ನಡೆದ ಘಟನೆಯನ್ನು ನೆನಸಿ ಅಳುತ್ತಿರುವುದನ್ನು ಕಂಡ ಸಮಿನಾಳ ತಾಯಿ ಹತ್ತಿರ ಹೋಗಿ ಕುಳಿತು ಮಗಳ ತಲೆಯನ್ನು ನೇವರಿಸುತ್ತಾಳೆ. ಈ ಅಸಹಜ ಘಟನೆಯಿಂದಾಗಿ ಸಮಿನಾ ತನ್ನ ಅಳುವನ್ನೇ ಮರೆಯುತ್ತಾಳೆ ಮತ್ತು ತನ್ನ ಕಣ್ಣನ್ನೇ ನಂಬಲಾಗಲಿಲ್ಲ. ಪ್ರತಿಯೊಂದು ಕೆಲಸದಲ್ಲಿಯೂ ತಪ್ಪನ್ನು ಹುಡುಕುತ್ತಿದ್ದವಳು ನನ್ನ ತಲೆಯನ್ನು ನೇವರಿಸುತ್ತಿರುವುದೇ? ನಾನೇನು ಕನಸು ಕಾಣುತ್ತಿಲ್ಲವಲ್ಲ ಎಂಬ ಆಶ್ಚರ್ಯದೊಂದಿಗೆ ತಾಯಿಯನ್ನು ದಿಟ್ಟಿಸುತ್ತಾಳೆ. ಮಗಳ ಮನಸ್ಸಿನಲ್ಲುಂಟಾದ ಭಾವನೆಗಳನ್ನು ಅರಿತುಕೊಂಡಂತೆ, ತನ್ನಲ್ಲಿದ್ದ ದುಗುಡವನ್ನು ಹೇಳಲು ಪ್ರಾರಂಭಿಸುತ್ತಾಳೆ. "ಮಗಳೇ! ಇದು ನಾನೇ"

ಮಗಳೇ ಎಂಬ ಶಬ್ದ ಕೇಳಲು ಎಷ್ಟೊಂದು ವರ್ಷದಿಂದ ಚಡಪಡಿಸುತ್ತಿದ್ದ ಸಮಿನಾಳಿಗೆ ಮಗಳೇ ಎಂಬ ಮಾತು ತಾಯಿಯ ಬಾಯಿಯಿಂದ ಕೇಳಿದ್ದೇ ತಡ ಕಣ್ಣಿನಿಂದ ನೀರ



ಹನಿಗಳು ತನಗರಿವಿಲ್ಲದೆಯೇ ಉದುರ ತೊಡಗಿದವು.

"ಹೌದು ಇದು ನಾನೇ! ನಿನ್ನ ಪ್ರತಿಯೊಂದು ಕೆಲಸದಲ್ಲೂ ಹುಳುಕು ಹುಡುಕುತ್ತಿದ್ದ, ನಿನ್ನನ್ನು ಜರೆಯುತ್ತಿದ್ದ ಹಾಗೂ ಮೂದಲಿಸುತ್ತಿದ್ದ ಮತ್ತು ನನ್ನ ನೆರಳನ್ನು ಕಂಡರೆ ಹೆದರುತ್ತಿದ್ದ ನಿನ್ನ ಪಾಲಿನ ಶತ್ರುವಾಗಿರುವ ನಿನ್ನ ತಾಯಿಯೇ. ಯಾವಾಗಲೂ ಕಠೋರವಾಗಿಯೇ ವರ್ತಿಸುತ್ತಿದ್ದವಳು ಇಂದಿನ ಮೃದುವಾದ ಮಾತು ಹಾಗೂ ಮಮತೆಯ ನೇವರಿಸುವಿಕೆ ನಿನ್ನನ್ನು ಆಶ್ಚರ್ಯಗೊಳಿಸಿದೆಯೇ? ಹೌದು ಮಗಳೇ ನಾನು ಸ್ವಲ್ಪ ಸ್ವಾರ್ಥಿ. ನನ್ನನ್ನು ಸ್ವಾರ್ಥಿಯಾಗಿ ಮಾಡಿದ್ದು ಈ ಸಮಾಜ. ನನಗೆ ಹುಟ್ಟಿದ 9 ಮಕ್ಕಳಲ್ಲಿ ನಿನ್ನೊಬ್ಬಳು ಕಪ್ಪು ಚರ್ಮದವಳಾದಾಗ ನಾನು ವಿಚಲಿತಳಾದೆ. ಏಕೆಂದರೆ ಈಗಿನ ಸಮಾಜವು ಹೆಣ್ಣು ಎಂಬ ಜೀವಿಯನ್ನು ಸ್ವೀಕರಿಸುವುದಿಲ್ಲ. ಅದರಲ್ಲೂ ವಿಶೇಷವಾಗಿ ಅವಳು ಕಪ್ಪಾಗಿದ್ದರೆ ಮತ್ತು ಅವಳ ಬಾಳು ನರಕಮಯವಾಗುತ್ತದೆ. ಹೆಣ್ಣು ಜನಿಸಿದೆ ಎಂದು ತಿಳಿದರೆ ಮುಖ ಬಾಡಿಹೋಗುವ ಸಮಾಜದಲ್ಲಿ ನಾವು ಬದುಕುತ್ತಿದ್ದೇವೆ. ಅಷ್ಟು ಮಾತ್ರವಲ್ಲ ಹೆಣ್ಣನ್ನು ಹೆತ್ತ ತಪ್ಪಿಗೆ ಹೆತ್ತ ತಾಯಂದಿರನ್ನು ಅವರ ಕುಟುಂಬವು ಮಾನಸಿಕ ಹಾಗೂ ದೈಹಿಕವಾಗಿ ಹಿಂಸಿಸುವ ಸಮಾಜ ಇದು. ಕೆಲವರು ಹೊಟ್ಟೆಯಲ್ಲಿರುವುದು ಹೆಣ್ಣು ಎಂಬ ಕಾರಣಕ್ಕೆ ಆ ಹೆಣ್ಣಿನ ಜನಿಸುವ ಹಕ್ಕನ್ನು ಕಸಿದುಕೊಳ್ಳುತ್ತಾರೆ. ಆದರೆ ನಾನು ಅಷ್ಟು ಕಠೋರಳಲ್ಲ ಮಗಳೇ! ನಾನು ನಿನ್ನ ಬದುಕುವ ಹಕ್ಕನ್ನು ಕಸಿಯಲಿಲ್ಲ. ಆದರೆ ವರದಕ್ಷಿಣೆಗೆ ಬಾಯಿ ಬಿಡುವ ಈ ಸಮಾಜದಲ್ಲಿ ನಿನ್ನ ಮೈ ಬಣ್ಣವು ನನ್ನನ್ನು ನಿನ್ನ ಭವಿಷ್ಯದ ಬಗ್ಗೆ ಚಿಂತಿಸುವಂತೆ ಮಾಡಿತು. ಆ ಕೋಪವನ್ನು ಹಾಗೂ ಆ ಅಸಹನೆಯನ್ನು ನಿನ್ನ ಮೇಲೆ ಪ್ರಯೋಗಿಸುವ ಮೂಲಕ ಸಮಾಧಾನವನ್ನು ಕಂಡುಕೊಳ್ಳುತ್ತಿದ್ದೆ. ಪುರುಷ ಪ್ರಧಾನ ಈ (14ನೇ ಪುಟಕ್ಕೆ)

# ಅಪಹೃತ ಇರಾನ್ ಅಣು ವಿಜ್ಞಾನಿ ಶಹ್‌ರಾಮ್ ಅಮಿರಿಗೆ ಬಂಧಮುಕ್ತಿ



**ಟೆಹ್ರಾನ್:** ಅಮೇರಿಕಾದ ಜೈಲಿನಲ್ಲಿ ತಿಂಗಳುಗಳ ಕಾಲ ದೌರ್ಜನ್ಯಗಳಿಗೆ ಗುರಿಯಾಗಿ ಇದೀಗ ಇರಾನಿನ ಶಹ್‌ರಾಮ್ ಅಮಿರಿ ತಾಯ್ನಾಡಿಗೆ ಮರಳಿದ್ದಾರೆ. ಅಮೇರಿಕದ ವಿಮಾನ ನಿಲ್ದಾಣದಿಂದ ಹೊರಟು ಕತರ್ ದಾರಿಯಾಗಿ ಟೆಹ್ರಾನಿನ ವಿಮಾನ ನಿಲ್ದಾಣದಲ್ಲಿ ಅವರು ಬಂದಿಳಿದರು. ಅವರನ್ನು ಸ್ವಾಗತಿಸಲು ಪುತ್ರ ಹಾಗೂ ಪತ್ನಿಯಲ್ಲದೆ ಬಂಧು ಬಾಂಧವರೂ ಹಾಜರಿದ್ದರು. ಇರಾನಿನ ವಿದೇಶಾಂಗ ಸಚಿವರೂ ಈ ಸಂದರ್ಭದಲ್ಲಿ ಸ್ಥಳದಲ್ಲಿದ್ದರು.

ಅಮೇರಿಕಾದ ಗೂಢಚರರು ಸೌದಿ ಅರೇಬಿಯದ ನೆರವಿನಿಂದ ಹಜ್ಜ್ ಕರ್ಮ ನೆರವೇರಿಸುವ ಸಂದರ್ಭದಲ್ಲಿ ನನ್ನನ್ನು ಅಪಹರಿಸಿದ್ದರು. ಎಂದು ವಾರ್ತಾ ಮಾಧ್ಯಮಗಳ ಮುಂದೆ ಅವರು ತಿಳಿಸಿದರು. ಸುಮಾರು 14 ತಿಂಗಳು ನಿರಂತರ ನನ್ನನ್ನು ಪ್ರಶ್ನಿಸಿದರು. ಮೊದಲ ಎರಡು ತಿಂಗಳು ದೈಹಿಕವಾಗಿಯೂ ಮಾನಸಿಕವಾಗಿಯೂ ಹಿಂಸಿಸಲಾಯಿತು. ಇರಾನಿನ ಅಣು ಯೋಜನೆಯ ವಿವರಣೆಗಳನ್ನು ಬಹಿರಂಗ ಪಡಿಸಲು ಒತ್ತಾಯಿಸಿದರು. ಇದಕ್ಕೆ 50 ಲಕ್ಷ ಡಾಲರ್ ನೀಡುವುದಾಗಿ ವಾಗ್ದಾನ ನೀಡಿದ್ದರು. ಕುಟುಂಬದ ಮಂದಿಯೊಂದಿಗೆ ಸುರಕ್ಷಿತವಾಗಿ ಯುರೋಪಿನಲ್ಲಿ ಕಾಲ ಕಳೆಯಬಹುದೆಂಬ ವಾಗ್ದಾನವೂ ಲಭಿಸಿತ್ತು. ಇದಕ್ಕೆ ಒಪ್ಪದಿದ್ದಾಗ ಜೈಲಿಗೆ ಕಳುಹಿಸುವ ಬೆದರಿಕೆ ನೀಡಲಾಯಿತು. ಅಲ್ಲಿಂದ ರಹಸ್ಯವಾಗಿ ಇಂಟರ್‌ನೆಟ್ ಮೂಲಕ ನನ್ನ ವಿವರಗಳನ್ನು ಬಹಿರಂಗ ಪಡಿಸಿದಾಗ ಇದನ್ನು ನಿರಾಕರಿಸಿ ಹೇಳಿಕೆ ನೀಡಬೇಕೆಂದೂ ಒತ್ತಡ ಹೇರಲಾಯಿತು. ಅಮೇರಿಕದಲ್ಲಿ ಸುಖವಾಗಿದ್ದೇನೆ ಎಂಬ ಹೇಳಿಕೆಯನ್ನು ಒತ್ತಾಯ ಪೂರ್ವಕವಾಗಿ ಪಡೆದುಕೊಂಡು ಅದರ ವಿಡಿಯೋವನ್ನು ಪ್ರಕಟಿಸಿದರು. ಸ್ವಇಚ್ಛೆಯಿಂದ ಅಮೇರಿಕಕ್ಕೆ ಹೋಗಿದ್ದೇನೆಂಬ ಹೇಳಿಕೆ ನೀಡಲು ಒತ್ತಡ ಹೇರಿದರು. 10 ನಿಮಿಷದ ಹೇಳಿಕೆಗಳಿಗೆ 10 ಲಕ್ಷ ಡಾಲರ್‌ನ ವಾಗ್ದಾನವನ್ನು ನೀಡಿದರು.

ಇಸ್ರೇಲ್ ಗುಪ್ತಚರರ ಸಮ್ಮುಖದಲ್ಲಿ ಅನೇಕ ಬಾರಿ ವಿಚಾರಣೆ ಗೊಳಪಡಿಸಿದರು. ಇರಾನಿನ ಅಣು ಯೋಜನೆಯ ಕುರಿತು ನನಗೆ ಹೆಚ್ಚೇನೂ ತಿಳಿದಿಲ್ಲವೆಂದೂ ಹೇಳಿದರು. ಇರಾನನ್ನು ಅವಹೇಳಿಸಿ ಮಾತನಾಡಬೇಕೆಂದೂ ಅವರು ಒತ್ತಾಯಿಸುತ್ತಿದ್ದರು. ಅದಕ್ಕಾಗಿ ತಿಂಗಳು ಗಟ್ಟಲೆ ನನ್ನನ್ನು ಸತಾಯಿಸಿದರು. ನಂತರ ಇವನಿಂದ ಪ್ರಯೋಜನವಿಲ್ಲವೆಂದು ಬಗೆದು ನನ್ನನ್ನು ಬಿಡುಗಡೆ ಮಾಡಿದರು. ಇರಾನಿನ ಸೆರೆಮನೆಯಲ್ಲಿರುವ ಮೂವರು ಕೈದಿಗಳಿಗೆ ಬದಲಾಗಿ ನನ್ನನ್ನು ಬಿಡುಗಡೆಗೊಳಿಸಲಾಗಿದೆ ಎಂಬ ಅಮೇರಿಕಾದ ವರದಿಯನ್ನು ಅವರು ತಳ್ಳಿ ಹಾಕಿದರು. ತಾನು ಅಮೇರಿಕಾದಿಂದ ಐವತ್ತು ಲಕ್ಷ ಡಾಲರ್ ಪಡೆದಿದ್ದೇನೆ ಎಂಬ ವರದಿ ಸುಳ್ಳು ಎಂದೂ ಹೇಳಿದರು.

# ಹಸನ್ ತುರಾಬಿ ಬಂಧಮುಕ್ತ



**ಖಾರ್ತುಮ್:** ಸುಡಾನ್ ಸರಕಾರವು ಪ್ರತಿಪಕ್ಷ ನೇತಾರರಾದ, ಖ್ಯಾತ ಇಸ್ಲಾಮೀ ಚಿಂತಕ ಹಸನ್ ತುರಾಬಿಯವರನ್ನು ಬಂಧಮುಕ್ತಗೊಳಿಸಿದೆ. ತುರಾಬಿಯವರನ್ನು ಕಳೆದ ಮೇ ತಿಂಗಳಲ್ಲಿ ಬಂಧಿಸಲಾಗಿತ್ತು. ಜತೆಗೆ ಅವರ ಪಕ್ಷದ ಮುಖವಾಣಿ ಪತ್ರಿಕೆಯ ಮುದ್ರಣವನ್ನು ತಡೆ ಹಿಡಿಯಲಾಗಿತ್ತು.

# ಅಮೇರಿಕದಲ್ಲಿ ನಿರುದ್ಯೋಗ ಹೆಚ್ಚಳ

**ವಾಷಿಂಗ್ಟನ್:** ಅಮೇರಿಕನ್ ಕಾರ್ಮಿಕ ಸಚಿವಾಲಯದ ವತಿಯಿಂದ ಹೊರಡಿಸಲಾದ ಹೇಳಿಕೆಯೊಂದರ ಪ್ರಕಾರ, ಕಳೆದ ಜೂನ್ ತಿಂಗಳೊಂದರಲ್ಲೇ 25 ಸಾವಿರ ಮಂದಿ ಉದ್ಯೋಗ ಕಳಕೊಂಡಿದ್ದಾರೆ. ಇದು 2007ರಲ್ಲಿ ಉದ್ಭವಿಸಿದ್ದ ಆರ್ಥಿಕ ಹಿಂಜರಿತದ ಪರಿಣಾಮ ಎಂದು ಹೇಳಲಾಗುತ್ತಿದೆ. ಆ ಅವಸ್ಥೆಯಿಂದ ಅಮೇರಿಕ ಮತ್ತು ಇತರ ಪಾಶ್ಚಾತ್ಯ ದೇಶಗಳಿಗೆ ಹೊರಬರಲು ಇನ್ನೂ ಸಾಧ್ಯವಾಗಿಲ್ಲ ಎನ್ನಲಾಗುತ್ತಿದೆ.

# ಬಾಂಗ್ಲಾದೇಶ: ಧಾರ್ಮಿಕ ಗ್ರಂಥಗಳಿಗೆ ನಿಷೇಧ

**ಢಾಕಾ:** ಅವಾಮಿ ಲೀಗ್ ಇಸ್ಲಾಮ್‌ನಿಂದ ದೂರ ಸರಿಯುತ್ತಿದೆ. ಅದು ಬಾಂಗ್ಲಾದೇಶ ಜಮಾಅತೆ ಇಸ್ಲಾಮಿಯ ನೇತಾರರನ್ನು ಬಂಧಿಸಿದೆಯಲ್ಲದೇ ಇಪ್ಪತ್ತನೇ ಶತಮಾನ ಕಂಡ ಜಗದ್ವಿಖ್ಯಾತ ಇಸ್ಲಾಮೀ ವಿದ್ವಾಂಸರಾದ ಸಯ್ಯದ್ ಅಬುಲ್ ಆಲಾ ಮೌದೂದಿಯವರ ಸಾಹಿತ್ಯ ಕೃತಿಗಳನ್ನು ನಿಷೇಧಿಸಿದೆ. ಸಯ್ಯದ್ ಮೌದೂದಿಯವರ ತಫ್ಹೀಮುಲ್ ಕುರ್‌ಆನ್ ಬಹುತೇಕ ಜಗತ್ತಿನೆಲ್ಲ ಮುಸ್ಲಿಮ್ ದೇಶಗಳಲ್ಲಿ ಓದಲ್ಪಡುವಂತಹ ತಫ್ಸೀರ್ ಗ್ರಂಥವಾಗಿದೆ. ಮೌದೂದಿಯವರು ಬರೆದಿರುವ ಎಲ್ಲ ಕೃತಿಗಳನ್ನು ತೆಗೆದು ಹಾಕಬೇಕೆಂದು ಬಾಂಗ್ಲಾ ಸರಕಾರವು ದೇಶದಾದ್ಯಂತದ ಮಸೀದಿ ಮತ್ತು ಗ್ರಂಥಾಲಯಗಳಿಗೆ ಆದೇಶಿಸಿದೆ.

ಪ್ರಸ್ತುತ ನಡೆಯನ್ನು ಇಸ್ಲಾಮಿನ ಮೇಲೆ ಆಘಾತ ಎಂದು ಜಮಾಅತ್‌ನ ಹಿರಿಯ ನೇತಾರ ಎ.ಟಿ.ಎಂ. ಅಝ್ಹರುಲ್ ಇಸ್ಲಾಮ್ ಅಭಿಪ್ರಾಯಪಟ್ಟಿದ್ದಾರೆ. ಈ ಹಿಂದೆ ದೇಶದಲ್ಲಿನ ಎಲ್ಲ ರಾಜಕೀಯ ಪಕ್ಷಗಳನ್ನು ನಿಷೇಧಿಸಿ, ಸ್ವಯಂ ಅಧ್ಯಕ್ಷನೆಂದು ಘೋಷಿಸಿಕೊಂಡ ಶೈಖ್ ಮುಜೀಬುರ್ರಹ್ಮಾನ್‌ರ ಹೆಜ್ಜೆ ಗುರುತುಗಳಲ್ಲೇ ಹಸೀನಾ ವಾಜಿದ್ ನಡೆಯುತ್ತಿದ್ದಾರೆ. ಆ ಸಂದರ್ಭದಲ್ಲಿ ಅಂದರೆ 1974ರಲ್ಲಿ ಅವಾಮಿ ಲೀಗ್‌ಗೆ ಭಾರೀ ಹಿನ್ನಡೆಯಾಗಿತ್ತು ಹಾಗೂ ಮುಜೀಬುರ್ರಹ್ಮಾನ್ ಕೊಲೆಗೈಯಲ್ಪಟ್ಟರು.

ಢಾಕಾ ನ್ಯಾಯಾಲಯವು ಜುಲೈ 16ರಂದು ಬಾಂಗ್ಲಾ ಜಮಾಅತ್‌ನ ಪ್ರಧಾನ ಕಾರ್ಯದರ್ಶಿ ಅಲಿ ಅಹ್ಸನ್ ಮುಹಮ್ಮದ್ ಮುಜಾಹಿದ್‌ರನ್ನು ಮೂರು ದಿನಗಳ ನ್ಯಾಯಾಂಗ ಬಂಧನಕ್ಕೆ ಆದೇಶ ನೀಡಿದೆ. ಅವರ ಮೇಲೆ 1971ರಲ್ಲಿ ಬಾಂಗ್ಲಾದೇಶ ಸ್ಥಾಪನೆಯ ವೇಳೆ ನಡೆದ ಯುದ್ಧದಲ್ಲಿ 345 ಮಂದಿಯನ್ನು ಕೊಲೆಗೈದ ಆರೋಪ ಹೊರಿಸಲಾಗಿತ್ತು. ಅದೇ ವೇಳೆ ಅಪರಾಧ ಪತ್ತೆ ದಳ ವಿಭಾಗ(ಸಿ.ಐ.ಡಿ)ವು ಸಲ್ಲಿಸಿದ ಅರ್ಜಿಯ ಮೇರೆಗೆ ಜಮಾಅತ್ ಅಧ್ಯಕ್ಷರಾದ ಮತೀಉರ್ರಹ್ಮಾನ್‌ರನ್ನು ಜುಲೈ 14ರಂದು ಬಂಧಿಸಲಾಗಿತ್ತು.

# ಕಪ್ಪು ಹುಡುಗಿ (13ನೇ ಪುಟದಿಂದ)

ಸಮಾಜದಲ್ಲಿ ಎಲ್ಲ ಕಡೆಯಲ್ಲೂ ಹೆಣ್ಣೇ ಶೋಷಣೆಗೊಳಗಾಗುತ್ತಾಳೆ. ಗಂಡಸರಿಗೆ ಆ ಸಮಸ್ಯೆ ಇರುವುದಿಲ್ಲ. ಈಗ ನನ್ನನ್ನೇ ನೋಡು, ನಾನು ಬಿಳಿವರ್ಣದವಳಾಗಿಯೂ ನನಗೆ ಸಿಕ್ಕಿದ್ದು ಕಪ್ಪು ವರ್ಣದ ಗಂಡ. ಒಂದು ವೇಳೆ ನಾನು ಕಪ್ಪು ವರ್ಣದವಳಾಗಿದ್ದರೆ, ನನಗೆ ಬಹಳ ಕಷ್ಟ ಅನುಭವಿಸಿದರೂ ಕಪ್ಪು ವರ್ಣದ ಗಂಡಿನ ಹೊರತು ಬಿಳಿ ವರ್ಣದ ಗಂಡ ಸಿಗುವುದು ಕನಸಿನಲ್ಲೂ ಊಹಿಸಲು ಸಾಧ್ಯವಿತ್ತೇ? ಇಂದು ಅತ್ಯಾಚಾರಿ ಪುರುಷರಿಗೆ ಬಹಳ ಗೌರವದಿಂದ ಮದುವೆಗಳೂ ನಡೆಯುತ್ತವೆ. ಆದರೆ ಅದೇ ಪುರುಷರಿಂದ ಅತ್ಯಾಚಾರಕ್ಕೆ ಒಳಗಾದ ಸ್ತ್ರೀಯರನ್ನು ಈ ಸಮಾಜವು ಸ್ವೀಕರಿಸುವುದಿಲ್ಲ. ಈ ಸಮಾಜದಲ್ಲಿ ಅಂಗವಿಕಲ ಪುರುಷರಿಗೆ ಮದುವೆ ನಡೆಯುತ್ತದೆ. ಅದೇ ಒಂದು ವೇಳೆ ಸ್ತ್ರೀಯು ಅಂಗವಿಕಲೆಯಾಗಿದ್ದರೆ ಮದುವೆ ಎಂಬುದು ಒಂದು ಕನಸು ಮಾತ್ರ. ಉದ್ದ ಇದ್ದರೆ ಉದ್ದ, ಗಿಡ್ಡ ಆಗಿದ್ದರೆ ಗಿಡ್ಡ, ದಪ್ಪ, ಸಪೂರ ಎಂಬ ಕಾರಣಗಳನ್ನು ನೀಡಿ ತಿರಸ್ಕರಿಸಲಾಗುತ್ತದೆ. ಇಂತಹ ಸನ್ನಿವೇಶದಲ್ಲಿ ಬುದ್ಧಿಮಾಂದ್ಯ ವ್ಯಕ್ತಿಯೊಂದಿಗೆ ನಿನ್ನ ಮದುವೆಯ ತೀರ್ಮಾನವು ಅನಿವಾರ್ಯವಾಗಿತ್ತು. ಮಗಳೇ ನಿನ್ನಂತೆಯೇ ನನಗೂ ಈ ಸಂಬಂಧ ಇಷ್ಟವಿರಲಿಲ್ಲ. ಆದರೆ ನಾನು ಏನು ಮಾಡಲಿ. ನಾನು ಅಸಹಾಯಕಳು. ಇದಕ್ಕಿಂತ ಮುಂಚೆ ಎಷ್ಟೋ ಮಂದಿ ನಿನ್ನನ್ನು ನೋಡಿ ತಿರಸ್ಕರಿಸಿದ್ದಾರೆ. ಈ ಸಂಬಂಧವನ್ನು ಬಿಟ್ಟರೆ ಮತ್ತೆ ನಿನ್ನ ಮದುವೆಯಂತೂ ಕನಸಿನ ಮಾತು. ಅದರೊಂದಿಗೆ ನಿನ್ನ ಇಬ್ಬರು ತಂಗಿಯರೂ ಉಳಿದು ಬಿಡುತ್ತಾರೆ. ಆದ್ದರಿಂದ ಇಬ್ಬರಿಗಾಗಿ ಒಬ್ಬಳ ಜೀವನವನ್ನು ತ್ಯಾಗ ಮಾಡುವುದು ಅನಿವಾರ್ಯವಾಗಿತ್ತು. ಮಗಳೇ ನಿನಗೆ ನನ್ನ ಮೇಲೆ ಕೋಪ, ಸಿಡುಕು, ಅಸಹನೆಯಿರಬಹುದು. ಆದರೆ ಮಗಳೇ ನಾನು ಅಷ್ಟು ಕಠೋರಳಲ್ಲ. ನನ್ನಲ್ಲೂ ಒಂದು ತಾಯಿ ಹೃದಯವೆಂಬುದು ಇದೆ. ಅದು ಬಾಯಿಯಿಂದ ಶಪಿಸಿದರೂ ಅದರ ಮನಸ್ಸು ಮಾತ್ರ ತನ್ನ ಮಕ್ಕಳಿಗಾಗಿ ರೋದಿಸುತ್ತಿರುತ್ತದೆ ಹಾಗೂ ಅವರನ್ನು ಹಾರೈಸುತ್ತಿರುತ್ತದೆ. ಮಗಳೇ ನನ್ನ ಮೇಲಿನ ಕೋಪ ಇನ್ನೂ ನಿನ್ನಿಂದ ಆರಿಹೋಗಿಲ್ಲ ಎಂಬುದು ನನಗೆ ಗೊತ್ತು. ಮಗಳೇ ನನ್ನನ್ನು ಕ್ಷಮಿಸು. ನನಗೆ ಈ ತೀರ್ಮಾನವನ್ನು ತೆಗೆಯದೆ ಬೇರೆ ದಾರಿ ಇರಲಿಲ್ಲ" ಎಂದು ರೋದಿಸುತ್ತಾ ಮಗಳನ್ನು ಆಲಂಗಿಸಿ ಹೊರಟು ಹೋಗುತ್ತಾಳೆ. ತಾಯಿಯಿಂದ ಬಂದಂತಹ ಒಂದೊಂದು ಮಾತುಗಳನ್ನು ಯೋಚಿಸುತ್ತಿದಂತೆ ಸಮೀನಾಳಿಗೆ ನಿದ್ದೆ ಆವರಿಸುತ್ತಿದೆ ಮತ್ತು ಅವಳು ನಿದ್ದೆಗೆ ಜಾರಿಕೊಳ್ಳುತ್ತಾಳೆ...

ಭೂಮಿಯಲ್ಲಿರುವುದನ್ನೆಲ್ಲ ನಿಮಗಾಗಿಯೇ ಸೃಷ್ಟಿಸಿದವನು ಆತನೇ.
ಬಳಿಕ ಗಗನದೆಡೆ ಗಮನ ಹರಿಸಿ ಸಪ್ತ ಗಗನಗಳಿಗೆ ರೂಪುಕೊಟ್ಟನು.
ಆತನು ಸಕಲ ವಿಷಯಗಳ ಜ್ಞಾನಿಯಾಗಿರುತ್ತಾನೆ.
(ಕುರ್‌ಆನ್ 2:29)

*Managing Partner*

**RAJA BRICKS & TILE INDUSTRIES**

*P.B. No. 34, Rajanagar, Sira Road,*
*Tumkur - 572 101. Karnataka, India*
*Ph: 0816 - 6531933/44/55, Fax: 0816 - 2211633*

## ಸನ್ಮಾರ್ಗ 25 ವರ್ಷಗಳ ಹಿಂದೆ

❖ ಸಂಪುಟ: 8 ❖ ಸಂಚಿಕೆ: 18-19 ❖ 1985 ಆಗೋಸ್ತ್ 18 - 31

### ಜಮಾತೆ ಇಸ್ಲಾಮೀ ಸಂದೇಶ

ಆಧುನಿಕ ಲೋಕದ ಉನ್ನತ ಇಸ್ಲಾಮೀ ತತ್ವ ಚಿಂತಕ ಹಾಗೂ ವಿದ್ವಾಂಸರಾಗಿದ್ದ ದಿ| ಮೌಲಾನಾ ಅಬುಲ್ ಆಲಾ ಮೌದೂದಿಯವರ ಕರೆಗೆ ಓಗೊಟ್ಟು 1941 ಆಗಸ್ಟ್ 26ರಂದು ಲಾಹೋರಿನಲ್ಲಿ ಜರಗಿದ ಸಮ್ಮೇಳನದಲ್ಲಿ ದೇಶದ ನಾನಾ ಭಾಗಗಳ ಸುಮಾರು 75 ಗಣ್ಯ ವ್ಯಕ್ತಿಗಳು ಭಾಗವಹಿಸಿದ್ದರು. ಧರ್ಮ ಪಂಡಿತರು, ಪದವೀಧರರು, ತತ್ವಚಿಂತಕರು, ವ್ಯಾಪಾರಿಗಳು, ಕಾರ್ಮಿಕರು, ಬರಹಗಾರರು, ಉದ್ಯೋಗಿಗಳು ಇತ್ಯಾದಿ ಎಲ್ಲ ವರ್ಗದ ಪ್ರಮುಖ ವ್ಯಕ್ತಿಗಳು ಅದರಲ್ಲಿ ಉಪಸ್ಥಿತರಿದ್ದರು. ಧರ್ಮ ಸಂಸ್ಥಾಪನೆಯ ಘನ ಕರ್ತವ್ಯವನ್ನು ಧ್ಯೇಯವಾಗಿರಿಸಿ, ಇಸ್ಲಾಮಿನ ಹಾದಿಯಲ್ಲಿ ಒಗ್ಗಟ್ಟಿನಿಂದ ಕಾರ್ಯೋನ್ಮುಖವಾಗುವೆವೆಂದು ಅವರು ಅಲ್ಲಾಹನನ್ನು ಸಾಕ್ಷಿಯಾಗಿರಿಸಿ ಪಣತೊಟ್ಟರು. ಆ ಮೂಲಕ ಇಸ್ಲಾಮೀ ಸಂಘಟನೆಯೊಂದು ಉದಯವಾಯಿತು. ಅದುವೇ ಜಮಾಅತೆ ಇಸ್ಲಾಮೀ. ದೇಶ ವಿಭಜನೆಯ ಬಳಿಕ ಹೊಸ ಸಂವಿಧಾನದೊಂದಿಗೆ 'ಜಮಾಅತೆ ಇಸ್ಲಾಮೀ ಹಿಂದ್' ಎಂಬ ಹೆಸರಿನಲ್ಲಿ ಅದನ್ನು ಪುನರ್‌ಸಂಘಟಿಸಲಾಯಿತು...

ಜಮಾಅತೆ ಇಸ್ಲಾಮಿಯು ದೇಶದ ಮುಸಲ್ಮಾನ ಬಾಂಧವರಿಗೆ ಅವರ ಜೀವಿತೋದ್ದೇಶವನ್ನು ಜ್ಞಾಪಿಸಿಕೊಡುತ್ತದೆ. ಹುಸಿ ಉದ್ದೇಶಗಳನ್ನಿರಿಸಿಕೊಂಡ ಮುಸಲ್ಮಾನನು ತನ್ನ ನೈಜ ರೂಪವನ್ನು ಎಂದೂ ಪ್ರತಿಬಿಂಬಿಸಲಾರನು. ಪವಿತ್ರ ಕುರ್‌ಆನ್‌ನಲ್ಲಿ ಮುಸಲ್ಮಾನರ ಜೀವನೋದ್ದೇಶವನ್ನು ಸ್ಪಷ್ಟವಾಗಿ ವಿವರಿಸಲಾಗಿದೆ. ಇಸ್ಲಾಮನ್ನು ನೈಜ ರೀತಿಯಲ್ಲಿ ಅನುಸರಿಸಬೇಕು. ಅದನ್ನು ಇತರರಿಗೆ ತಿಳಿಯಪಡಿಸುವ ತಮ್ಮ ಘನ ಜವಾಬ್ದಾರಿಕೆಯನ್ನು ಈಡೇರಿಸಬೇಕು. ನಡೆನುಡಿಗಳಲ್ಲಿ ಜಗತ್ತಿಗೆ ಇಸ್ಲಾಮಿನ ಜೀವಂತ ಮಾದರಿಯಾಗಬೇಕು. ಇದುವೇ ನಮ್ಮ ಜೀವನೋದ್ದೇಶ. ಪ್ರವಾದಿವರ್ಯರು(ಸ) ಈ ಉದ್ದೇಶ ಸಾಧನೆಗಾಗಿ ಸಹಿಸಿದ ತ್ಯಾಗಗಳಿಗೆ ಇತಿಹಾಸವು ಸಾಕ್ಷಿಯಾಗಿದೆ...

ದೇಶದ ಮುಸ್ಲಿಮೇತರ ಬಾಂಧವರ ಮುಂದೆಯೂ ಜಮಾಅತೆ ಇಸ್ಲಾಮಿಯು ಮೂರು ವಿಚಾರಗಳನ್ನು ಮಂಡಿಸುತ್ತದೆ. ಮೊದಲನೆಯದಾಗಿ ಎಲ್ಲ ಪ್ರವಾದಿಗಳೂ ತಮ್ಮ ಸಮುದಾಯದ ಮುಂದಿರಿಸಿದ "ಓ ಮಾನವರೇ! ನಿಮ್ಮನ್ನು ಸೃಷ್ಟಿಸಿದ ನಿಮ್ಮ ಪ್ರಭುವಿನ ದಾಸ್ಯಾನುಸರಣೆಯನ್ನು ಸ್ವೀಕರಿಸಿರಿ" ಎಂಬ ಕರೆಯನ್ನು ನೀಡುತ್ತಿದೆ. ನೀವೂ ದೇವದಾಸರು. ಆದ್ದರಿಂದ ಪ್ರತೀಯೊಂದು ಕಾರ್ಯವನ್ನೂ ದೇವಾದೇಶಗಳಿಗೆ ಅನುಗುಣವಾಗಿ ಮಾಡಿರಿ. ಸಮಸ್ತ ಮಾನವರ ಮಾರ್ಗದರ್ಶಿಯಾಗಿರುವ ದೈವಿಕ ಗ್ರಂಥವನ್ನು ಅನುಸರಿಸಿದರೆ ನೀವು ಮನಸ್ಸಿನ ದಾಸ್ಯದಿಂದ ಮುಕ್ತಿ ಪಡೆದು ಜೀವನವನ್ನು ರೂಪಿಸಬಲ್ಲಿರಿ. ಸಂಪ್ರದಾಯ ಮತ್ತು ರಾಜಕೀಯ ಶಕ್ತಿಗಳ ದಾಸ್ಯತನವನ್ನು ತೊರೆದು ದೇವ ದಾಸ್ಯವನ್ನು ಕೈಗೊಂಡರೆ ಅತ್ಯಂತ ಸುದೈವಿ ವ್ಯಕ್ತಿಯಾಗುವಿರಿ. ಈ ಸಂದೇಶದ ಕರೆಯಿಂದ ಅದೆಷ್ಟೋ ಮಂದಿ ಮುಸ್ಲಿಮೇತರರು ಸಮಾಜ ಸೇವೆ ಮತ್ತು ಸತ್ಯ ಸಂದೇಶ ಪ್ರಚಾರ ಕಾರ್ಯದಲ್ಲಿ ಜಮಾಅತ್‌ನೊಂದಿಗೆ ಸಹಕರಿಸುತ್ತಿದ್ದಾರೆ...

# ಐಟಾ ವಿಚಾರಗೋಷ್ಠಿ



**ಬಿ.ಸಿ.ರೋಡು:** ಆಲ್ ಇಂಡಿಯಾ ಟೀಚರ್ಸ್ ಎಸೋಸಿಯೇಶನ್ (AIITA) ಇದರ ವತಿಯಿಂದ ದೇಶವ್ಯಾಪಿ ಪರಿಚಯ ಅಭಿಯಾನದ ಅಂಗವಾಗಿ 'ಆಧುನಿಕ ಶಿಕ್ಷಣ ವ್ಯವಸ್ಥೆ ಮತ್ತು ಶಿಕ್ಷಕರು' ಎಂಬ ವಿಷಯದಲ್ಲಿ ಜುಲೈ 11ರಂದು ಇಲ್ಲಿನ ಲಯನ್ಸ್ ಕ್ಲಬ್ ಮಂದಿರದಲ್ಲಿ ವಿಚಾರಗೋಷ್ಠಿ ಜರಗಿತು.

ಕಾವಳ ಪಡೂರು ಸರಕಾರಿ ಪ.ಪೂ. ಕಾಲೇಜಿನ ಅಧ್ಯಾಪಕರಾದ ಬಿ.ಎಂ. ಮುಹಮ್ಮದ್ ತುಂಬೆ ಮಾತನಾಡುತ್ತಾ, "ಅಧ್ಯಯನಶೀಲತೆಯನ್ನು ಮೈಗೂಡಿಸಿಕೊಂಡು ನಮ್ಮನ್ನು ನಾವು ತಿದ್ದಿಕೊಂಡರೆ ಸಮಾಜ ಬದಲಾಗುತ್ತದೆ. ಪ್ರಸಕ್ತ ಪರಿಸ್ಥಿತಿಯ ಬಗ್ಗೆ ಕಾಳಜಿ ವಹಿಸಿ ಶಿಕ್ಷಕರು ಸಂಘಟಿತರಾಗಬೇಕಾಗಿದೆ" ಎಂದರು.

ನಾರ್ಶ ಸರಕಾರಿ ಪ್ರೌಢ ಶಾಲೆಯ ಅಧ್ಯಾಪಕರಾದ ಅಬ್ದುಲ್ ರಝಾಕ್ ಅನಂತಾಡಿ ಮಾತನಾಡಿ, "ಮಕ್ಕಳನ್ನು ಶಾಲಾ ಕಲಿಕೆಯಲ್ಲಿ ಉತ್ತೀರ್ಣಗೊಳಿಸಿದರೆ ಸಾಲದು. ಜೀವನದ ಸಮಸ್ಯೆಗಳನ್ನು ಎದುರಿಸಲು ಅವರಿಗೆ ತಿಳುವಳಿಕೆ ನೀಡಬೇಕು. ಮಕ್ಕಳಿಗೆ ಅವರ ಹಕ್ಕುಗಳ ಕುರಿತು ಅರಿವು ಮೂಡಿಸಬೇಕು" ಎಂದರು. ಮೆಲ್ಕಾರು ಮಹಿಳಾ ಪಿ.ಯು. ಕಾಲೇಜಿನ ಪ್ರಾಂಶುಪಾಲರಾದ ಬಿ.ಕೆ. ಅಬ್ದುಲ್ಲತೀಫ್ ಸಂದರ್ಭೋಚಿತವಾಗಿ ಮಾತನಾಡಿದರು.

ಅಧ್ಯಕ್ಷತೆ ವಹಿಸಿದ್ದ ಕರಾವಳಿ ಕಾಲೇಜಿನ ಉಪನ್ಯಾಸಕರಾದ ಮುಬೀನ್ ಉಳ್ಳಾಲ್ ಮಾತನಾಡಿ, "ಶಿಕ್ಷಣ ರಂಗದಲ್ಲಿ ಕೋಮುವಾದ ಬೆಳೆದು ಬರುತ್ತಿರುವುದು ಅಪಾಯಕಾರಿಯಾಗಿದೆ. ನಮ್ಮ ವಿದ್ಯಾರ್ಥಿಗಳು ಸಮಾಜ ಸೇವಕರಾಗಬೇಕು ಎಂಬ ಕಾಳಜಿ ನಮ್ಮಲ್ಲಿರಬೇಕು. ನಾವು ಚಾರಿತ್ರ್ಯದ ಶಿಕ್ಷಣವನ್ನು ನೀಡ ಬೇಕಾದ ಅಗತ್ಯವಿದೆ" ಎಂದರು.

ಮುಹಮ್ಮದ್ ಮೌಲವಿ ಕುರ್‌ಆನ್ ಪಠಿಸಿದರು. ಅಮಾನುಲ್ಲಾ ಖಾನ್ ತರೀಕೆರೆ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಲೀಮ್ ಬೋಳಂಗಡಿ ಕಾರ್ಯಕ್ರಮ ನಿರೂಪಿಸಿ ಧನ್ಯವಾದವಿತ್ತರು.

# ಉನ್ನತ ದರ್ಜೆ

**ಗದಗ:** ಈ ಬಾರಿಯ ಸಿ.ಬಿ.ಎಸ್.ಇ. ದ್ವಿತೀಯ ಪಿ.ಯು. ಪರೀಕ್ಷೆಯಲ್ಲಿ ಇಲ್ಲಿನ ನವೋದಯ ವಿದ್ಯಾಲಯದ ವಿದ್ಯಾರ್ಥಿ ಮುಹಮ್ಮದ್ ಮುಝಾಫರ್ ಹೆಚ್. ತಹಸಿಲ್ದಾರ್ 95% ಅಂಕ ಪಡೆದು ಉನ್ನತ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. ಈತ ಇಲ್ಲಿನ ಹಸನ್ ಸಾಬ್ ಎಸ್. ತಹಸಿಲ್ದಾರ್ ಅವರ ಪುತ್ರ.



# ಪ್ರತಿನಿಧಿ ಬೇಕಾಗಿದ್ದಾರೆ

'ಅನುಪಮ' ಮಹಿಳಾ ಮಾಸಿಕಕ್ಕೆ ರಾಜ್ಯದಾದ್ಯಂತ ಚಂದಾ ಸಂಗ್ರಹಿಸಲು ಹಾಗೂ ಜಾಹೀರಾತು ಸಂಗ್ರಹಿಸಲು ಅನುಭವೀ ಪ್ರತಿನಿಧಿಯೊಬ್ಬರು ಬೇಕಾಗಿದ್ದಾರೆ. ಆಕರ್ಷಕ ವೇತನ ನೀಡಲಾಗುವುದು. ಎಸ್.ಐ.ಓ. ಹಾಗೂ ಜಮಾಅತ್ ಕಾರ್ಯಕರ್ತರಿಗೆ ಪ್ರಾಶಸ್ತ್ಯ.

**ಸಂಪರ್ಕಿಸಿರಿ:**

**ಅನುಪಮ ಮಹಿಳಾ ಮಾಸಿಕ**

**ಹಿದಾಯತ್ ಸೆಂಟರ್, ಬೀಬಿ ಅಲಾಬಿ ರಸ್ತೆ,**

**ಮಂಗಳೂರು– 575001. ಮೊಬೈಲ್ 9901318820.**

# ಮಹಿಳಾ ತರಬೇತಿ ಶಿಬಿರ

**ಮಂಗಳೂರು: ಜ.ಇ. ಹಿಂದ್ ಮಂಗಳೂರು ಮಹಿಳಾ ಘಟಕದ ವತಿಯಿಂದ ಜುಲೈ 12ರಿಂದ 17ರ ತನಕ ನಗರದ ಹಿದಾಯತ್ ಸೆಂಟರ್‌ನಲ್ಲಿ ಮಹಿಳಾ ತರಬೇತಿ ಶಿಬಿರ ಜರಗಿತು. ವಿವಿಧ ವಿಷಯಗಳಲ್ಲಿ ಬಾಷಣಗಳು ಉಪನ್ಯಾಸಗಳೂ ಜರಗಿದವು. ಮುಖ್ಯ ಭಾಷಣಗಾರರಾಗಿ ಹುಮೈರಾ, ಝೀನತ್, ಶಹನಾಝ್ ಎಂ., ಸಫಿಯ್ಯ, ಲುಬ್ನಾ, ಝುಕಿಯ್ಯ, ಕಮರುನ್ನಿಸಾ, ಶಬಾನಾ, ಝಿನತ್, ರಹೀನಾ, ಝೈನಬ್, ಸಾಜಿದಾ ತಬಸ್ಸುಮ್, ಸಬೀಹಾ ಫಾತಿಮಾ, ಶಮೀರಾ ಜಹಾನ್, ಕುಲ್ಸೂಮ್, ಸಾಜಿದಾ ಮೂಮಿನ್, ಮಹಜಬೀನ್, ಆಯಿಶಾ ನೂರ್, ಮುಮ್ತಾಝ್ ವಾಮಂಜೂರು, ಡಾ। ಅಂಜುಮ್, ಮುನೀರಾ ಭಾಗವಹಿಸಿದ್ದರು. ಸಈದ್ ಇಸ್ಮಾಯಿಲ್‌ರವರು ಸಮಾರೋಪ ಭಾಷಣ ಮಾಡಿದರು.**

# ನಿಧನ

**ಮಂಗಳೂರು: ಇಲ್ಲಿನ ಜಪ್ಪು ಕುಟ್ಪಾಡಿಯ ಬದ್ರಿಯಾ ಜುಮಾ ಮಸೀದಿಯ ಮಾಜಿ ಅಧ್ಯಕ್ಷ 'ಆಸ್ಮಾಟೇಡರ್ಸ್' ವ್ಯಾಪಾರ ಮಳಿಗೆ ಮಾಲಕ ಹಾಜಿ ಕೆ.ಎಸ್. ಮುಹ್ಯುದ್ದೀನ್ ಸಾಹೆಬ್(84) ಅವರು ಜುಲೈ 18ರಂದು ನಿಧನರಾದರು. ಅವರು ಪತ್ನಿ, ಎಂಟು ಗಂಡು ಮತ್ತು 6 ಹೆಣ್ಣು ಮಕ್ಕಳನ್ನೂ ಅಪಾರಬಂಧು ಬಾಂಧವರನ್ನೂ ಅಗಲಿದ್ದಾರೆ. ಅಲ್ಲಾಹನು ಅವರಿಗೆ ಮಗ್‌ಫಿರತ್ ಮತ್ತು ಮರ್‌ಹಮತ್ ನೀಡಲಿ.**

# ಸಾರ್ವಜನಿಕ ಸಭೆ

**ಬೆಂಗರೆ ಕಸ್ಬಾ:** "ಈ ಜಗತ್ತಿನ ಜನರು ಯಾವುದಾದರೂ ಒಂದು ಧ್ಯೇಯದ ಯಶಸ್ಸಿಗಾಗಿ ಬದುಕುತ್ತಾರೆ. ಅದಕ್ಕಾಗಿ ಯಾವ ತ್ಯಾಗ ಬಲಿದಾನಕ್ಕೂ ಸಿದ್ದರಾಗಿರುತ್ತಾರೆ. ಮುಸ್ಲಿಮರಾದ ನಮಗೂ ಒಂದು ಸಿದ್ಧಾಂತವಿದೆ. ಅದರೆ ಅದಕ್ಕಾಗಿ ನಾವು ತ್ಯಾಗಕ್ಕೆ ಸಿದ್ಧರಾಗುತ್ತಿಲ್ಲ ಎಂಬುದು ದುಃಖಕರ. ನಮ್ಮ ಮೇಲಿರುವ ಹೊಣೆಗಾರಿಕೆಗಳ ಕುರಿತು ನಾವು ಅಜ್ಞರಾಗಿದ್ದೇವೆ. ಕುರ್‌ಆನ್‌ನಲ್ಲಿ ತಿಳಿಸಿರುವ ಆ ಹೊಣೆಗಾರಿಕೆಗಳ ಬಗ್ಗೆ ಅರಿತು ಅದನ್ನು ಮೈಗೂಡಿಸಿಕೊಳ್ಳಬೇಕಾಗಿದೆ. ಆಗ ಅದಕ್ಕೆ ದೇವನ ಅನುಗ್ರಹವೂ ದೊರೆಯುತ್ತದೆ." ಎಂದು ಬಿ.ಎಸ್. ಶರ್ಫುದ್ದೀನ್ ಬಣಕಲ್ ಹೇಳಿದರು.

ಅವರು ಇತ್ತೀಚೆಗೆ ಇಲ್ಲಿನ ಅನಸ್ ಬಿನ್ ಮಾಲಿಕ್ ಜುಮಾ ಮಸೀದಿಯಲ್ಲಿ ಜ.ಇ. ಬೆಂಗರೆ ವರ್ತುಲ ಏರ್ಪಡಿಸಿದ್ದ ಸಾರ್ವಜನಿಕ ಭಾಷಣ ಕಾರ್ಯಕ್ರಮದಲ್ಲಿ ಸಾರ್ವಜನಿಕರನ್ನುದ್ದೇಶಿಸಿ ಮಾತನಾಡುತ್ತಿದ್ದರು.

ಸ್ಥಾನೀಯ ವರ್ತುಲದ ಸಂಚಾಲಕ ಅಬ್ದುಲ್ ಕರೀಮ್ ಸ್ವಾಗತಿಸಿದರು. ಆರಂಭದಲ್ಲಿ ಅಬ್ದುಲ್ಲತೀಫ್ ಆಲಿಯಾ ಕುರ್‌ಆನ್ ಪಠಿಸಿದರು. ಅಬ್ದುಸ್ಸಮದ್ ಬೆಂಗರೆ ಕಾರ್ಯಕ್ರಮ ನಿರೂಪಿಸಿ ಧನ್ಯವಾದವಿತ್ತರು.

# ಜು. 23: ಸಾರ್ವಜನಿಕ ಸಭೆ

**ಪಾಣೆಮಂಗಳೂರು: ಇಲ್ಲಿನ ಬಸ್ಸು ನಿಲ್ದಾಣದ ಬಳಿಯಿರುವ ಅಲ್ ಹಸನಾತ್ ಮಸೀದಿಯಲ್ಲಿ ಜ.ಇ. ಹಿಂದ್ ಸ್ಥಳೀಯ ಶಾಖೆಯ ಆಶ್ರಯದಲ್ಲಿ 'ವಿಸ್ಮಯಕಾರಿ ಕುರ್‌ಆನ್ ಮತ್ತು ಮುಸ್ಲಿಮರು' ಎಂಬ ವಿಷಯದಲ್ಲಿ ಜುಲೈ 23ರಂದು ಮಗ್ರಿಬ್ ನಮಾಝ್ ಬಳಿಕ ಜ। ಉಮರ್ ಮೌಲವಿ ಮಡಿಕೇರಿ ಪ್ರವಚನ ನೀಡಲಿದ್ದಾರೆ.**

**ಸರ್ವ ಸ್ತ್ರೀ–ಪುರುಷರೂ ಇದರ ಪ್ರಯೋಜನ ಪಡೆಯಲು ಪ್ರಕಟಣೆಯಲ್ಲಿ ಕೋರಲಾಗಿದೆ.**

# ಜಿ.ಐ.ಓ. ಅಭಿಯಾನದ ಸಮಾರೋಪ

**ಉಳ್ಳಾಲ:** ಜಿ.ಐ.ಓ. ಉಳ್ಳಾಲ ಘಟಕದ ವತಿಯಿಂದ ವುಮೆನ್ಸ್ ಇಸ್ಲಾಮಿಕ್ ಕಾಲೇಜಿನಲ್ಲಿ ಅಭಿಯಾನದ ಸಮಾರೋಪ ಸಮಾರಂಭವನ್ನು ಏರ್ಪಡಿಸಲಾಯಿತು. ಜಿ.ಐ.ಓ. ದಕ್ಷಿಣ–ಕನ್ನಡ ಜಿಲ್ಲಾ ಸಂಚಾಲಕಿ ರುಕ್ಸಾನ ಮುಖ್ಯ ಭಾಷಣ ಮಾಡಿದರು. ಆಯಿಶಾ ಪ್ರಾಸ್ತಾವಿಕವಾಗಿ ಮಾತನಾಡಿದರು. ಆರಿಫಾ ಕುರ್‌ಆನ್ ಪಠಿಸಿದರು. ಜಿ.ಐ.ಓ. ಕಾರ್ಯಕರ್ತೆಯರು ಜಿ.ಐ.ಓ. ತರಾನ ಹಾಡಿದರು ಹಾಗೂ ಅಫೀಫಾ ಕಾರ್ಯಕ್ರಮ ನಿರೂಪಿಸಿದರು.




ಓದಿರಿ... ಚಂದಾದಾರರಾಗಿರಿ...

**ಆಗೋಸ್ಟ್ ಸಂಚಿಕೆ ಇದೀಗ ಮಾರುಕಟ್ಟೆಯಲ್ಲಿ**

ಲೇಖನಗಳು

- ಏನಾದರೂ ವಿಶೇಷವಿದೆಯೇ? 12
- ಮಕ್ಕಳಿಗೆ ಹಣ ನೀಡಬೇಕೇ? 15
- ದುಬೈ ವೈಶಾಖ 17
- ಮಹಿಳೆಯರೇ ಆಗಮಿಸುತ್ತಿದೆ ರಮಝಾನ್..! 21
- ಮಕ್ಕಳಲ್ಲಿ ಅಸ್ತಮಾ 27

| ಚಂದಾ ವಿವರ | ವಾರ್ಷಿಕ | ದ್ವೈವಾರ್ಷಿಕ | ಬಿಡಿ ಪ್ರತಿ |
|---|---|---|---|
| ಭಾರತದಲ್ಲಿ | 130 | 260 | 12 |
| ಗಲ್ಫ್ ರಾಷ್ಟ್ರಗಳಲ್ಲಿ | 500 | 1,000 | - |

ಕಚೇರಿ ವಿಳಾಸ: **ಅನುಪಮ** ಮಹಿಳಾ ಮಾಸಿಕ

ಹಿದಾಯತ್ ಸೆಂಟರ್ ಬೀಬಿ ಅಲಾಬಿ ರಸ್ತೆ ಮಂಗಳೂರು - 575001

☎: 0824 - 2410358 email: anupamamasika@gmail.com



ಅಲ್ಲಾಹನ ಸಂತುಷ್ಟಿಗಾಗಿ 'ಹಜ್ಜ್' ಮತ್ತು 'ಉಮ್ರಾ'ಗಳ ಸಂಕಲ್ಪ ಮಾಡಿದಾಗ ಅದನ್ನು ಪೂರ್ತಿಗೊಳಿಸಿರಿ. (ಪವಿತ್ರ ಕುರ್‌ಆನ್: 2:196)

AIT International Travels

K.M. Haris, Abdul Samad

Aysha INTERNATIONAL TRAVELS

ಆಯಿಶಾ ಇಂಟರ್‌ನ್ಯಾಶನಲ್ ಟ್ರಾವೆಲ್ಸ್

RAMZAN UMRAH PACKAGE
1 to 15 DAYS - 65,000/-
LAST 15 DAYS - 75,000/-
1 MONTH - 85,000/-

HAJ & UMRAH
BOOKING NOW
SPECIAL DISCOUNT

HAJ PACKAGE
First Class 1,95,000/-
Second Class 1,75,000/-

• Domestic & International Air Tickets • Passport Service • Emigration • Visit Visa • Visa Clearence

Sadananda Towers Annex, 1st Floor, D-No. 2-2-62B7, City Bus Stand, Udupi-576101.
Ph: 0820-4294313 Fax: 0820-4294313 Mob: 9844970812, 9880172472, 9620441544
E-mail : haris_yachi@yahoo.com




To.

SANMARGA KANNADA WEEKLY
Post Box No. 16, Hidayath Centre, Mangalore - 575 001 ☎: 2422786
2010 ಜುಲೈ 25 – 31 / 1431 ಶಅಬಾನ್ 11 – 17




'Registered' R.No. KA/SK/MNG/129/2009-11 Licenced to post without pre payment L No. SK/MNG/WPP-10/09-11 Posted at R.M.S. Mangalore on 20-07-2010 (Tuesday) & 22-07-2010 (Thursday)

# ಕಡಬ: ಮಾನಸಿಕ ರೋಗಿಗಳಿಗೆ ನೆರವು



**ಪುತ್ತೂರು:** ಇಲ್ಲಿನ ಕಡಬ ಸಮೀಪದ ಕುಟ್ರುಪಾಡಿ ಗ್ರಾಮ ಪಂಚಾಯತ್‌ಗೆ ಒಳಪಟ್ಟ ಕೇಪು ಎಂಬಲ್ಲಿನ ಇಬ್ರಾಹೀಮ್ ಸಾಹೇಬರ ಕುಟುಂಬವು ಮಾನಸಿಕ ಅಸ್ವಸ್ಥತೆಯಿಂದ ಕೆಲವಾರು ವರ್ಷಗಳಿಂದ ಬಳಲುತ್ತಿದೆ. ನಾಲ್ವರು ಮಕ್ಕಳಲ್ಲಿ ಮೂವರು ಹೆಣ್ಮಕ್ಕಳು ಹಾಗೂ 30 ವರ್ಷದ ಓರ್ವ ಯುವಕನೂ ಅಲ್ಲದೆ ಇವರ ತಾಯಿಯೂ ಮಾನಸಿಕ ರೋಗ ಪೀಡಿತರಾಗಿರುತ್ತಾರೆ. ಈ ಕುರಿತು ಇತ್ತೀಚೆಗೆ ಮಾಧ್ಯಮಗಳಲ್ಲಿ ವರದಿಯಾಗಿತ್ತು.

ಮಾಧ್ಯಮಗಳ ವರದಿಗೆ ಸ್ಪಂದಿಸಿದ ಜಮಾಅತೆ ಇಸ್ಲಾಮೀ ಹಿಂದ್ ಮಂಗಳೂರು ಇದರ ಸಮಾಜ ಸೇವಾ ಘಟಕದ ಕಾರ್ಯಕರ್ತರು, ಕಡಬ ಮತ್ತು ಮೂಡಿಗೆರೆಯ ಸಮಾಜ ಸೇವಕರೊಂದಿಗೆ ಸೇರಿ ರೋಗಿಗಳನ್ನು ಮಂಗಳೂರಿನ ಫಾದರ್ ಮುಲ್ಲರ್ ಆಸ್ಪತ್ರೆಗೆ ದಾಖಲಿಸಿದ್ದಾರೆ. ಮರುದಿನ ಜ.ಇ. ಸಮಾಜ ಸೇವಾ ಘಟಕದ ಕಾರ್ಯಕರ್ತರ ತಂಡವು ಈ ಅಸ್ವಸ್ಥ ಕುಟುಂಬದ ಮನೆಗೆ ಭೇಟಿ ನೀಡಿ ಸ್ಥಳೀಯರಿಂದ ಮಾಹಿತಿಗಳನ್ನು ಸಂಗ್ರಹಿಸಿತು. ಐವರು ಅಸ್ವಸ್ಥರಲ್ಲಿ ಇದೀಗ ನಾಲ್ವರು ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಸಮಾಜಸೇವಾ ಘಟಕದ ಕಾರ್ಯದರ್ಶಿ ಸಿದ್ದೀಕ್ ಜಕ್ರಿಬೆಟ್ಟು ತಿಳಿಸಿದ್ದಾರೆ.

# ಮುಸ್ಲಿಂ ಮಹಿಳೆಯರಿಗೆ ಅನುದಾನ

**ಮಂಗಳೂರು: ಕರ್ನಾಟಕ ಸರಕಾರದ ವಕ್ಫ್ ಮಹಿಳಾ ಅಭಿವೃದ್ಧಿ ಪ್ರತಿಷ್ಠಾನದ ವತಿಯಿಂದ ಹೃದಯ, ಕಿಡ್ನಿ, ಮೆದುಳು, ಕ್ಯಾನ್ಸರ್, ಟಿ.ಬಿ. ಹಾಗೂ ದೊಡ್ಡ ಶಸ್ತ್ರ ಚಿಕಿತ್ಸೆಗಳಿಗೆ ಒಳಪಡಬೇಕಾದ ಕಾಯಿಲೆಗಳಿಗೆ ಅನುದಾನ ನೀಡಲಾಗುವುದು. ನಿಗದಿತ ಅರ್ಜಿ ನಮೂನೆಯೊಂದಿಗೆ ಆದಾಯ ಪ್ರಮಾಣ ಪತ್ರವನ್ನು (ವಾರ್ಷಿಕ ಆದಾಯ 1,20,000ಕ್ಕಿಂತ ಕಡಿಮೆ ಇರಬೇಕು) ಸಂಬಂಧಪಟ್ಟ ತಹಶೀಲ್ದಾರ್‌ರಿಂದ ಪಡೆದು ದೃಢೀಕೃತ ಜೆರಾಕ್ಸ್ ಪ್ರತಿ ಅಥವಾ ಬಿಪಿಎಲ್ ಕಾರ್ಡ್‌ನ ಜೆರಾಕ್ಸ್ ಪ್ರತಿಯನ್ನು ಸಲ್ಲಿಸಬೇಕು. ಕಾಯಿಲೆಯ ಚಿಕಿತ್ಸೆಗಾಗಿ ಸಂಬಂಧಿತ ಆಸ್ಪತ್ರೆ ಅಥವಾ ನರ್ಸಿಂಗ್ ಹೋಮ್‌ನಿಂದ ಅಂದಾಜು ವೆಚ್ಚದ ಮೂಲ ಪತ್ರವನ್ನು ಸಲ್ಲಿಸಬೇಕು. ವಿಶೇಷ ಪ್ರಕರಣಗಳಲ್ಲಿ ಈಗಾಗಲೇ ರೋಗಿಯು ಚಿಕಿತ್ಸೆಯನ್ನು ಪಡೆದು ಮೂಲ ಬಿಲ್‌ಗಳನ್ನು ಮೂರು ತಿಂಗಳೊಳಗೆ ಸಲ್ಲಿಸಿ ಅನುದಾನ ಪಡೆಯಬಹುದು. ಪರಿಹಾರ ಮೊತ್ತ ಗರಿಷ್ಠ ರೂ. 25,000. ಹಣವನ್ನು ಚೆಕ್ ಮುಖಾಂತರ ಸಂಬಂಧಪಟ್ಟ ಆಸ್ಪತ್ರೆಗೆ ಕಳುಹಿಸಲಾಗುವುದು. ರೋಗಿ ಅಥವಾ ಅವರ ಪೋಷಕರು ಮಾತ್ರ ಅರ್ಜಿ ಸಲ್ಲಿಸಬಹುದು. ಅರ್ಜಿ ನಮೂನೆಯನ್ನು www.kswwf.com ಮೂಲಕ ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ;**

**ನಂ. 84/ಎ, ಸಾದತ್ ಹಜ್ಜ್ ಹೌಸ್, ಮೊದಲನೆಯ ಮಹಡಿ, ರಿಚ್ಮಂಡ್ ರೋಡ್, ಬೆಂಗಳೂರು ಅಥವಾ ದೂ.ಸಂ. 22117533ನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.**

# 'ಗಡಿ' 'ಬಿಡಿ' (ಮುಖಪುಟದಿಂದ)

**ಬೆಳಗಾವಿಯ ಜನರಿಗೆ ತಮ್ಮ ಹೆಸರಿನಲ್ಲಿ ರಾಜಕಾರಣಿಗಳು ನಡೆಸುವ ಗಡಿ-ಭಾಷೆ ದೊಂಬರಾಟವೇ ಅರ್ಥವಾಗಿಲ್ಲ. ಬೆಳಗಾವಿಯ ಜನ ಕಳೆದ ಚುನಾವಣೆಯಲ್ಲಿ ಏಕೀಕರಣ ಸಮಿತಿಯನ್ನು ಸೋಲಿಸುವ ಮೂಲಕ ಈ ವಿಚಾರವನ್ನು ಮೀರಿ ನಿಂತಿರುವ ಸಂದೇಶವನ್ನೂ ನೀಡಿದ್ದಾರೆ. ರಾಜಕಾರಣಿಗಳು ಅಥವಾ ಭಾಷಾ ಹೋರಾಟಗಾರರು ಏನೇ ಹೇಳಿದರೂ ಬೆಳಗಾವಿಯಲ್ಲಿ ಸುಮಾರಾಗಿ ಎರಡೂ ಭಾಷೆಗಳನ್ನು ಬಲ್ಲ ಮತ್ತು ಆಡುವ ಜನರು ಸಾಕಷ್ಟಿದ್ದಾರೆ. ಅವರು ಭಾಷಾ ಸೌಹಾರ್ದತೆಯನ್ನು ತೋರಿಸಿದಂತೆ ಸೌಹಾರ್ದಯುತವಾಗಿ ಬದುಕುವುದಕೂ ಅಡ್ಡಿಯೆನಿಸುವುದಿಲ್ಲ. ಆದರೂ ಕೂಡಾ ಇವರ ಮೇಲೆ ಗಡಿ ಹೆಸರಿಟ್ಟು ಕುಣಿದಾಡುವುದಕ್ಕೆಂಥ ಅರ್ಥವನ್ನು ಕಲ್ಪಿಸಬಹುದು?**

**ನಿಜಕ್ಕಾದರೆ ಮಹಾರಾಷ್ಟ್ರ ಏಕೀಕರಣ ಸಮಿತಿಯು ಜನರ ಮೇಲೆ ಭಾಷೆಯ ಅಡ್ಡಗೋಡೆಯನ್ನು ಕಟ್ಟುವ ಕೆಲಸಕ್ಕಿಳಿದಿದೆ. ಮಹಾರಾಷ್ಟ್ರದ ಎಲ್ಲ ರಾಜಕೀಯ ಪಕ್ಷಗಳು ಅದನ್ನು ನೀರು ಸುರಿದು ಬೆಳೆಸುತ್ತಾ ಬಂದಿವೆ. ಒಂದರ್ಥದಲ್ಲಿ ಏಕೀಕರಣ ಸಮಿತಿಯನ್ನು ಮುಂದಿರಿಸಿ ಭಾಷೆ ಮತ್ತು ಗಡಿ ವಿವಾದವನ್ನು ಬೆಳೆಸಿದವರು ಮಹಾರಾಷ್ಟ್ರದ ರಾಜಕಾರಣಿಗಳು. ಆದುದರಿಂದ ಈ ರಾಜಕಾರಣಿಗಳಿಗೆ ಬೆಳಗಾವಿ ಸಮಸ್ಯೆ ಬಗೆಹರಿಯಬೇಕಾಗಿಲ್ಲ. ಹಳ್ಳಿ ರಾಜಕೀಯದಿಂದ ಡೆಲ್ಲಿ ರಾಜಕೀಯದ ವರೆಗೂ ಪ್ರತಿ ಚುನಾವಣೆಗೂ ಅದು ವಿಷಯವಾಗಿ ಮುಂದುವರಿಯಬೇಕಾಗಿದೆ. ಇದೀಗ ಮಹಾರಾಷ್ಟ್ರದಲ್ಲಿ ರಾಜಕೀಯವಾಗಿ ದುರ್ಬಲವಾದ ಶಿವಸೇನೆ ಮತ್ತೆ ಬಲಿಷ್ಠವಾಗುವ ಕನಸ್ಸಿನಲ್ಲಿ ಏಕೀಕರಣ ಸಮಿತಿಯನ್ನು ಮುಂದಿಟ್ಟು ಗಡಿ ಸಮಸ್ಯೆಯನ್ನು ಕೆದಕುತ್ತಿದೆ ಎಂದು ಅರ್ಥವಾದದ್ದೇ ತಡ, ಶಿವಸೇನೆ ಪುನಃ ತಲೆ ಎತ್ತಲೇಬಾರದೆಂದು ಆಡಳಿತ ಪಕ್ಷ ಕಾಂಗ್ರೆಸ್ ಗಡಿ ವಿವಾದಕ್ಕೆ ಮುಗಿಬಿತ್ತು ಎಂಬುದು ಸಾಮಾನ್ಯರಿಗೂ ಅರ್ಥವಾಗಬಹುದು.**

**ತಾವೇ ನೇಮಿಸಿದಂಥ ಮಹಾಜನ್ ಆಯೋಗದ ತೀರ್ಪಿಗೂ ಬೆಲೆ ನೀಡದೆ ಕರ್ನಾಟಕದ 865 ಗ್ರಾಮಗಳನ್ನು ಕೇಳಿ ಕನ್ನಡ ಪ್ರಾಬಲ್ಯದ ಮಹಾರಾಷ್ಟ್ರದ 240 ಗ್ರಾಮಗಳನ್ನು ಕರ್ನಾಟಕಕ್ಕೆ ಬಿಟ್ಟುಕೊಡುವ ಮಾತಾಡಿದ ಅಲ್ಲಿನ ಮುಖ್ಯಮಂತ್ರಿಯ ಮಾತನ್ನು ಈ ಅರ್ಥದಲ್ಲಿ ಪರಿಗಣಿಸಬಹುದು. ಏನಿಲ್ಲದಿದ್ದರೂ ಇಷ್ಟು ಗ್ರಾಮಗಳಲ್ಲಿ ಕೇಂದ್ರಾಡಳಿತವನ್ನು ತನ್ನಿ ಎಂದು ಅವರು ಕೇಂದ್ರ ಸರಕಾರವನ್ನು ಒತ್ತಾಯಿಸುತ್ತಿರುವುದು ಕೂಡಾ ತನ್ನ ರಾಜಕೀಯ ಸಾಧನೆಯಾಗಿ ಮೆರೆಯುವುದಕ್ಕಾಗಿದೆ. ಸುಪ್ರೀಮ್ ಕೋರ್ಟಿನಲ್ಲಿ ಗಡಿ ಕುರಿತು ಕೇಸು ಹಾಕಿ, ಬೆಳಗಾವಿ, ಕಾರವಾರ, ಗುಲ್ಬರ್ಗಾ, ಬೀದರ್ ಜಿಲ್ಲೆಗಳ ಗಡಿ ಗ್ರಾಮಗಳು ಕರ್ನಾಟಕದ ಅವಿಭಾಜ್ಯ ಅಂಗ ಎಂದು ಕೇಂದ್ರ ಸರಕಾರ ಸುಪ್ರೀಮ್ ಕೋರ್ಟಿಗೆ ತಿಳಿಸಿದ ಮೇಲೆಯೂ ಮಹಾರಾಷ್ಟ್ರ ಸರಕಾರ ಮತ್ತು ಮುಖಂಡರಿಗೆ ಅರ್ಥವಾಗದ್ದು ರಾಜಕೀಯ ಹಿನ್ನೆಲೆಯಿಂದ ಮಾತ್ರವೇ ಆಗಿದೆ. ಹಾಗಾಗಿ ಗಡಿಗಿಂತಲೂ ಕ್ಷುದ್ರ ರಾಜಕೀಯವನ್ನು ಹದ್ದುಬಸ್ತಿನಲ್ಲಿಡುವುದಕ್ಕೆ ಹೋರಾಡಿದರೆ ಮಾತ್ರ ಪ್ರಾಮಾಣಿಕ ಹೋರಾಟವಾಗುತ್ತದೆ. ಆದರೆ ಹೋರಾಟಗಳು ಪರಸ್ಪರ ಬಡಿದಾಡುವುದು, ಮಸಿ ಬಳಿಯುವುದಕ್ಕೆ ಸೀಮಿತವಾದರೆ ರಾಜಕಾರಣಿಗಳಿಗೆ ತೊಂದರೆಯಾಗುವುದಿಲ್ಲ. ಅದರಿಂದ ಜನರ ಜೀವನದ ನೆಮ್ಮದಿ ಹಾಳಾಗುತ್ತದೆ.**

**ಹಿಂದಿನ ಮುಂಬೈ ಸರಕಾರವಿದ್ದಾಗ ಬೆಳಗಾವಿ ಅದರ ಭಾಗವಾಗಿತ್ತು. ಹಾಗಾಗಿ ಬೆಳಗಾವಿ ನಗರದಲ್ಲಿ ಹೆಚ್ಚು ಮರಾಠಿ ಮಾತಾಡುವವರಿರುವುದು ಅಸಹಜವೇನಲ್ಲ. ಈ ಅರ್ಥದಲ್ಲಿ ಕೂಡಾ ಬೆಳಗಾವಿ ಅಥವಾ ಗಡಿ ಭಾಗಗಳನ್ನು ಭಾಷಾಪರತೆಯಿಂದ ನೋಡುವುದು ಸಲ್ಲ. ಮಾತ್ರವಲ್ಲ, ಗಡಿ ವಿಚಾರಗಳನ್ನೆತ್ತುವುದೆಂದರೆ ದೇಶದ ಅಖಂಡತೆಯ ಕುರಿತು ಪ್ರಶ್ನಿಸಿದಂತಾಗುತ್ತದೆ. ಬೆಳಗಾವಿಯನ್ನು ಮಹಾರಾಷ್ಟ್ರದವರು ಕಿತ್ತುಕೊಳ್ಳಬೇಕೆಂದು ನೋಡುವಾಗ ನಾವೇನು ಕಡಿಮೆಯಿಲ್ಲ. ಕೇರಳದವರ ಕಾಸರಗೋಡನ್ನು ನಾವು ಕಿತ್ತುಕೊಳ್ಳಲು ನೋಡುತ್ತಿದ್ದೇವೆ ಎಂದು ಹೇಳುತ್ತಾರೆ. ನಿಜವಾಗಿ ಜನರನ್ನು ಭಾಷೆಯಾಧಾರಿತವಾಗಿ ಗುರುತಿಸುವುದು ತಪ್ಪು. ಕನ್ನಡಿಗ, ತಮಿಳ, ಮರಾಠಿ, ಮಲಯಾಳಿ ಈ ಯಾರದೇ ದೇಹದಲ್ಲಿ ಬೇರೆ ಬೇರೆ ಬಣ್ಣದ ರಕ್ತ ಹರಿಯುವುದಿಲ್ಲ. ಎಲ್ಲ ಭಾಷೆಯನ್ನು ಮಾತಾಡುವವನಿಗೂ ಒಂದೇ ಮಣ್ಣು, ಒಂದೇ ಗಾಳಿ, ಬೆಂಕಿ, ನೀರು ಬಳಸಲೇ ಬೇಕು. ಇವುಗಳೇನಾದರೂ ತಮ್ಮ ಗುಣದ ಗಡಿಯನ್ನು ಮೀರಿದರೆ ಭೂಮಿಯಲ್ಲಿ ಯಾವ ಭಾಷೆಯವನೂ ಬದುಕುಳಿಯಲಾರ. ಭಾರತದ ಅಖಂಡತೆಯನ್ನು ಭಾಷೆಯಿಂದ ಸ್ಫೋಟಿಸುವುದಾದರೆ, ಹೊರಗಿನ ಭಯೋತ್ಪಾದಕರನ್ನು ಮಾತ್ರ ಹಳಿಯುವುದು ಪ್ರಾಮಾಣಿಕತೆಯೇ?**

# ಗಣಿ ಮರೆಸಲು ಗೋ ಮಸೂದೆ ಮಂಡಿಸಲಾಯಿತೇ? (ಮುಖಪುಟದಿಂದ)

**ಒಂದು ವೇಳೆ ಸರಕಾರ ಹೇಳುವುದನ್ನೆಲ್ಲ ಪ್ರಶ್ನಾತೀತವಾಗಿ ಮಸೂದೆ ಮಾಡುವುದಾದರೆ ಶಾಸಕರೇಕೆ, ಪ್ರತಿಪಕ್ಷವೇಕೆ, ಚರ್ಚೆಗೆ ಎರಡು ಸದನಗಳೆಂಬ ಗೋಪುರವೇಕೆ ಎಂಬ ಪ್ರಶ್ನೆ ಯಾರಿಗೂ ಕಾಡಬಹುದು. ಕಲಹಗ್ರಸ್ತ ಪ್ರತಿಪಕ್ಷಗಳನ್ನು ಲೆಕ್ಕಿಸದಿದ್ದರೂ ಈ ನಾಡಿನಲ್ಲಿ ಎದ್ದಿರುವ ವಿರೋಧಿ ಧ್ವನಿಗಳಿಗಾದರೂ ಸ್ಪೀಕರ್ ಗೌರವ ಕೊಡಬಹುದಿತ್ತು. ಇಂದಾಗಿರುವುದೇನೆಂದರೆ, ಪ್ರತಿಪಕ್ಷಗಳು ಗಣಿ ಹೋರಾಟದತ್ತ ಗಮನ ಹರಿಸಿದ ಸಂದರ್ಭವನ್ನು ಸಾಧಿಸಿ ಗೋ ಮಸೂದೆಯನ್ನು ಅಂಗೀಕರಿಸಿ ರಾಜ್ಯಪಾಲರಿಗೆ ಕಳಿಸಿಕೊಡಲಾಯಿತು. ಚರ್ಚೆಯಿಲ್ಲದೆ ಸಂದು ಹೋದ ಈ ಕೃತ್ಯದ ಹಿಂದೆ ಸದನಗಳ ಅಗೌರವವೊಂದೇ ಅಲ್ಲ, ರಾಜ್ಯಪಾಲರು ಅಂಗೀಕರಿಸದೆ ಅದನ್ನು ರಾಷ್ಟ್ರಪತಿಗಳಿಗೆ ಕಳಿಸಿಕೊಟ್ಟರೆ ಅದನ್ನು ಇಶ್ಯೂ ಮಾಡಿಕೊಂಡು ಕೋಮು ಸಾಮರಸ್ಯಕ್ಕೂ ಹಾನಿಯೊಡ್ಡುವ ಸಂಚೂ ಅಡಗಿದೆ. ಗಣಿ ಕೋಲಾಹಲವನ್ನು ದಮನಿಸುವುದಕ್ಕಾಗಿ ಈ ಮಸೂದೆಯನ್ನು ಒಂದು ಅಸ್ತ್ರವಾಗಿಸುವ ಹುನ್ನಾರವೂ ಎದ್ದು ಕಾಣಿಸುತ್ತಿದೆ.**

**ಗೋವನ್ನು ಹಿಡಿದು ಅದಕ್ಕೊಂದು ಪವಿತ್ರವಾದ ಹೆಸರಿಟ್ಟು, ಮೈಸೂರು ಚಲೋ, ಬೆಂಗಳೂರು ಚಲೋ, ಮಂಗಳೂರು ಚಲೋ ಎಂದು ಹೊರಟು ಬಿಟ್ಟರೆ ಗಣಿ ವಿಚಾರವನ್ನು ಮರೆತು ಈ ಮಸೂದೆಯ ಹಿಂದೆ ಜನ ಸೇರಬಹುದು. ಮಸೂದೆಗೆ ರಾಜ್ಯಪರ ಅಂಕಿತ ಬಿದ್ದು ಜಾರಿಗೆ ಅವಕಾಶವಾದರೆ ಗೋಭಕ್ಷಕರೆಂದು ನಿರ್ದಿಷ್ಟ ವರ್ಗದ ಜನರ ಮನೆ ಮನೆಗಳಿಗೂ ದಾಳಿ ನಡೆಸಬಹುದು. ಕನಿಷ್ಠ ಅವರ ಮನೆ ಮುಂದೆ ದನದ ತಲೆ ತಂದು ಹಾಕಿ ಸಿಕ್ಕಿಸಿ ಹಾಕಬಹುದು. ಅದರಿಂದ ಕೋಮು ಉದ್ವಿಘ್ನತೆ ಉದ್ಭವಿಸಿದರೆ ಗಣಿ ವಿಚಾರವನ್ನು ಜನರು ಮರೆತು ಬಿಡುತ್ತಾರೆ.**

**ಯಾವುದೋ ವಿಷಯದ ಮೇಲೆ ಸದನದಲ್ಲಿ ಕಲಹಗಳಾಗುತ್ತಿದ್ದರೆ ಇನ್ಯಾವುದೋ ವಿಷಯಗಳನ್ನು ತಮ್ಮವರಿಂದ ಪಾಸು ಮಾಡಿಸಿಕೊಳ್ಳುವ ಸರಕಾರದ ಕ್ರಮವನ್ನು ಪ್ರಜಾಪ್ರಭುತ್ವ ವಿರೋಧಿ ಎನ್ನಬೇಕಾಗುತ್ತದೆ. ಇದಕ್ಕೆ ಪೂರಕವಾಗಿ ನಿಂತು ಒಂದು ವರ್ಗದ ಆಹಾರದ ವಿರುದ್ಧ ಸೇಡು ತೀರಿಸುವುದಕ್ಕೆ ಅವಕಾಶ ಕೊಟ್ಟ ಸ್ಪೀಕರ್‌ರ ಕ್ರಮವನ್ನೂ ಕೂಡ ಜನಹಿತ ವಿರೋಧಿ ಎನ್ನಬೇಕಾಗುತ್ತದೆ. ಯಾಕೆಂದರೆ ಒಂದೆರಡು ದಿನಗಳಲ್ಲಿ ಆಗಲೇಬೇಕಾಗಿದೆ ಎಂಬಂತಹ ಯಾವ ವಿಧೇಯಕಗಳೂ ಮಂಡಿಸಲ್ಪಟ್ಟಿರಲಿಲ್ಲ. ಸರಕಾರದ ಯಂತ್ರ ಮುಂದೆ ಚಲಿಸಬೇಕು ಎಂಬ ನಿಟ್ಟಿಂದ ಸ್ಪೀಕರ್ ಇಂತಹ ಕ್ರಮಕ್ಕೆ ಆಸ್ಪದ ಕೊಟ್ಟಿದ್ದಾರೆಂದಾದರೆ ವಿವಾದಾಸ್ಪದ ಗೋವಿನ ಮಸೂದೆಯನ್ನು ಹೊರತುಪಡಿಸಿ ಮಂಡಿಸುವಂತೆ ಕೇಳಿಕೊಳ್ಳಬಹುದಾಗಿತ್ತು.**

**ಗೋಮಾಂಸ ನಿಷೇಧದಿಂದ ಅದನ್ನು ವೃತ್ತಿಯನ್ನಾಗಿ ಮಾಡಿಕೊಂಡಿರುವ 20 ಲಕ್ಷಕ್ಕೂ ಅಧಿಕ ಮಂದಿ ಬೀದಿಪಾಲಾಗುತ್ತಾರೆ. ಜಾನುವಾರು ಮಾರಾಟದ ಹತ್ತಾರು ಸಾವಿರ ಮಂದಿ ಅಂಗಡಿಗಳನ್ನು ಮುಚ್ಚಬೇಕಾಗುತ್ತದೆ. ಪ್ರತಿನಿತ್ಯ ಆರು ಸಾವಿರ ಕೋಟಿ ನಷ್ಟವಾಗುತ್ತದೆ. ವರ್ಷಕ್ಕೆ 26 ಲಕ್ಷ ಎತ್ತುಗಳು ನಿರುಪಯುಕ್ತವಾಗಿ ರೈತರಿಗೆ ಹೆಚ್ಚುವರಿ ಭಾರವಾಗಲಿದೆ. ಪ್ರತಿಪಕ್ಷಗಳ ಸದಸ್ಯರು ಸದನದಲ್ಲಿ ಮಾಂಸಾಹಾರ ಸೇವಿಸಿ ಸದನವನ್ನು ಅಪಮಾನಿಸಿದ್ದಾರೆನ್ನುವ ಯಡಿಯೂರಪ್ಪರು ಸದನದ ಜೀವಾಳವಾದ ಚರ್ಚೆಯಿಂದ ದೂರ ಇಟ್ಟು ತನ್ನ ಮಸೂದೆಗೆ ಅಂಗೀಕಾರ ಪಡೆಯುವ ಮೂಲಕ ಸದನದ ಆಶಯವನ್ನು ಕೆಡಿಸಿರುವುದೇಕೆ? ಈ ಮಸೂದೆಯ ವಿರುದ್ಧ ಎದ್ದ ಜನತಾ ಧ್ವನಿಯನ್ನು ಗೌರವಿಸಿ, ಚರ್ಚಿಸಬೇಕೆಂದು ಯಾಕೆ ಅವರಿಗೆ ಅನ್ನಿಸಿಲ್ಲ? ಗೋವಿನ ಮಾಂಸದಷ್ಟೇ ಅಗ್ಗದಲ್ಲಿ ಅವರು ಪ್ರಜೆಗಳಿಗೆ ಯಾವ ಮಾಂಸವನ್ನು ಒದಗಿಸುತ್ತಾರೆ? ಇದ್ಯಾವುದಕ್ಕೂ ಪರ್ಯಾಯವನ್ನು ಹೇಳದಿರುವ ಈ ಸರಕಾರದ ನೀತಿ ನಿರಂಕುಶದ್ದು, ಪ್ರತಿಭಟಿಸಬೇಕಾದ್ದು. ಮೇಲೆ ನೋಡಿ ಬೀಸಿದ ಕೊಡಲಿ ತನ್ನ ಕಾಲಿಗೆ ಬೀಳುವ ಸಾಧ್ಯತೆಯನ್ನೂ ಯಡಿಯೂರಪ್ಪ ಯೋಚಿಸಿಲ್ಲ. ಇದು ದುರಂತ...**

**Volume: 33, Issue: 19,** Printed & Published by **M. Sadullah** on behalf of Sanmarga Publication Trust, Printed at Comprint, Hidayath Centre, Beebi Alabi Road, Mangalore-575001
And Published at Hidayath Centre, Beebi Alabi Road, Mangalore-575001. Editor: **Abdul Kader Kukkila,** Chief Editor: **P. NOOR MUHAMMED**
Ph: 2422786. Fax: 91-0824-2426846. E-mail: **sanmargamatter@gmail.com** Website: **www.sanmarga.com** (Regd. with RNI No. 29903/78)